ಕರ್ನಾಟಕ ಉಚ್ಚ ನ್ಯಾಯಾಲಯ

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಬಿ. ವೀರಪ್ಪ

ಹೆಚ್. ಮುನಿರೆಡ್ಡಿ ವಿರುದ್ಧ-ಅಡ್ವಕೇಟ್ ಜನರಲ್, ಕರ್ನಾಟಕ ರಾಜ್ಯ ಮತ್ತು ಇತರರು*

ರಿಟ್ ಅರ್ಜಿಸಂಖ್ಯೆ: 18157/2013 (ಜಿಎಮ್-ಆರ್.ಇ.ಎಸ್), ದಿನಾಂಕ 18 ನೇ ಸೆಪ್ಟೆಂಬರ್, 2019.

ಆಜ್ಞೆ

ನ್ಯಾಯಮೂರ್ತಿ ಶ್ರೀ ಬಿ. ವೀರಪ್ಪ:

1. ಅರ್ಜಿದಾರರು, ಅನುಬಂಧ-ಆರ್ನಲ್ಲಿ ಕೋರಿರುವಂತೆ 2 ರಿಂದ 4 ರವರೆಗಿನ ಎದುರುದಾರರ ವಿರುದ್ಧ ಅಪರಾಧಿಕ ನಿಂದನಾ ವ್ಯವಹರಣೆಗಳನ್ನು ಪ್ರಾರಂಬಿಸುವುದಕ್ಕೆ ಅನುಮತಿ ನೀಡಲು ಅವಕಾಶ ನೀಡುವ ಮೂಲಕ ಅರ್ಜಿಸಂಖ್ಯೆ: 36/2012 ರ ಆಧಾರದ ಮೇಲೆ 1 ನೇ ಎದುರುದಾರರು ಹೊರಡಿಸಿದದಿನಾಂಕ: 14.12.2012 ರ ಆದೇಶವನ್ನು ರದ್ದುಗೊಳಿಸಲು ಸರ್ಷಿಯೋರರಿ ರಿಟ್ ಕೋರಿ ಪ್ರಸ್ತುತ ರಿಟ್ ಅರ್ಜಿಯನ್ನು ಸಲ್ಲಿಸಿದ್ದಾರೆ.

I.ಮೊಕದ್ದಮೆಯ ಸಂಗತಿಗಳು:

2. ಅರ್ಜಿದಾರನ ವಾದವೆಂದರೆ, ದೂರುದಾರನ ಸಂಬಂಧಿಕರಾಗಿರುವ 2 ರಿಂದ 4 ರವರೆಗಿನ ಎದುರುದಾರರು, ಬೆಂಗಳೂರು ಗ್ರಾಮೀಣ ಜಿಲ್ಲೆಯ ಆನೇಕಲ್ ತಾಲೂಕಿನ ಸರ್ಜಾಪುರ ಹೋಬಳಿಯ ಕೂಡ್ಲು ಗ್ರಾಮದಲ್ಲಿರುವ ಸರ್ವೆಸಂಖ್ಯೆ: 200/ 2 ನ್ನು ಹೊಂದಿರುವ ಸ್ವತ್ತನ್ನು ಲಪಟಾಯಿಸುವ ಸಲುವಾಗಿ, ದೂರುದಾರನ ವಿರುದ್ಧ ವಿವಿಧ ಕಾನೂನು ವ್ಯವಹರಣೆಗಳನ್ನು ಪ್ರಾರಂಭಿಸಿದ್ದು, ಸದರಿ ಸರ್ವೆ ಸಂಖ್ಯೆಯು ವಿವಿಧ ದಾವೆಗಳ ವಸ್ತುವಿಷಯವಾಗಿತ್ತು.2 ರಿಂದ 4 ರವರೆಗಿನ ಎದುರುದಾರರು ಸದರಿ ಜಮೀನಿನ ಭಾಗದ ಸಂಬಂಧದಲ್ಲಿ ಘೋಷಣೆಯನ್ನು ಪಡೆಯುವಲ್ಲಿ ಸಹ ಯಶಸ್ವಿಯಾಗಿದ್ದರು, ಅದರ ಮೇಲೆ, ಈ ನ್ಯಾಯಾಲಯವು ಆರ್.ಎಫ್.ಎ.ಸಂಖ್ಯೆ: 370/2000 ದಲ್ಲಿ, 2 ನೇ ಪ್ರತಿವಾದಿಯು ಯಾವುದೇ ರೀತಿಯಲ್ಲೂ ಹಕ್ಕು, ಸ್ವಾಮ್ಯ ಮತ್ತು ಹಿತಾಸಕ್ತಿಯನ್ನು ಹೊಂದಿಲ್ಲವೆಂದು ನಿರ್ಣಯಿಸಿತ್ತು.ಇದಲ್ಲದೆ ಅರ್ಜಿದಾರನ ವಾದವೆಂದರೆ, ಶ್ರೀ ಹೊಸರೆಡ್ಡಿಗರ ನಂಜಪ್ಪನ ಮರಣಾ ನಂತರ, ಆತನ ಮಕ್ಕಳಾದ ಶ್ರೀ ಕೆ. ಎನ್. ಓಬಳ ರೆಡ್ಡಿ ಮತ್ತು 2 ನೇ ಎದುರುದಾರ ಕೆ.ಎನ್. ಮುನಿಯಪ್ಪ ರೆಡ್ಡಿ ಇವರು,ದಿನಾಂಕ: 19.07.1972 ರಂದು ಕೂಡ್ಲು ಗ್ರಾಮದ ಸರ್ವೆಸಂಖ್ಯೆ: 200/ 2 ರಲ್ಲಿರುವ 37 ಗುಂಟೆಗಳಷ್ಟು ವಿಸ್ತೀರ್ಣದ ಜಮೀನು ಸೇರಿದಂತೆ, ಕೂಡು ಕುಟುಂಬದ ಎಲ್ಲಾ ಸ್ವತ್ತುಗಳ ಸಂಬಂಧದಲ್ಲಿ ವಿಭಜನೆ ಕಾರ ಕೈಗೊಂಡರು.ದಿನಾಂಕ: 26.06.1994 ರಂದು, 2 ನೇ ಎದುರುದಾರರು, ಶ್ರೀ ಮುನಿವೆಂಕಟಪ್ಪ ಎಂಬುವವರ ಮಾಲಿಕತ್ವದ ಕೂಡ್ಲು ಗ್ರಾಮದಲ್ಲಿರುವ 02 ಎಕರೆ 20 ಗುಂಟೆ ಅಳತೆಯ ಜಮೀನಿನ ಸಂಬಂಧದಲ್ಲಿ ವಿಭಜನೆಗಾಗಿ ಒ.ಎಸ್.ಸಂಖ್ಯೆ: 214/1994 ರಲ್ಲಿ ದಾವೆಯನ್ನು ಹೂಡಿದ್ದರು.ಸದರಿ ದಾವೆ ಇತ್ಯರ್ಥದಲ್ಲಿರುವಾಗ, 2 ನೇ ಎದುರುದಾರನು, ಪ್ರಸ್ತುತ ಅರ್ಜಿದಾರನ/ದೂರುದಾರನ ಹೆಸರಿಗೆ ಶ್ರೀ ಮುನಿವೆಂಕಟಪ್ಪನವರು ಬರೆದುಕೊಟ್ಟಿದ್ದದಿನಾಂಕ: 19.07.1972 ರ ಮತ್ತು 14.07.1993 ರ ಉಯಿಲುಗಳನ್ನು ರದ್ದುಗೊಳಿಸಲು ಕೋರಿ ದೂರುದಾರ/ಅರ್ಜಿದಾರ ಮತ್ತು ಶ್ರೀ ಕೆ.ಎನ್. ಓಬಳ ರೆಡ್ಡಿಯ ವಿರುದ್ಧ ಒ.ಎಸ್.ಸಂಖ್ಯೆ: 329/1996 ರಲ್ಲಿ ಮತ್ತೊಂದು ದಾವೆಯನ್ನು ಹೂಡಿದ್ದನು.ಮುಂದುವರಿದು ಅರ್ಜಿದಾರನ ವಾದವೆಂದರೆ, ವಿಚಾರಣಾ ನ್ಯಾಯಾಲಯದ ಮಾನ್ಯ ನ್ಯಾಯಾಧೀಶರು ಒ.ಎಸ್.ಸಂಖ್ಯೆ: 214/1994 ಮತ್ತು

329/1996 ರಲ್ಲಿನ ದಾವೆಗಳೆರಡನ್ನೂ ಸೇರಿಸಿ, ಅವುಗಳನ್ನುದಿನಾಂಕ: 18.04.1996 ರ ಸಾಮಾನ್ಯ ತೀರ್ಪಿನ ಮತ್ತು ಡಿಕ್ಕಿಯ ಮೂಲಕ ವಜಾಗೊಳಿಸಿದ್ದರು.ಸದರಿ ತೀರ್ಪು ಮತ್ತು ಡಿಕ್ರಿಯಿಂದ ಬಾಧಿತರಾಗಿ, 2 ನೇ ಪ್ರತಿವಾದಿಯು, ಈ ನ್ಯಾಯಾಲಯದ ಮುಂದೆ ಆರ್.ಎಫ್.ಎ.ಸಂಖ್ಯೆ: 370/2000 ಮತ್ತು ಆರ್.ಎಫ್.ಎ.ಸಂಖ್ಯೆ: 408/2000 ಗಳಲ್ಲಿ ಮೇಲ್ಮನವಿಗಳನ್ನು ಸಲ್ಲಿಸಿದ್ದನು.

3. ಮೇಲ್ಮನವಿಗಳು ಇತ್ಯರ್ಥದಲ್ಲಿರುವಾಗ,ದಿನಾಂಕ: 04.08.2003 ರಂದು, 2 ರಿಂದ 4 ರವರೆಗಿನ ಎದುರುದಾರರು, ಕೂಡ್ಲು ಗ್ರಾಮದ ಸರ್ವೆಸಂಖ್ಯೆ: 200/ 2 ರಲ್ಲಿನ ಜಮೀನು ಸೇರಿದಂತೆ ಕೂಡು ಕುಟುಂಬದ ಸ್ವತ್ತುಗಳನ್ನು ವಿಭಜಿಸಿ ವಿಭಾಗವನ್ನು ಮಾಡಿಕೊಂಡಿದ್ದರು.ದಿನಾಂಕ: 06.04.2009 ರಂದು, ಎರಡೂ ಪಕ್ಷಕಾರರ ವಾದಗಳನ್ನು ಆಲಿಸಿದ ನಂತರ, ಈ ನ್ಯಾಯಾಲಯವು, ಸಾಮಾನ್ಯ ಆದೇಶ ಮತ್ತು ಡಿಕ್ಕಿ ಮೂಲಕ ಎರಡೂ ನಿಯತ ಪ್ರಥಮ ಅಪೀಲುಗಳನ್ನು ರದ್ದುಗೊಳಿಸಿದ್ದು, ಅದು ಅಂತಿಮತೆಯನ್ನು ತಲುಪಿದೆ.ವಿಷಯ ಹೀಗಿರುವಾಗ, 3 ನೇ ಪ್ರತಿವಾದಿಯ ಮಗಳಾದ ಶ್ರೀಮತಿ ಕೆ.ಎಮ್. ಧನಲಕ್ಷ್ಮಿಯೊಂದಿಗೆ 3 ರಿಂದ 4 ನೇ ಎದುರುದಾರರು, ವಿಭಜನೆ ಪತ್ರದ ಪ್ರಕಾರ ತಮ್ಮ ಮಾಲಿಕತ್ವವನ್ನು ಘೋಸಿಸುವಂತೆ ಕೋರಿದಿನಾಂಕ: 19.07.2009 ರಂದು ಒ.ಎಸ್.ಸಂಖ್ಯೆ: 1103/2009 ರಲ್ಲಿ, ಸರ್ವೆ ಸಂಖ್ಯೆ 200/ 2 ರಲ್ಲಿನ ಮುಖ್ಯ ಸಂಗತಿಗಳನ್ನು ಮತ್ತು ಹಿಂದಿನ ವ್ಯವಹರಣೆಗಳನ್ನು ಮರೆಮಾಚಿ ದಾವೆಯನ್ನು ಹೂಡಿದ್ದಾರೆ.ಒ.ಎಸ್.ಸಂಖ್ಯೆ: 1103/2009 ರಲ್ಲಿ ದಾವೆ ಇತ್ಯರ್ಥದಲ್ಲಿರುವಾಗ, 3 ರಿಂದ 4 ನೇ ಪ್ರತಿವಾದಿಗಳು,ದಿನಾಂಕ: 28.04.1965 ರ ದತ್ತಕ ಪತ್ರ, 19.07.1972 ರ ಮತ್ತು 14.07.1993 ರ ಉಯಿಲುಗಳು ಹಾಗೂ 2010 ನೇ ಸಾಲಿನಲ್ಲಿನ ಹಲವು ಇತರ ಪರಿಹಾರಗಳು ತಮಗೆ ಬಂಧನಕಾರಿಯಲ್ಲವೆಂದು ಘೋಷಿಸಲು ಕೋರಿ ಅರ್ಜಿದಾರನ/ದೂರುದಾರನ ವಿರುದ್ಧ ಒ.ಎಸ್.ಸಂಖ್ಯೆ: 327/2010 ನ್ನು ಸಲ್ಲಿಸಿದ್ದಾರೆ.3 ನೇ ಮತ್ತು 4 ನೇ ಪ್ರತಿವಾದಿಗಳು ಸಲ್ಲಿಸಿದ ಒ.ಎಸ್.ಸಂಖ್ಯೆ: 1103/2009 ರಲ್ಲಿನ ದಾವೆಯುದಿನಾಂಕ: 30.08.2011 ರಂದು ಡಿಕ್ರಿಯಾಗಿದೆ.2 ನೇ ಎದುರುದಾರ-ಕೆ.ಎನ್.ಮುನಿಯಪ್ಪ ರೆಡ್ಡಿಯು, ಆರ್.ಎಫ್.ಎ.ಸಂಖ್ಯೆ: 1986/2011 ನ್ನು ಸಲ್ಲಿಸಿದ್ದು, ಸದರಿ ಮೇಲ್ಮನವಿಯು ಸಹದಿನಾಂಕ: 06.08.2012 ರಂದು ವಜಾಗೊಂಡಿದೆ.ಆದುದರಿಂದ, ಅರ್ಜಿದಾರನ ಪ್ರಕಾರ, 2 ರಿಂದ 4 ನೇ ಪ್ರತಿವಾದಿಗಳು ಅಪರಾಧಿಕ ಸ್ವರೂಪದ್ದಾಗಿರುವ ನ್ಯಾಯಾಲಯ ನಿಂದನೆ ಮಾಡಿದ್ದಾರೆ.ಆದುದರಿಂದ, ನಿಂದನಾ ವ್ಯವಹರಣೆಗಳನ್ನು ಪ್ರಾರಂಭಿಸಲು ಸಮ್ಮತಿ ಕೋರಿ ನ್ಯಾಯಾಲಯಗಳ ನಿಂದನೆ ಅಧಿನಿಯಮ, 1971 ರ (ಇದರಲ್ಲಿ ಇನ್ನು ಮುಂದೆ ಸಂಕ್ಷಿಪ್ತವಾಗಿ ' ಅಧಿನಿಯಮ ' ಎಂದು ಉಲ್ಲೇಖಿಸಲಾಗುವುದು) 15 ( 1) (ಬಿ) ಪ್ರಕರಣದ ಉಪಬಂಧಗಳ ಮೇರೆಗೆ ಅರ್ಜಿಯನ್ನು ಸಲ್ಲಿಸುವ ಮೂಲಕ 1 ನೇ ಎದುರುದಾರರನ್ನು ಅವರು ಸಂಪರ್ಕಿಸಿದ್ದಾರೆ.ಅರ್ಜಿದಾರರ ಮುಂದಿನ ವಾದವೆಂದರೆ, 1 ನೇ ಎದುರುದಾರರು ಗಮನ ಹರಿಸದೆ, ಸಮ್ಮತಿಯನ್ನು ನೀಡಲು ನಿರಾಕರಿಸಿ ಪ್ರಶ್ನಿತ ಆದೇಶವನ್ನು ಹೊರಡಿಸಲು ಕ್ರಮ ಜರುಗಿಸಿದ್ದಾರೆ.ಆದ್ದರಿಂದ, ಪ್ರಸ್ತುತ ರಿಟ್ ಅರ್ಜಿಯನ್ನು ಸಲ್ಲಿಸಲಾಗಿದೆ.

I 2 ನೇ ಎದುರುದಾರನ ಪರವಾಗಿ ಸಲ್ಲಿಸಿದ ಆಕ್ಷೇಪಣೆಗಳು:

4. 2 ನೇ ಎದುರುದಾರನು ಮುಖ್ಯ ರಿಟ್ ಅರ್ಜಿಗೆ ಆಕ್ಷೇಪಣೆಗಳನ್ನು ಸಲ್ಲಿಸಿ,ದಿನಾಂಕ: 14.12.2012 ರ ಆದೇಶದ ಮೂಲಕ ಅರ್ಜಿಸಂಖ್ಯೆ: 36/2012 ರಲ್ಲಿ ಮಾನ್ಯ ಅಡ್ವಕೇಟ್ ಜನರಲ್ರು ಎದುರುದಾರರ ವಿರುದ್ಧ ನ್ಯಾಯಾಲಯದ ಅಪರಾಧಿಕ ನಿಂದನೆ ವ್ಯವಹರಣೆಗಳನ್ನು ಪ್ರಾರಂಭಿಸಲು ಸಮ್ಮತಿ ನೀಡಲು ನಿರಾಕರಿಸಿದ ನಂತರ, ಅರ್ಜಿದಾರನು, ಎದುರುದಾರರ ವಿರುದ್ಧ ನ್ಯಾಯಾಲಯದ ಅಪರಾಧಿಕ ನಿಂದನೆ ವ್ಯವಹರಣೆಗಳನ್ನು ಪ್ರಾರಂಭಿಸಲು, ಮೊದಲು ಈ ನ್ಯಾಯಾಲಯದ ವಿಭಾಗೀಯ ಪೀಠದ ಮುಂದೆ ಅಪರಾಧಿಕ ನಿಂದನಾ

ಅರ್ಜಿಸಂಖ್ಯೆ: 02/2013 ನ್ನು ಸಲ್ಲಿಸಿದ್ದನು ಎಂದು ವಾದಿಸಿದ್ದಾನೆ.ದಿನಾಂಕ: 12.03.2013 ರ ಈ ಆದೇಶದ ಮೂಲಕ, ಈ ನ್ಯಾಯಾಲಯದ ವಿಭಾಗೀಯ ಪೀಠವು, ಎದುರುದಾರರ ವಿರುದ್ಧ ಅಪರಾಧಿಕ ನಿಂದನೆಯ ಸಂಜ್ಞೆಯತೆಯನ್ನು ತೆಗೆದುಕೊಳ್ಳುವ ವಿಷಯವನ್ನು ಪರಿಗಣಿಸುವುದಕ್ಕಾಗಿ, ವಿಷಯಕ್ಕೆ ಸಂಬಂಧಿಸಿದ ಮುಂದಿನ ಆದೇಶಗಳಿಗಾಗಿ ಆಡಳಿತದ ಪರವಾಗಿರುವ ಎಲ್ಲಾ ದಾಖಲೆಗಳನ್ನು ಮಾನ್ಯ ಮುಖ್ಯ ನ್ಯಾಯಾಧೀಶರ ಮುಂದೆ ಮಂಡಿಸಲು ಕಚೇರಿಗೆ ನಿರ್ದೇಶಿಸಿದರು.ಅದರಂತೆ, ರಿಜಿಸ್ಟ್ರಿಯವರು, ಮುಂದಿನ ಆದೇಶಗಳಿಗಾಗಿ ಮಾನ್ಯ ಮುಖ್ಯ ನ್ಯಾಯಾಧೀಶರ ಮುಂದೆ ಸಿಆರ್ಎಲ್.ಸಿ.ಸಿ.ಸಿ.ಸ ಂ ಖ್ಯೆ:02/2013 ರ ಎಲ್ಲಾ ದಾಖಲೆಗಳನ್ನು ಮ ಂ ಡಿಸಿದರು.ದಿನಾಂಕ: 25.03.2013 ರಂದು, ಆಡಳಿತದ ಪರವಾಗಿ ಮಾನ್ಯ ಮುಖ್ಯ ನ್ಯಾಯಾಧೀಶರು, ಮಂಡಿಸಲಾದ ದಾಖಲೆಗಳಲ್ಲಿದ್ದ ಎಲ್ಲಾ ಸಾಕ್ಷ್ಯವನ್ನು ಪರಿಶೀಲಿಸಿದ ನಂತರ, ಎದುರುದಾರರ ವಿರುದ್ಧ ಇದ್ದ ಅಪರಾಧಿಕ ನಿಂದನೆಯ ಸಂಜ್ಞೆಯತೆಯನ್ನು ತೆಗೆದುಕೊಳ್ಳುವ ಸಂಬಂಧದಲ್ಲಿ ಆದೇಶ ಹೊರಡಿಸುವುದಕ್ಕೆ ನಿರಾಕರಿಸಿದರು.ಮಾನ್ಯ ಮುಖ್ಯ ನ್ಯಾಯಾಧೀಶರು ಸದರಿ ಆದೇಶವನ್ನು ಹೊರಡಿಸಿದಾಗ್ಯೂ, ಅರ್ಜಿದಾರನುದಿನಾಂಕ: 14.12.2012 ರ ಆದೇಶವನ್ನು ಪ್ರಶ್ನಿಸಿ ಪ್ರಸ್ತುತ ರಿಟ್ ಅರ್ಜಿಯನ್ನು ಸಲ್ಲಿಸಿದ್ದು, ಅದು ಸಮರ್ಥನೀಯವಲ್ಲ ಮತ್ತು ವಜಾಗೊಳ್ಳುವುದಕ್ಕೆ ಯೋಗ್ಯವಾದುದಾಗಿದೆ.

5. 1 ನೇ ಪ್ರತಿವಾದಿ-ಮಾನ್ಯ ಅಡ್ವಕೇಟ್ ಜನರಲ್ರು ಆಕ್ಷೇಪಣೆಗಳ ಹೇಳಿಕೆಯನ್ನು ಸಲ್ಲಿಸಿರುವುದಿಲ್ಲ.ದಿನಾಂಕ: 05.08.2014 ರಂದು, 3 ನೇ ಮತ್ತು 4 ನೇ ಎದುರುದಾರರ ಪರ ಮಾನ್ಯ ನ್ಯಾಯವಾದಿ ಶ್ರೀ ಸಂಕೇತ್ ಎಮ್. ಏಣಗಿಯವರು, 3 ನೇ ಮತ್ತು 4 ನೇ ಎದುರುದಾರರು ಈ ರಿಟ್ ಅರ್ಜಿಗೆ ಪ್ರತ್ಯರ್ಜಿಯನ್ನು ಸಲ್ಲಿಸುವ ಅಗತ್ಯವೇ ಇರಲಿಲ್ಲವೆಂದು ನಿವೇದಿಸಿಕೊಂಡಿದ್ದಾರೆ.ಸದರಿ ನಿವೇದನೆಯನ್ನು ದಾಖಲೆಯಲ್ಲಿ ಮಂಡಿಸಲಾಗಿದೆ.

6. ದಾವೆಯ ಪಕ್ಷಕಾರರ ಪರ ಮಾನ್ಯ ನ್ಯಾಯವಾದಿಗಳ ವಾದಗಳನ್ನು ನಾನು ಆಲಿಸಿದ್ದೇನೆ.

III.ಪಕ್ಷಕಾರರ ಪರ ಮಾನ್ಯ ನ್ಯಾಯವಾದಿಗಳು ಮಂಡಿಸಿದ ವಾದಗಳು:

7. ಅರ್ಜಿದಾರರ ಪರ ಮಾನ್ಯ ನ್ಯಾಯವಾದಿ ಶ್ರೀ ಸಿ.ಎಮ್. ನಾಗಭೂಷಣರವರ ವಾದವೆಂದರೆ, 1 ನೇ ಪ್ರತಿವಾದಿಗಳು ಹೊರಡಿಸಿದ ಪ್ರಶ್ನೆತ ಆದೇಶವು ಸಕಾರಣ ಆದೇಶವಾಗಿಲ್ಲದೆ ಇರುವುದರಿಂದ ಮತ್ತು ಅದು ಸವಿವರವಾದ ಆದೇಶದ ಆಧಾರದ ಮೇಲೆ ಹೊರಡಿಸಿದ ಹಿಂಬರಹವೆಂಬಂತೆ ಕಂಡುಬರುವುದರಿಂದ, ಸದರಿ ಆದೇಶವನ್ನು ಈ ನ್ಯಾಯಾಲಯವು ರದ್ದುಗೊಳಿಸಬೇಕಾಗುತ್ತದೆ.ಇದಲ್ಲದೆ ಅವರು, 1 ನೇ ಪ್ರತಿವಾದಿಗಳು ಹೊರಡಿಸಿದ ಪ್ರಶ್ನಿತ ಆದೇಶವು, ವಿಜಯ ಬ್ಯಾಂಕ್ ನೌಕರರ ವಸತಿ ಸಹಕಾರ ಸಂಘ ನಿಯಮಿತ ವಿರುದ್ಧ ಮುನೀರಪ್ಪ ' ಮೊಕದ್ದಮೆಯಲ್ಲಿ ಈ ನ್ಯಾಯಾಲಯದ ವಿಭಾಗೀಯ ಪೀಠವು ಅಭಿಪ್ರಾಯಪಟ್ಟಿರುವಂತೆ 2 ರಿಂದ 4 ರವರೆಗಿನ ಎದುರುದಾರರು ಹೇಗೆ ಕಾನೂನಿನ ಪ್ರಕ್ರಿಯೆಯನ್ನು ದುರುಪಯೋಗಪಡಿಸಿಕೊಳ್ಳುವ ಮೂಲಕ ನಿಂದನೆ ಮಾಡಿದ್ದಾರೆ ಎಂಬ ವಿವರವನ್ನು ಗಮನಕ್ಕೆ ತೆಗೆದುಕೊಳ್ಳದೆ ಮಾಡಿದ ಆದೇಶವಾಗಿದೆ ಎಂದು ವಾದಿಸಿದ್ದಾರೆ.

8. ಇದಲ್ಲದೆ ಮಾನ್ಯ ನ್ಯಾಯವಾದಿಗಳ ವಾದವೆಂದರೆ, 2 ರಿಂದ 4 ರವರೆಗಿನ ಎದುರುದಾರುದಾರರು ಒ.ಎಸ್.ಸಂಖ್ಯೆ: 1103/2009 ರಲ್ಲಿನ ದಾವೆಯ ವಿಷಯಕ್ಕೆ ಒಳಪಟ್ಟಿದ್ದ ಆರ್.ಎಫ್.ಎ.ಸಂಖ್ಯೆ: 370/2000 ಮತ್ತು 408/2000 ಗಳಲ್ಲಿ ಈ ನ್ಯಾಯಾಲಯವು ಈಗಾಗಲೇ ನ್ಯಾಯ ನಿರ್ಣಯಿಸಿದಂಥ ಮತ್ತು ನಿರ್ಣಯಕ್ಕೆ ಬಂದಿರುವಂಥ ಸಂಗತಿಗಳ ಮತ್ತು ಹಕ್ಕಿನ ಬಗ್ಗೆ, ಹಾಗೂ ಸದರಿ ದಾವೆಯು 2 ನೇ ಎದುರುದಾರನ ವಿರುದ್ಧ

ಡಿಕ್ಕಿಗೊಳಗಾಗಿದೆ ಎಂಬ ಸಂಪೂರ್ಣ ಅರಿವನ್ನು ಹೊಂದಿದ ನಂತರವೂ ಅದರ ಯಾವುದೇ ಉಲ್ಲೇಖವನ್ನು ಮಾಡಿರುವುದಿಲ್ಲ.ಇದರಿಂದ ಬಾಧಿತರಾಗಿ 1 ನೇ ಪ್ರತಿವಾದಿಯು ಆರ್.ಎಫ್.ಎ.ಸಂಖ್ಯೆ: 1986/2011 ನ್ನು ಹೂಡಿದ್ದು, 2 ರಿಂದ 4 ರವರೆಗಿನ ಎದುರುದಾರರು, ಸದರಿ ಸಂಗತಿಯನ್ನು ಹಾಗೂ ನ್ಯಾಯಿಕ ಪ್ರಕ್ರಿಯೆಗಳನ್ನು ಮರೆಮಾಚಿ ವಿಚಾರಣಾ ನ್ಯಾಯಾಲಯದ ಮುಂದೆ, ಅಷ್ಟೇ ಅಲ್ಲದೆ ಆರ್.ಎಫ್.ಎ.ಸಂಖ್ಯೆ: 1986/2011 ರಲ್ಲಿ ಈ ನ್ಯಾಯಾಲಯದ ಮುಂದೆ ಸರಿ ಸುಮಾರು ಎರಡು ದಶಕಗಳ ಕಾಲ ವಿಷಯವನ್ನು ಮುಂದುವರಿಸುತ್ತಾ ಬಂದಿದ್ದಾರೆ.

9. ಇದಲ್ಲದೆ ಅವರು, ಮೊದಲೇ ದಾವೆಗಳನ್ನು ಹೂಡಿರುವುದನ್ನು ಅಥವಾ ದಾವೆಗಳು ಇತ್ಯರ್ಥದಲ್ಲಿರುವುದನ್ನು ಹೇಳದೆ ಹಲವಾರು ದಾವೆಗಳನ್ನು ಹೂಡುವುದು, ನ್ಯಾಯಿಕ ವ್ಯವಹರಣೆಗಳ ಯಥಾಕ್ರಮಕ್ಕೆ ಅಥವಾ ಕ್ರಮಬದ್ಧ ನ್ಯಾಯ ಪರಿಪಾಲನೆಗೆ ಅಡ್ಡಿಪಡಿಸಲು ಉದ್ದೇಶಿಸಿ ನ್ಯಾಯಾಲಯದ ಪ್ರಕ್ರಿಯೆಯನ್ನು ದುರುಪಯೋಗ ಪಡಿಸಿಕೊಳ್ಳುವುದು ನ್ಯಾಯಾಂಗ ನಿಂದನೆಗೆ ಸಮನಾಗುತ್ತದೆ ಎಂದು ಆರ್. ಸಡಗೋಪನ್ ವಿರುದ್ಧ ಶ್ರೀ ಕೆ. ರಾಜಯ್ಯ ಮೊಕದ್ದಮೆಯಲ್ಲಿ ಈ ನ್ಯಾಯಾಲಯವು ವಿಧಿಸಿದ ನಿಯಮವನ್ನು ಪರಿಗಣನೆಗೆ ತೆಗೆದುಕೊಳ್ಳದೆ, 1 ನೇ ಎದುರುದಾರರು, ಪ್ರಶ್ನಿತ ಆದೇಶವನ್ನು ಹೊರಡಿಸಿರುವುದು, ಬಾಧಿತ ಪಕ್ಷಕಾರನಿಗೆ ಕಾನೂನು ಅಭಿಪ್ರಾಯ ನೀಡಿದಂತಾಗುತ್ತದೆಯೇ ಹೊರತು, ಅಧಿನಿಯಮದ 15 ( 1) (ಬಿ) ಪ್ರಕರಣದ ಉಪಬಂಧಗಳನ್ನು ಪದ್ಯಾಲೋಚಿಸಿದಂತಾಗುವುದಿಲ್ಲ ಎಂದು ವಾದಿಸಿದ್ದಾರೆ.ಇದಲ್ಲದೆ ಅವರು, 1 ನೇ ಎದುರುದಾರರು ಹೊರಡಿಸಿದ ಆದೇಶದ ಓದುವಿಕೆ ಮಾತ್ರದಿಂದಲೇ, ಅದು ಕಾನೂನುಬಾಹಿರ, ನಿರಂಕುಶ ಮತ್ತು ಅತಾರ್ಕಿಕ ಹಾಗೂ ನಿಶ್ಚಯವಾಗಿಯೂ ದಾಖಲೆಗಳನ್ನು ಪರಿಗಣಿಸಿರುವುದಿಲ್ಲ ಎಂಬುದನ್ನು ಸ್ಪಷ್ಟವಾಗಿ ಸೂಚಿಸುತ್ತದೆ.ಅದಲ್ಲದೆ ಸಮ್ಮತಿಯನ್ನು ನಿರಾಕರಿಸುವುದಕ್ಕೆ ಯಾವ ಕಾರಣಗಳನ್ನೂ ನೀಡದೆ, ಅಸಂಗತ ಕಾರಣಗಳನ್ನಾಧರಿಸಿ ಪ್ರಶ್ನಿತ ಆದೇಶವನ್ನು ಹೊರಡಿಸಲಾಗಿದೆ ಎಂಬುದು ಸ್ಪಷ್ಟವಾಗುತ್ತದೆ.ಆದ್ದರಿಂದ, ಪ್ರಶ್ನಿತ ಆದೇಶವನ್ನು ಸಮರ್ಥಿಸಲಾಗುವುದಿಲ್ಲ ಎಂದು ವಾದಿಸಿರುವರು.ಇದಲ್ಲದೆ ಅವರು, 1 ನೇ ಎದುರುದಾರರು ಅಸಂಗತ ಕಾರಣಗಳನ್ನಾಧರಿಸಿ ಅರ್ಜಿಯನ್ನು ತಳ್ಳಿ ಹಾಕಿದ್ದಾರೆ; ಆದುದರಿಂದ, ಅದನ್ನು ಸಮರ್ಥಿಸಲಾಗುವುದಿಲ್ಲವೆಂದು ವಾದಿಸಿದ್ದಾರೆ.

10. ಇದಲ್ಲದೆ ಅವರು, ಪಿ.ಎನ್. ದುಡಾ -ವಿರುದ್ಧ ಪಿ. ಶಿವಶಂಕರ್ ಮತ್ತು ಇತರರು ಹಾಗೂ ಬಾಳ್ ಠಾಕ್ರೆ -ವಿರುದ್ಧ-ಹರೀಶ್ ಪಿಂಪಲ್ಖುಟೆ ಮತ್ತು ಇನ್ನೊಬ್ಬರು ಮೊಕದ್ದಮೆಗಳಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಪ್ರಾಸ್ತಾವಿಕ ಮಾತುಗಳಲ್ಲಿ ಪದ್ಯಾಲೋಚಿಸಿದಂತೆ, ಮುಖ್ಯವಾಗಿ ಅರ್ಜಿದಾರನು ಮಾನ್ಯ ಅಡ್ವಕೇಟ್ ಜನರಲ್ರವರಿಂದ ಸಮ್ಮತಿ ಪಡೆದಿರಲಿಲ್ಲವೆಂಬ ಕಾರಣದ ಮೇಲೆ ಈ ನ್ಯಾಯಾಲಯದ ವಿಭಾಗೀಯ ಪೀಠವು ಸಿಆರ್ಎಲ್, ಸಿಸಿಸಿಸಂಖ್ಯೆ: 2/2013 ನ್ನು ವಿಲೇ ಮಾಡಿದೆ ಮತ್ತು ರಿಜಿಸ್ಟ್ರಾರ್ ಜನರಲ್ರವರು ನೀಡಿದ ಸೂಚನೆಯು, ಮೇಲೆ ಹೇಳಿದ ತೀರ್ಪುಗಳ ಹಿನ್ನೆಲೆಯಲ್ಲಿ, ಮಾನ್ಯ ಮುಖ್ಯ ನ್ಯಾಯಾಧೀಶರು ಆಡಳಿತದ ಕಡೆಯಿಂದದಿನಾಂಕ: 25.03.2013 ರಂದು ಅಪರಾಧಿಕ ನಿಂದನೆಯ ಸ್ವಯಂಪ್ರೇರಿತ ಸಂಜ್ಞೇಯತೆಯನ್ನು ತೆಗೆದುಕೊಳ್ಳಲು ನಿರಾಕರಿಸಿದರು ಹಾಗೂ ಅಧಿನಿಯಮದ 15 ( 1) (ಬಿ) ಪ್ರಕರಣದ ಅಡಿಯಲ್ಲಿನ ಅಧಿಕಾರಗಳನ್ನು ಚಲಾಯಿಸಿ 1 ನೇ ಪ್ರತಿವಾದಿಗಳು ಹೊರಡಿಸಿದ ಪ್ರಶ್ನಿತ ಆದೇಶವನ್ನು ಪ್ರಶ್ನಿಸಲು ಅರ್ಜಿದಾರನ ದಾರಿಗೆ ಅದು ಅಡ್ಡಬರುವುದಿಲ್ಲ ಎಂಬ ಅರ್ಥವನ್ನು ಹೊಂದಿತ್ತೆಂದು ವಾದಿಸಿದ್ದಾರೆ.ಆದುದರಿಂದ, ರಿಟ್ ಅರ್ಜಿಯನ್ನು ಪುರಸ್ಕರಿಸಲು ಅವರು ಕೋರಿರುವರು.

11. ತಮ್ಮ ವಾದಕ್ಕೆ ಸಮರ್ಥನೆಯಾಗಿ ಮಾನ್ಯ ನ್ಯಾಯವಾದಿಗಳು, ಮಾನ್ಯ ಸರ್ವೋಚ್ಚ ನ್ಯಾಯಾಲಯದ ಈ ಮುಂದಿನ ತೀರ್ಪುಗಳನ್ನವಲಂಬಿಸಿದ್ದಾರೆ:

1. ರತನ್ ಚಂದ್ರ ಶರ್ಮ ಮತ್ತು ಇನ್ನೊಬ್ಬರು –ವಿರುದ್ಧ-ಕು.ಶೀತಲ್ ಶರ್ಮ ಮತ್ತು ಇತರರು 19 ನೇ ಮತ್ತು 20 ನೇ ಕಂಡಿಕೆಗಳು;

2. ಬಾಳ್ ಠಾಕ್ರೆ -ವಿರುದ್ಧ-ಹರೀಶ್ ಪಿಂಪಲ್ಖುಟೆ ಮತ್ತು ಇನ್ನೊಬ್ಬರು (ಮೇಲನಂತೆ)-25 ನೇ ಕಂಡಿಕೆ;

3. ದಿ ಸೀಮನ್ಸ್ ಇಂಜಿನಿಯರಿಂಗ್ ಅಂಡ್ ಮ್ಯಾನುಫ್ಯಾಕ್ಚರಿಂಗ್ ಕಂಪನಿ ನ ಆಫ್ ಇಂಡಿಯಾ ಅಮಿಟೆಡ್ -ವಿರುದ್ಧ ಭಾರತ ಒಕ್ಕೂಟ ಮತ್ತು ಇನ್ನೊಬ್ಬರು 6 5- 6 ನೇ ಕಂಡಿಕೆ;

4. ಕಂಪ್ಯೂಮರ್ ಆಕ್ಷನ್ ಗ್ರೂಪ್ ಮತ್ತು ಇನ್ನೊಬ್ಬರು ವಿರುದ್ಧ ತಮಿಳುನಾಡು ರಾಜ್ಯ ಮತ್ತು ಇತರರು-30 ನೇ ಮತ್ತು 32 ನೇ ಕಂಡಿಕೆಗಳು;

5. ಕಾನ್ಸಿಯನ್ಸಸ್ ಗ್ರೂಪ್ –ವಿರುದ್ಧ ಮೊಹಮದ್ ಯೂನಸ್ ಮತ್ತು ಇತರರು 4 ನೇ ಕಂಡಿಕೆ;

6. ಪಿ.ಎನ್. ದುಡಾ ವಿರುದ್ಧ ಪಿ. ಶಿವ ಶಂಕರ್ ಮತ್ತು ಇತರರು; (ಮೇಲಿನಂತೆ)

7. ಎನ್. ವೆಂಕಟರಮಣಪ್ಪ ವಿರುದ್ಧ-ಡಿ.ಕೆ.ನಾಯ್ಕರ್ ಮತ್ತು ಇನ್ನೊಬ್ಬರು.

12. ಇದಕ್ಕೆ ತದ್ವಿರುದ್ಧವಾಗಿ, 3 ನೇ ಮತ್ತು 4 ನೇ ಎದುರುದಾರರ ಪರವಾಗಿ ಹಾಜರಾದ ಮಾನ್ಯ ನ್ಯಾಯವಾದಿ ಶ್ರೀ ಸಂಕೇತ್ ಎಮ್. ಏಣಗಿಯವರು, ಮೊಕದ್ದಮೆಯ ಸಂಗತಿಗಳನ್ನು ಮತ್ತು ಸಂದರ್ಭಗಳನ್ನು, ಮೇಲೆ ಹೇಳಿದ ಪಿ.ಎನ್. ದುಡಾ –ವಿರುದ್ಧ-ಶಿವ ಶಂಕರ್ ಮತ್ತು ಇತರರು ಮೊಕದ್ದಮೆಯಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಪ್ರಾಸ್ತಾವಿಕ ಅಭಿಪ್ರಾಯದ ಹಿನ್ನೆಲೆಯಲ್ಲಿ ನೋಡಬೇಕಾಗುತ್ತದೆ ಮತ್ತು ದುಡಾ ಮೊಕದ್ದಮೆಯನ್ನು ಪರಿಗಣಿಸಿದರೆ, ಮಾನ್ಯ ಅಡ್ವಕೇಟ್ ಜನರಲ್ ಅವರು ಹೊರಡಿಸಿದ ಆದೇಶದ ವಿರುದ್ಧವಿದ್ದಂತೆ ಅರ್ಜಿದಾರರು ಯಾವುದೇ ಪರಿಹಾರ ಹೊಂದಿರುವುದಿಲ್ಲ.ಅರ್ಜಿದಾರನಿಗಿರುವ ಒಂದೇ ಪರಿಹಾರವೆಂದರೆ, ಮಾನ್ಯ ಮುಖ್ಯ ನ್ಯಾಯಾಧೀಶರ ಮುಂದೆ ನಿಂದನಾ ವ್ಯವಹರಣೆಗಳ ಸಂಬಂಧದಲ್ಲಿ ಅರ್ಜಿಯನ್ನು ಸಲ್ಲಿಸುವುದಾಗಿದೆ.ಇದಲ್ಲದೆ ಅವರು, ಮಾನ್ಯ ಅಡ್ವಕೇಟ್ ಜನರಲ್ರು ಹೊರಡಿಸಿದ ಆದೇಶವನ್ನು ಮಾನ್ಯ ಮುಖ್ಯ ನ್ಯಾಯಾಧೀಶರ ಆದೇಶಕ್ಕೆ ಸಮನಾಗಿ ಪರಿಗಣಿಸಬಹುದಾಗಿದೆ ಮತ್ತು ಅವರು ಒಂದೇ ಮತ್ತು ಸಮನಾಗಿವೆ ಎಂದು ವಾದಿಸಿದ್ದಾರೆ.ಮಾನ್ಯ ಅಡ್ವಕೇಟ್ ಜನರಲ್ರು ಹೊರಡಿಸಿದ ಆದೇಶವು ಆಡಳಿತದ ಪರವಾಗಿದೆ ಮತ್ತು ಈ ನ್ಯಾಯಾಲಯವು ನ್ಯಾಯಿಕ ಅಧಿಕಾರವನ್ನು ಚಲಾಯಿಸುವ ಮೂಲಕ ಅದರಲ್ಲಿ ಹಸ್ತಕ್ಷೇಪ ಮಾಡಲಾಗುವುದಿಲ್ಲ ಎಂದು ಅವರು ವಾದಿಸಿದ್ದಾರೆ.ಇದಲ್ಲದೆ ಅವರು, ಮಾನ್ಯ ಅಡ್ವಕೇಟ್ ಜನರಲ್ರು ಹೊರಡಿಸಿದ ಆದೇಶವು ನ್ಯಾಯೋಚಿತವಾಗಿರುವುದರಿಂದ, ಪ್ರಸ್ತುತ ರಿಟ್ ಅರ್ಜಿಯು ಸಮರ್ಥನೀಯವಾಗಿಲ್ಲವೆಂದು ವಾದಿಸಿದ್ದಾರೆ.

13. ಇದಲ್ಲದೆ ಅವರು, ಸಮ್ಮತಿ ನೀಡಲು ನಿರಾಕರಿಸಿ ಮಾನ್ಯ ಅಡ್ವಕೇಟ್ ಜನರಲ್ರು ಪ್ರಶ್ನಿತ ಆದೇಶವನ್ನು ಹೊರಡಿಸಿದ ನಂತರ, ಅರ್ಜಿದಾರನು ಸಿಆರ್ಎಲ್.ಸಿ.ಸಿ.ಸಿ.ಸಂಖ್ಯೆ: 2/2013 ನ್ನು ಸಲ್ಲಿಸಿದ್ದಾರೆ ಎಂಬುದು ನಿರ್ವಿವಾದ.ಈ ನ್ಯಾಯಾಲಯದ ವಿಭಾಗೀಯ ಪೀಠವು, ಸದರಿ ನಿಂದನಾ ಅರ್ಜಿಯನ್ನು ತಿರಸ್ಕರಿಸಿದೆ ಮತ್ತು ಮಾನ್ಯ ಮುಖ್ಯ ನ್ಯಾಯಾಧೀಶರು ಆಡಳಿತದ ಪರವಾಗಿ ಸ್ವಯಂಪ್ರೇರಿತ ಸಂಜ್ಞೇಯತೆಯನ್ನು ತೆಗೆದುಕೊಂಡು

ಯಾವುದೇ ಆದೇಶವನ್ನು ಹೊರಡಿಸಲು ನಿರಾಕರಿಸಿದ್ದಾರೆ; ಇದು, ಈ ನ್ಯಾಯಾಲಯದ ವಿಭಾಗೀಯ ಪೀಠ, ಮಾನ್ಯ ಅಡ್ವಕೇಟ್ ಜನರು ಹೊರಡಿಸಿದ ಆದೇಶಗಳ, ಅಷ್ಟೇ ಅಲ್ಲದೆ ಆಡಳಿತದ ಪರವಾಗಿ ಮುಖ್ಯ ನ್ಯಾಯಾಧೀಶರು ಹೊರಡಿಸಿದ ಆದೇಶದ ವಿಲೀನವಲ್ಲದೆ ಮತ್ತೇನೂ ಅಲ್ಲ. ಆದುದರಿಂದ, ಪ್ರಸ್ತುತ ರಿಟ್ ಅರ್ಜಿಯು ಸಮರ್ಥನೀಯ ವಾಗಿರುವುದಿಲ್ಲವೆಂದು ವಾದಿಸಿದ್ದಾರೆ.ಇದಲ್ಲದೆ ಅವರು, ಮಾನ್ಯ ಅಡ್ವಕೇಟ್ ಜನರಲ್ರು ವಿವೇಚನಾನುಸಾರ ಹೊರಡಿಸಿದ ಆದೇಶದಲ್ಲಿ, ಅಪ್ರಸ್ತುತ ಕಾರಣಗಳ ಆಧಾರದ ಮೇಲೆ ಆದೇಶವನ್ನು ಹೊರಡಿಸಿದ ಹೊರತು, ಈ ನ್ಯಾಯಾಲಯವು ಹಸ್ತಕ್ಷೇಪ ಮಾಡಲಾಗುವುದಿಲ್ಲವೆಂದು ವಾದಿಸಿದ್ದಾರೆ.ಇದಲ್ಲದೆ ಅವರು, 1 ನೇ ಪ್ರತಿವಾದಿ-ಮಾನ್ಯ ಅಡ್ವಕೇಟ್ ಜನರಲ್ು ಹೊರಡಿಸಿದ ಆದೇಶವನ್ನು ಗಣನೆಗೆ ತೆಗೆದುಕೊಳ್ಳದೆ, ಅದು ಅಧಿನಿಯಮದ 15 ( 1) (ಬಿ) ಪ್ರಕರಣದ ಅಡಿಯಲ್ಲಿ ವಿವೇಚನಾನುಸಾರ ಹೊರಡಿಸಿದ ಆದೇಶವಾಗಿರುವುದರಿಂದ, ಈ ನ್ಯಾಯಾಲಯವು, ಭಾರತ ಸಂವಿಧಾನದ 226 ನೇ ಮತ್ತು 227 ನೇ ಅನುಚ್ಛೇದಗಳ ಅಡಿಯಲ್ಲಿ ನ್ಯಾಯಿಕ ಪುನರ್ಪರಿಶೀಲನೆ ಅಧಿಕಾರ ಚಲಾಯಿಸಿ ಸದರಿ ಆದೇಶದಲ್ಲಿ ಹಸ್ತಕ್ಷೇಪ ಮಾಡಲಾಗುವುದಿಲ್ಲವೆಂದು ವಾದಿಸಿದ್ದಾರೆ.

14. ತಮ್ಮ ವಾದಗಳಿಗೆ ಸಮರ್ಥನೆಯಾಗಿ, ಮಾನ್ಯ ನ್ಯಾಯವಾದಿಗಳು ಈ ಮುಂದಿನ ತೀರ್ಪುಗಳನ್ನು ಅವಲಂಬಿಸಿದ್ದಾರೆ:

1. ಎನ್. ವೆಂಕಟರಮಣಪ್ಪ -ವಿರುದ್ಧ-ಡಿ.ಕೆ.ನಾಯ್ಕರ್ ಮತ್ತು ಇನ್ನೊಬ್ಬರು (ಮೇಅನಂತೆ)- 6 ನೇ ಕಂಡಿಕೆ;

2. ಪಿ.ಎನ್. ದುಡಾ -ವಿರುದ್ಧ-ಪಿ.ಶಿವ ಶಂಕರ್ (ಮೇಲಿನಂತೆ)-27, 38, 40, 59 ಮತ್ತು 63 ನೇ ಕಂಡಿಕೆಗಳು; 9

3. ಬಾಳ್ ಠಾಕ್ರೆ -ವಿರುದ್ಧ-ಹರೀಶ್ ಪಿಂಪಲ್ಖುಟೆ ಮತ್ತು ಇನ್ನೊಬ್ಬರು (ಮೇಅನಂತೆ)- – 4 ನೇ ಕಂಡಿಕೆ;

4. ಉತ್ತರ ಪ್ರದೇಶ ರಾಜ್ಯ ಮತ್ತು ಇನ್ನೊಬ್ಬರು -ವಿರುದ್ಧ-ಜೊಪ್ರಿ ಮಲ್-34 ನೇ ಕಂಡಿಕೆ;

5. ದೆಹಲಿ ಎನ್.ಸಿ.ಟಿ. ರಾಜ್ಯ ಮತ್ತು ಇನ್ನೊಬ್ಬರು ವಿರುದ್ಧ ಸಂಜೀವ್ ಅಲಿಯಾಸ್ ಬಿಟ್ಟೊ 16 ನೇ ಕಂಡಿಕೆ;

6. ಏಕ್ತಾ ಶಕ್ತಿ ಪ್ರತಿಷ್ಠಾನ -ವಿರುದ್ಧ-ದೆಹಲಿ ಎನ್.ಸಿ.ಟಿ. ರಾಜ್ಯ 12

16 ನೇ ಕಂಡಿಕೆ.

15. 1 ನೇ ಎದುರುದಾರರ ಪರ ಮಾನ್ಯ ಹೆಚ್ಚುವರಿ ಸರ್ಕಾರಿ ವಕೀಲರಾದ ಕು. ನಿಲೋಫರ್ ಅಕ್ಬರ್ ಅವರೊಂದಿಗೆ ಮಾನ್ಯ ಹೆಚ್ಚುವರಿ ಅಡ್ವಕೇಟ್ ಜನರಲ್ರಾದ ಶ್ರೀ ಸುಬ್ರಮಣ್ಯರವರು, ಮಾನ್ಯ ಅಡ್ವಕೇಟ್ ಜನರು ಹೊರಡಿಸಿದ್ದ ಪ್ರಶ್ನಿತ ಆದೇಶವನ್ನು ಸಮರ್ಥಿಸಲು ಕೋರಿದ್ದು, ಮಾನ್ಯ ಅಡ್ವಕೇಟ್ ಜನರು ಹೊರಡಿಸಿದ್ದ ಆದೇಶವನ್ನು ಅನುಸರಿಸಿ, ಅರ್ಜಿದಾರನು ಈಗಾಗಲೇ ಕ್ರಿಮಿನಲ್ ಸಿ.ಸಿ.ಸಿ.ಸಂಖ್ಯೆ: 02/2013 ರಲ್ಲಿ ಈ ನ್ಯಾಯಾಲಯದ ವಿಭಾಗೀಯ ಪೀಠವನ್ನು ಹಾಗೂ ಮಾನ್ಯ ಮುಖ್ಯ ನ್ಯಾಯಾಧೀಶರನ್ನು ಸಂಪರ್ಕಿಸಿದ್ದಾನೆ ಎಂದು ವಾದಿಸಿದ್ದಾರೆ.ಆದುದರಿಂದ, ಅರ್ಜಿದಾರನಿಗೆ ಲಭ್ಯವಿರುವ ಏಕಮಾತ್ರ ಪರಿಹಾರವೆಂದರೆ, ಅಧಿನಿಯಮದ 19 ( 1) ನೇ ಪ್ರಕರಣದ ಉಪಬಂಧಗಳ ಅಡಿಯಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವನ್ನು ಸಂಪರ್ಕಿಸುವುದು.ಆದುದರಿಂದ, ಪ್ರಸ್ತುತ ಚ ರಿಟ್ ಅರ್ಜಿಯನ್ನು ವಜಾಗೊಳಿಸಲು ಅವರು ಕೋರಿದ್ದಾರೆ.ತಮ್ಮ ವಾದಗಳ ಸಮರ್ಥನೆಗಾಗಿ ಅವರು, ' ಬರಡಕಾಂತ ಮಿಶ್ರ -ವಿರುದ್ಧ ನ್ಯಾಯಮೂರ್ತಿ ಶ್ರೀ ಗತಿಕೃಷ್ಣ ಮಿಶ್ರ 13 ಮೊಕದ್ದಮೆಯಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಪ್ರಾಸ್ತಾವಿಕ ಅಭಿಪ್ರಾಯವನ್ನು ಅವಲಂಬಿಸಿದ್ದಾರೆ.

16. 2 ನೇ ಎದುರುದಾರರ ಪರ ಮಾನ್ಯ ನ್ಯಾಯವಾದಿ ಶ್ರೀ ಸಂಜೀವರೆಡ್ಡಿ ಬಿ.ಎನ್.ರವರು, 1 ನೇ ಪ್ರತಿವಾದಿಯು ಸಲ್ಲಿಸಿದ ಆಕ್ಷೇಪಣೆಗಳ ಹೇಳಿಕೆಯ ಸಮರ್ಥನೆಯಲ್ಲಿ ಅವರ ಪ್ರಶ್ನಿತ ಕ್ರಮವನ್ನು ಸಮರ್ಥಿಸಲು ಕೋರಿದ್ದಾರೆ.

17. ಇದಲ್ಲದೆ ಮಾನ್ಯ ನ್ಯಾಯವಾದಿಯವರು, ಕ್ರಿಮಿನಲ್ ಸಿ.ಸಿ.ಸಿ.ಸಂಖ್ಯೆ: 2/2013 ರಲ್ಲಿನ ವಾದಗಳ 18, 19, 20 ಮತ್ತು 21 ನೇ ಕಂಡಿಕೆಗಳಲ್ಲಿ ಅರ್ಜಿದಾರನು, ಸಮ್ಮತಿಯನ್ನು ನೀಡಲು ನಿರಾಕರಿಸಿ 1 ನೇ ಪ್ರತಿವಾದಿಗಳು ಹೊರಡಿಸಿದ ಆದೇಶದ ಬಗ್ಗೆ ನೇರ ಪದಗಳಲ್ಲಿ ಹೇಳಿಕೆ ನೀಡಿರುವುದರಿಂದ, ಮಾನ್ಯ ಅಡ್ವಕೇಟ್ ೧ ಜನರು ಹೊರಡಿಸಿದ ಆದೇಶವು ಪರೋಕ್ಷವಾಗಿ ಈ ನ್ಯಾಯಾಲಯದ ವಿಭಾಗೀಯ ಪೀಠವು ಹೊರಡಿಸಿದ ಆದೇಶದೊಂದಿಗೆ ವಿಲೀನವಾಗುತ್ತದೆ ಎಂದು ವಾದಿಸಿದ್ದಾರೆ.ಆದುದರಿಂದ, ಪ್ರಸ್ತುತ ರಿಟ್ ಅರ್ಜಿಯನ್ನು ವಜಾಗೊಳಿಸಬೇಕೆಂದು ಅವರು ಕೋರಿದ್ದಾರೆ.

IV.ನ್ಯಾಯಾಲಯದ ನಿರ್ಧರಣೆಗೆ ಉದ್ಭವಿಸುವ ಅಂಶಗಳು:

18. ಈರ್ವರೂ ಪಕ್ಷಕಾರರ ಪರ ಮಾನ್ಯ ನ್ಯಾಯವಾದಿಗಳ ಪರಸ್ಪರ ವಾದ-ವಿವಾದಗಳ ಹಿನ್ನೆಲೆಯಲ್ಲಿ, ಪ್ರಸ್ತುತ ರಿಟ್ ಅರ್ಜಿಯಲ್ಲಿ ಪರಿಗಣನೆಗೆ ಉದ್ಭವಿಸುವ ಏಕೈಕ ಅಂಶವೆಂದರೆ:

" ಪ್ರಸ್ತುತ ಮೊಕದ್ದಮೆಯ ಸಂಗತಿಗಳ ಮತ್ತು ಸಂದರ್ಭಗಳ ಹಿನ್ನೆಲೆಯಲ್ಲಿ, 1971 ರ ನ್ಯಾಯಾಲಯ ನಿಂದನೆ ಅಧಿನಿಯಮದ 15 ( 1) (ಬಿ) ಪ್ರಕರಣದ ಉಪಬಂಧಗಳ ಅಡಿಯಲ್ಲಿ ಸಲ್ಲಿಸಲಾಗಿದ್ದ ಅರ್ಜಿಯನ್ನು 1 ನೇ ಪ್ರತಿವಾದಿ-ಮಾನ್ಯ ಅಡ್ವಕೇಟ್ ಜನರು ತಳ್ಳಿಹಾಕಿರುವುದು ಸಮರ್ಥನೀಯವೇ? "

V.ಪರಿಶೀಲನಾಂಶಗಳು:

19. 2 ರಿಂದ 4 ನೇ ಪ್ರತಿವಾದಿಗಳು, ಒಂದೇ ವಸ್ತು ವಿಷಯದ ಸಂಬಂಧದಲ್ಲಿ ಬೇರೆ ಬೇರೆ ನ್ಯಾಯಾಲಯಗಳಲ್ಲಿ ಹಲವು ದಾವೆಗಳನ್ನು ಹೂಡುವ ಮೂಲಕ ಮತ್ತು ವಿವಿಧ ಪ್ರಾಧಿಕಾರಗಳ ಮುಂದೆ ವಿವಿಧ ವ್ಯವಹರಣೆಗಳನ್ನು ಪ್ರಾರಂಭಿಸುವ ಮೂಲಕ ತಮಗೆ ಸೇರದ ಸ್ವತ್ತಿನ ಮೇಲೆ ಮೋಸದ ಕ್ಲೇಮುಗಳನ್ನು ಮಾಡಿ ಅಪರಾಧಿಕ ಸ್ವರೂಪದ ನ್ಯಾಯಾಲಯ ನಿಂದನೆ ಸ್ವರೂಪದ ಅಪರಾಧ ಎಸಗಿದ್ದಾರೆ ಮತ್ತು ಅದು ಈ ನ್ಯಾಯಾಲಯದಲ್ಲಿ ಅಂತಿಮತೆಯನ್ನು ತಲುಪಿದೆ ಎಂಬುದು ಅರ್ಜಿದಾರನ ನಿರ್ದಿಷ್ಟ ವಾದವಾಗಿದೆ.ಅದರಂತೆ, 2 ರಿಂದ 4 ನೇ ಎದುರುದಾರರ ವಿರುದ್ಧ ಅಪರಾಧಿಕ ನಿಂದನಾ ವ್ಯವಹರಣೆಗಳನ್ನು ಪ್ರಾರಂಭಿಸಲು 1 ನೇ ಎದುರುದಾರರ ಸಮ್ಮತಿಯನ್ನು ಕೋರಿ ಅಧಿನಿಯಮದ 15 ( 1) (ಬಿ) ಪ್ರಕರಣದ ಅಡಿಯಲ್ಲಿ ಅಗತ್ಯಪಡಿಸಿದಂತೆ ಅರ್ಜಿದಾರನು ಅರ್ಜಿಯನ್ನು ಸಲ್ಲಿಸಿದ್ದಾನೆ.ಅರ್ಜಿದಾರನು ಸಲ್ಲಿಸಿದ ಅರ್ಜಿಯು ಹನ್ನೊಂದು ಪುಟಗಳದ್ದಾಗಿದ್ದು, ಅನುಬಂಧ-ಎ ಯಿಂದ ಕ್ಯು ಸಹಿತ ವಿವರಗಳನ್ನು ನೀಡುತ್ತದೆ ಮತ್ತು ಅದರಿಂದಾಗಿ ನ್ಯಾಯಾಲಯ ನಿಂದನೆ ಅಧಿನಿಯಮ, 1971 ರ 15 ( 1) (ಬಿ) ಪ್ರಕರಣದ ಉಪಬಂಧಗಳನ್ನು ಪರಿಗಣಿಸುವುದು ಸುಸಂಗತವಾಗಿದ್ದು, ಅದನ್ನು ಈ ಕೆಳಗಿನಂತೆ ಓದಲಾಗಿದೆ:

"15. ಇತರ ಮೊಕದ್ದಮೆಗಳಲ್ಲಿ ಅಪರಾಧಿಕ ನಿಂದನೆಯ ಸಂಜ್ಞೆಯತೆ,

(1) ಅಪರಾಧಿಕ ನಿಂದನಾ ಮೊಕದ್ದಮೆಯಲ್ಲಿ, 14 ನೇ ಪ್ರಕರಣದಲ್ಲಿ ಉಲ್ಲೇಖಿಸಿದ ನಿಂದನೆಯನ್ನು ಹೊರತುಪಡಿಸಿ ಸರ್ವೋಚ್ಚ ಚ ನ್ಯಾಯಾಲಯವು ಅಥವಾ ಉಚ್ಚ ನ್ಯಾಯಾಲಯವು, ಸ್ವಯಂಪ್ರೇರಿತವಾಗಿ ಚ ಮಾಡಿದ ಅಥವಾ,

(ಬಿ) ಅಡ್ವಕೇಟ್ ಜನರಲ್ರ ಲಿಖಿತ ಸಮ್ಮತಿಯೊಂದಿಗೆ ಯಾರೇ ಇತರ ವ್ಯಕ್ತಿಯ ಸೂಚನೆಯಂತೆ; ಕ್ರಮವನ್ನು ತೆಗೆದುಕೊಳ್ಳ ಬಹುದಾಗಿದೆ "

20. ಪಕ್ಷಕಾರರು ಕ್ಷುಲ್ಲಕ ವ್ಯವಹರಣೆಗಳ ಮೂಲಕ ನ್ಯಾಯಾಲಯದ ಮೌಲ್ಯಯುತ ಸಮಯವನ್ನು ಹಾಳು ಮಾಡುವುದನ್ನು ತಡೆಯುವ ಸಲುವಾಗಿ, ಸಂಜ್ಞೇಯತೆಯನ್ನು ತೆಗೆದುಕೊಳ್ಳುವ ವಿಧಾನವನ್ನು ನಿಯಮಿಸುವುದೇ ಅಧಿನಿಯಮದ 15 ನೇ ಪ್ರಕರಣದ ಒಟ್ಟಾರೆ ಉದ್ದೇಶವಾಗಿದೆ.15 ನೇ ಪ್ರಕರಣವು, ಉಚ್ಚ ನ್ಯಾಯಾಲಯ ಚ ಅಥವಾ ಸರ್ವೋಚ್ಚ ನ್ಯಾಯಾಲಯವು ಸ್ವಯಂಪ್ರೇರಿತವಾಗಿ ಅಥವಾ ಮಾನ್ಯ ಅಡ್ವಕೇಟ್ ಜನರಲ್ರ ಸೂಚನೆ ಮೇರೆಗೆ ಆ ಅಧಿನಿಯಮದ ಅಡಿಯಲ್ಲಿ ಕ್ರಮ ತೆಗೆದುಕೊಳ್ಳಲು ಅವುಗಳನ್ನು ಶಕ್ತಗೊಳಿಸುತ್ತದೆ.ನಿಂದನೆ ಸಂಬಂಧದಲ್ಲಿ ಕಾರಪ್ರವೃತ್ತನಾಗುವ ವ್ಯಕ್ತಿಗೆ ಮಾತ್ರ ಅಡ್ವಕೇಟ್ ಜನರಲ್ರ ಲಿಖಿತ ಸಮ್ಮತಿಯು ಅಗತ್ಯವಿದೆ.ಆದರೆ, ಅಧಿನಿಯಮದ 15 ನೇ ಪ್ರಕರಣದ ಅಡಿಯಲ್ಲಿ ನ್ಯಾಯಾಲಯವು ಸ್ವಯಂಪ್ರೇರಿತವಾಗಿ ಕ್ರಮ ಕೈಗೊಳ್ಳಲು ಬಯಸಿದಾಗ, ಅಂಥ ನಿರ್ಬಂಧ ಅಥವಾ ಅಗತ್ಯತೆ ಇರುವುದಿಲ್ಲ.

21. ವ್ಯವಹರಣೆಗಳಲ್ಲಿನ ವಿವಾದವು, ನ್ಯಾಯ ಪರಿಪಾಲನೆ ಮತ್ತು ನ್ಯಾಯ ನೀಡಿಕೆ ವ್ಯವಸ್ಥೆಯ ಮೇಲೆ ತೀವ್ರ ಪರಿಣಾಮವನ್ನು ಹೊಂದಿದ್ದರೆ, ಸಂದರ್ಭಾನುಸಾರ ಅಡ್ವಕೇಟ್ ಜನರಲ್ರ ಸಮ್ಮತಿ ಇಲ್ಲದೆಯೂ ಸಹ ನ್ಯಾಯಾಲಯವು ನಿಂದನಾ ವ್ಯವಹರಣೆಗಳನ್ನು ಪರೀಕ್ಷಿಸಲು ಸಕ್ಷಮವಾಗಿದೆ.ಅಧಿನಿಯಮದ ಅಡಿಯಲ್ಲಿ ತಮ್ಮ ಸಮ್ಮತಿ ನೀಡುವ ಮಾನ್ಯ ಅಡ್ವಕೇಟ್ ಜನರಲ್ರ ಕ್ರಮವು, ಅರ್ಜಿದಾರನ ಹಕ್ಕುಗಳ ಮೇಲಿನ ನಿರ್ಣಯವನ್ನೂ ಒಳಗೊಳ್ಳುವುದಿಲ್ಲ ಅಥವಾ ಎದುರುದಾರರ ಹಿತಾಸಕ್ತಿಗಳನ್ನೂ ಬಾಧಿಸುವುದಿಲ್ಲ.ನಿಂದನಾ ಅರ್ಜಿಯನ್ನು ಸಲ್ಲಿಸಲು ಲಿಖಿತದಲ್ಲಿ ತಮ್ಮ ಸಮ್ಮತಿ ನೀಡುವ ಮಾನ್ಯ ಅಡ್ವಕೇಟ್ ಜನರಲ್ರ ನಿರ್ಣಯವು, ಆಕ್ಷೇಪಣೀಯ ಹೇಳಿಕೆಗಳು ಅಥವಾ ಲಿಖಿತಗಳು ನ್ಯಾಯಾಲಯ ನಿಂದನೆಯಾಗುತ್ತದೆಯೇ ಎಂಬ ಪ್ರಶ್ನೆಯನ್ನು ಕುರಿತು ನಿರ್ಣಯ ನೀಡುವುದರಿಂದ ನ್ಯಾಯಾಲಯವನ್ನು ತಡೆಯುವುದಿಲ್ಲ ಅಥವಾ ಎದುರುದಾರರ ಹೇಳಿಕೆಗಳು ಅಥವಾ ಲಿಖಿತಗಳು ನ್ಯಾಯಾಲಯ ನಿಂದನೆಯಾಗುವುದಿಲ್ಲವೆಂಬ ವಾದವನ್ನು ಎತ್ತಲು ಅವರನ್ನು ತಡೆಯುವುದಿಲ್ಲ.ಆದುದರಿಂದ, ನ್ಯಾಯಾಲಯ ನಿಂದನೆ ಅಧಿನಿಯಮದ ಮೇರೆಗೆ ಲಿಖಿತದಲ್ಲಿ ತಮ್ಮ ಸಮ್ಮತಿಯನ್ನು ನೀಡುವ ಮಾನ್ಯ ಅಡ್ವಕೇಟ್ ಜನರಲ್ರ ಕ್ರಮವು, ಆಡಳಿತಾತ್ಮಕ ಕ್ರಮವಾಗಿದೆಯೇ ಹೊರತು, ನ್ಯಾಯಿಕ ಅಥವಾ ನ್ಯಾಯಿಕ ಸ್ವರೂಪದ ಕ್ರಮವಾಗುವುದಿಲ್ಲ.

22. ಖಾಸಗಿ ವ್ಯಕ್ತಿಯು ವ್ಯವಹರಣೆಗಳನ್ನು ಪ್ರಾರಂಭಿಸುವುದಕ್ಕೆ ಮೊದಲು, ಮಾನ್ಯ ಅಡ್ವಕೇಟ್ ಜನರಲ್ರ ಸಮ್ಮತಿ ಕಡ್ಡಾಯ.ಈ ಸಂಬಂಧದಲ್ಲಿ ಪ್ರತಿಯೊಬ್ಬ ನಾಗರಿಕನು, ಕೆಲವು ಮೊಕದ್ದಮೆಗಳಲ್ಲಿ, ನ್ಯಾಯಾಲಯದ ಘನತೆಯನ್ನು ಎತ್ತಿ ಹಿಡಿಯುವ ಉದ್ದೇಶದಿಂದಾಗಿ, ವೈಯಕ್ತಿಕ ಪ್ರತಿಷ್ಠೆಯನ್ನು ಮತ್ತು ಬದ್ಧ ದ್ವೇಷವನ್ನು ಬಿಟ್ಟು ಕಾರ್ಯನಿರ್ವಹಿಸಬೇಕಾಗುವ ಕಾರಣದಿಂದ, ಈ ಸಂಬಂಧದಲ್ಲಿ ಯಾವುದೇ ಅನಿರ್ಬಂಧಿತ ಹಕ್ಕನ್ನು ಹೊಂದಿರುವುದಿಲ್ಲ.ಅಂಥ ಸನ್ನಿವೇಶವನ್ನು ಕಾಯ್ದುಕೊಂಡು ರಕ್ಷಿಸುವ ಸಲುವಾಗಿ, ಅಧಿನಿಯಮದ ರಚನೆಕಾರರು, ಅಂಥ ಅರ್ಜಿಯನ್ನು ನೇರವಾಗಿ ಸಲ್ಲಿಸುವುದರ ಮೇಲೆ ನಿರ್ಬಂಧವನ್ನು ವಿಧಿಸಿ, ಸಾಂವಿಧಾನಿಕ ಹುದ್ದೆಯನ್ನು ಧಾರಣ ಮಾಡಿರುವ ಮತ್ತು ಅಂಥ ಅರ್ಜಿಯು ನ್ಯಾಯಾಲಯಕ್ಕೆ ಬರುವ ಮೊದಲು ಪರಿಶೀಲನೆ ಮಾಡಲು ಸಾಧ್ಯವಿರುವ ಮಾನ್ಯ ಅಡ್ವಕೇಟ್ ಜನರಲ್ರ ಲಿಖಿತ ಸಮ್ಮತಿಯೊಂದಿಗೆ ಅರ್ಜಿಯನ್ನು ಸಲ್ಲಿಸಬೇಕೆಂಬುದನ್ನು ಅಗತ್ಯಪಡಿಸುವುದನ್ನು ಕುರಿತು ಆಲೋಚಿಸಿದ್ದಾರೆ.ರಾಜ್ಯ ಮಟ್ಟದಲ್ಲಿ ಅತ್ಯಂತ ಉನ್ನತ ಕಾನೂನು ಅಧಿಕಾರಿಯಾಗಿ ಹಾಗೂ ನ್ಯಾಯಾಲಯಗಳ ಅಧಿಕಾರಿಯಾಗಿ ಸಹ ಮಾನ್ಯ ಅಡ್ವಕೇಟ್ ಜನರು,

ನ್ಯಾಯ ಪ್ರದಾನತೆಯ ಶುದ್ಧತೆಯಲ್ಲಿ ಅಪಾರ ಹಿತಾಸಕ್ತಿ ಹೊಂದಿದ್ದು, ನ್ಯಾಯಾಲಯಗಳ ಘನತೆಯನ್ನು ಕಾಪಾಡುತ್ತಾರೆ.ಅವರಿಂದ, ಅಪರಾಧಿಕ ನಿಂದನೆಯ ಪ್ರಸ್ತಾವಿತ ಅರ್ಜಿಯಲ್ಲಿ ಮಾಡಿದ ವಾದಗಳು, ಸಾರ್ವಜನಿಕ ಹಿತಾಸಕ್ತಿಗೆ ಪ್ರತಿಕಾರಕವಾಗಿವೆಯೇ ಅಥವಾ ವೈಯಕ್ತಿಕ ಹಗೆತನದಿಂದ ಕೂಡಿವೆಯೇ ಎಂಬುದನ್ನು ಪರಿಶೀಲಿಸಲು ಹಾಗೂ ಸದರಿ ಉಪಬಂಧದಲ್ಲಿ ಅಪೇಕ್ಷಿತ ಸಮ್ಮತಿ ನೀಡುವುದನ್ನು ಅಥವಾ ನಿರಕಾರಿಸುವುದನ್ನು ನಿರೀಕ್ಷಿಸಲಾಗಿದೆ.ಇದಲ್ಲದೆ, ಮೊಕದ್ದಮೆಗಳು ಕಿರುಕುಳಕಾರಕ, ದ್ವೇಷಕಾರಕ ಅಥವಾ ವೈಯಕ್ತಿಕ ಹಗೆತನದ ಉದ್ದೇಶದಿಂದ ಕೂಡಿದ್ದು, ಸಾರ್ವಜನಿಕ ಹಿತಾಸಕ್ತಿಯನ್ನು ಹೊಂದಿಲ್ಲವೆಂದು ಕಂಡುಬಂದರೆ, ಉಚ್ಚ ನ್ಯಾಯಾಲಯ/ಸರ್ವೋಚ್ಚ ನ್ಯಾಯಾಲಯದಲ್ಲಿ ಆ ಹಂತದಲ್ಲಿ ತಡೆಹಿಡಿಯಬಹುದಾಗಿದೆ.ಅಪರಾಧಿಕ ನಿಂದನಾ ಅರ್ಜಿಯು, ಮೇಲೆ ಹೇಳಿದ ಕಾನೂನು ಅಧಿಕಾರಿಯ ಲಿಖಿತ ಸಮ್ಮತಿಯನ್ನು ಒಳಗೊಳ್ಳದಿದ್ದರೆ, ಪೂರ್ವಸಮ್ಮತಿಯ ಅಗತ್ಯತೆಯ ಉದ್ದೇಶವೇ ನಿಷ್ಫಲಗೊಳ್ಳುವುದು.ಸಿಂಧುವಾದ ಅರ್ಜಿಯು, ಅಧಿನಿಯಮದ 15 ನೇ ಪ್ರಕರಣದ ಅಗತ್ಯತೆಗಳನ್ನು ಅನುಪಾಲಿಸುವುದು ಕಡ್ಡಾಯವಾಗಿದೆ.

23. 1 ನೇ ಎದುರುದಾರ-ಮಾನ್ಯ ಅಡ್ವಕೇಟ್ ಜನರಲ್ರವರ ವಿವೇಚನಾಧಿಕಾರವನ್ನು ಯುಕ್ತವಾಗಿ ಮತ್ತು ಅಧಿನಿಯಮದ ಉಪಬಂಧಗಳ ಅಡಿಯಲ್ಲಿ ಪದ್ಯಾಲೋಚಿಸಿದಂತೆ, ಸೂಚಿಸಲಾದ ಕಾರನೀತಿಗನುಸಾರವಾಗಿ ಚಲಾಯಿಸುವರೆಂಬುದನ್ನು ಅವರಿಂದ ನಿರೀಕ್ಷಿಸಲಾಗುತ್ತದೆ.ಅಧಿನಿಯಮದ 15 ( 1) (ಬಿ) ಪ್ರಕರಣದ ಅಡಿಯಲ್ಲಿ ಖಾಸಗಿ ವ್ಯಕ್ತಿಯು ಅರ್ಜಿಯನ್ನು ಸಲ್ಲಿಸಿದಾಗ, ಸಮ್ಮತಿ ನೀಡುವ ವಿಷಯದಲ್ಲಿ ಮಾನ್ಯ ಅಡ್ವಕೇಟ್ ಜನರಲ್ಲಿ ನಿರುಪಾಧಿಕ ವಿವೇಚನಾಧಿಕಾರ ನಿಹಿತವಾಗುತ್ತದೆ ಎಂಬುದು ಇತ್ಯರ್ಥವಾದ ವಿಷಯವಾಗಿದೆ.ಅಧಿನಿಯಮದ 15 ನೇ ಪ್ರಕರಣದ ಅಡಿಯಲ್ಲಿ ಮಾನ್ಯ ಅಡ್ವಕೇಟ್ ಜನರಲ್ರು ಸಮ್ಮತಿ ನೀಡುವುದು ಅಥವಾ ನಿರಾಕರಿಸುವುದು ಅವರ ವಿವೇಚನಾಧಿಕಾರವಾಗಿದೆ.ಸಮ್ಮತಿ ನೀಡುವ ಸಮಯದಲ್ಲಿ, ಮಾನ್ಯ ಅಡ್ವಕೇಟ್ ಜನರು ಸಮ್ಮತಿ ನೀಡುವ ಮೊದಲು ವಿಷಯವನ್ನು ಕೂಲಂಕಷವಾಗಿ ಪರಿಶೀಲಿಸಬೇಕು.ಅಧಿನಿಯಮದ 15 ನೇ ಪ್ರಕರಣದ ಉಪಬಂಧಗಳ ಅಡಿಯಲ್ಲಿ ಮಾನ್ಯ ಅಡ್ವಕೇಟ್ ಜನರಲ್ರವರಿಗೆ ವಹಿಸಿದ ಕರ್ತವ್ಯಗಳನ್ನು ನಿರ್ವಹಿಸುವಲ್ಲಿ, ನಿರ್ಲಕ್ಷದಿಂದ ನಡೆದುಕೊಳ್ಳುವುದಕ್ಕೆ ಅವಕಾಶವಿರುವುದಿಲ್ಲ.ಪ್ರಸ್ತುತ ಮೊಕದ್ದಮೆಯಲ್ಲಿ, ಒಪ್ಪಿಕೊಂಡಿರುವಂತೆ, ದೃಢಕ್ತಿಗಳು ಮತ್ತು ಅರ್ಜಿದಾರನು ಹಾಜರುಪಡಿಸಿದ ದಸ್ತಾವೇಜುಗಳ ಸಂಬಂಧದಲ್ಲಿ 1 ನೇ ಎದುರುದಾರರನ್ನು ಪರೀಕ್ಷಿಸಿರುವುದಿಲ್ಲ ಹಾಗೂ ಅರ್ಜಿ ನಿರಾಕರಣೆಗೆ ಅವರು ಯಾವುದೇ ಕಾರಣಗಳನ್ನು ದಾಖಲಿಸಿರುವುದಿಲ್ಲ ಮತ್ತು ಪ್ರಶ್ನಿತ ಆದೇಶದಲ್ಲಿ ಸಾರ್ವಜನಿಕ ಹಿತಾಸಕ್ತಿ ಇದೆಯೇ ಅಥವಾ ಸಮ್ಮತಿ ನೀಡುವ ಸಂಬಂಧದಲ್ಲಿ ಅರ್ಜಿದಾರನು ಯಾವುದೇ ಕಾರಣವನ್ನು ಸಮರ್ಥಿಸಿದ್ದಾನೆಯೇ ಎಂಬುದನ್ನು ಹೇಳಿರುವುದಿಲ್ಲ.

24. ಉಚ್ಚ ನ್ಯಾಯಾಲಯದ ನ್ಯಾಯಾಧೀಶನಾಗಿ ನೇಮಕವಾಗಲು ಅರ್ಹನಿರುವ ವ್ಯಕ್ತಿಯನ್ನು, ರಾಜ್ಯದ ಮಾನ್ಯ ಅಡ್ವಕೇಟ್ ಜನರಲ್ರನ್ನಾಗಿ ರಾಜ್ಯದ ರಾಜ್ಯಪಾಲರು ನೇಮಕ ಮಾಡತಕ್ಕದ್ದು ಮತ್ತು ಸನ್ಮಾನ್ಯ ರಾಜ್ಯಪಾಲರು ಕಾಲ ಕಾಲಕ್ಕೆ ಅವರಿಗೆ ಉಲ್ಲೇಖಿಸಬಹುದಾದ ಅಥವಾ ವಹಿಸಬಹುದಾದಂಥ ಕಾನೂನು ಸಂಬಂಧಿ ವಿಷಯಗಳ ಮೇಲೆ ರಾಜ್ಯ ಸರ್ಕಾರಕ್ಕೆ ಸಲಹೆ ನೀಡುವುದು ಹಾಗೂ ಕಾನೂನು ಸ್ವರೂಪದ ಅಂಥ ಇತರ ಕರ್ತವ್ಯಗಳನ್ನು ನಿರ್ವಹಿಸುವುದು ಮತ್ತು ಸಂವಿಧಾನವು ಅಥವಾ ಅದರ ಮೇರೆಗೆ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಮೇರೆಗೆ ಅವರಿಗೆ ಪ್ರದಾನ ಮಾಡಿದ ಪ್ರಕಾರ್ಯಗಳನ್ನು ನಿರ್ವಹಿಸುವುದು ಮಾನ್ಯ ಅಡ್ವಕೇಟ್ ಜನರಲ್ರು ಕರ್ತವ್ಯವಾಗಿರತಕ್ಕದ್ದು ಹಾಗೂ ಅಡ್ವಕೇಟ್ ಜನರು

ರಾಜ್ಯಪಾಲರ ಇಷ್ಟಪರಂತ ಪದಧಾರಣ ಮಾಡತಕ್ಕದ್ದು ಮತ್ತು ಸರ್ಕಾರದ ವ್ಯವಹರಣೆಗಳನ್ನು ನಡೆಸಲು ರಾಜ್ಯಪಾಲರು ನಿರ್ಧರಿಸಬಹುದಾದಂಥ ಸಂಭಾವನೆಯನ್ನು ಸ್ವೀಕರಿಸತಕ್ಕದ್ದು ಎಂದು ಹೇಳುವುದು ಸುಸಂಗತವಾಗಿದೆ.ಭಾರತ ಸಂವಿಧಾನದ 165 ( 2) ನೇ ಅನುಚ್ಛೇದವು, ಸಂವಿಧಾನ ಅಥವಾ ಯಾವುದೇ ಇತರ ಕಾನೂನಿನ ಮೂಲಕ ಅಡ್ವಕೇಟ್ ಜನರಲ್ರಿಗೆ ಸ್ಥಿರೀಕರಿಸಿದ ಪ್ರಕಾರ್ಯಗಳ ನಿರ್ವಹಣೆಗೆ ಉಲ್ಲೇಖಿಸುತ್ತದೆ ಮತ್ತು ನ್ಯಾಯಾಲಯಗಳ ನಿಂದನೆ ಅಧಿನಿಯಮದ 15 ( 1) (ಬಿ) ಪ್ರಕರಣದ ಉಪಬಂಧಗಳನ್ನು ಒಳಗೊಳ್ಳುತ್ತದೆ.ಅಧಿನಿಯಮದ 15 ( 1) (ಬಿ) ಪ್ರಕರಣದ ಅಡಿಯಲ್ಲಿ ಪರ್ಯಾಲೋಚಿಸಿದಂತೆ ಅವರು ಕಾರನಿರ್ವಹಿಸಬೇಕು ಮತ್ತು ನ್ಯಾಯಾಲಯಕ್ಕೆ ಸಲಹೆ ನೀಡಬೇಕು.

25. ನ್ಯಾಯಾಲಯ ನಿಂದನೆ ಅಧಿನಿಯಮ, 1971 ರ ಉಪಬಂಧಗಳನ್ನು ಪರಿಗಣಿಸುವಾಗ, ಮಾನ್ಯ ಸರ್ವೋಚ್ಚ ನ್ಯಾಯಾಲಯವು, ಕಾನ್ಸಿಯನ್ಸಸ್ ಗ್ರೂಪ್ -ವಿರುದ್ಧ ಮೊಹಮ್ಮದ್ ಯೂನಸ್ ಮತ್ತು ಇತರರು (ಮೇಲಿನ ಂ ತೆ) ಮೊಕದ್ದಮೆಯಲ್ಲಿನ 4 ನೇ ಕಂಡಿಕೆಯಲ್ಲಿ ಈ ಕೆಳಗಿನಂತೆ ಅಭಿಪ್ರಾಯಪಟ್ಟಿದೆ:

" ಅರ್ಜಿಯನ್ನು ಹಿಂತೆಗೆದುಕೊಳ್ಳಲು ಅರ್ಜಿದಾರನು ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ ಸಮಯದಲ್ಲಿ, ಈ ನ್ಯಾಯಾಲಯವು ರೂಪಿಸಿದ ನಿಯಮಗಳ 3 (ಸಿ) ನಿಯಮದ ಅಡಿಯಲ್ಲಿ, ಅಟಾರ್ನಿ ಜನರಲ್ರು, ಯಾವುದೇ ಕಾರಣಕ್ಕಾಗಿ, ಅರ್ಜಿಯನ್ನು ಸಲ್ಲಿಸಲು ಸಮ್ಮತಿ ನೀಡುವ ಸ್ಥಿತಿಯಲ್ಲಿರದಿದ್ದರೆ, ಸಾಲಿಸಿಟರ್ ಜನರಲ್ರ ಸಮ್ಮತಿಯೊಂದಿಗೆ ನಿಂದನಾ ಅರ್ಜಿಯನ್ನು ಸಮರ್ಥಿಸಿಕೊಳ್ಳಬಹುದು ಎಂಬ ಬಗ್ಗೆ ತನಗೆ ಅರಿವಿರಲಿಲ್ಲ ಎಂಬ ಕಾರಣದ ಮೇಲೆ 12 ನೇ ಡಿಸೆಂಬರ್, 1986 ರ ಮೇಲೆ ಹೇಳಿದ ಆದೇಶವನ್ನು ಹಿಂದಕ್ಕೆ ತೆಗೆದುಕೊಳ್ಳಲು ಕೋರಿ ಕ್ರಿಮಿನಲ್ ಸಂಕೀರ್ಣ ಅರ್ಜಿಸಂಖ್ಯೆ: 5244/1986 ನ್ನು ಸಲ್ಲಿಸಿದ್ದನು. "

" ನಿ ಂ ದ ನಾ ಅರ್ಜಿಯನ್ನು ಸಾಲಿಸಿಟರ್ ಜನರಲ್ರ ಸಮ್ಮತಿಯೊಂದಿಗೆ ಸಹ ಸಮರ್ಥಿಸಿಕೊಳ್ಳಬಹುದಾಗಿದ್ದು, ಸಾಲಿಸಿಟರ್ ಜನರಲ್ರನ್ನು ಸಂಪರ್ಕಿಸಲು ಮತ್ತು 3 (ಸಿ) ನಿಯಮದ ಅಡಿಯಲ್ಲಿ ಸಾಲಿಸಿಟರ್ ಜನರಲ್ರ ಸಮ್ಮತಿಯನ್ನು ಪಡೆದ ನಂತರ ಅರ್ಜಿಯನ್ನು ಪುನರೂರ್ಜಿತಗೊಳಿಸಲು ಅರ್ಜಿದಾರನಿಗೆ ಮುಕ್ತ ಅವಕಾಶವಿದೆ ಎಂಬುದನ್ನು ನಾವು ಸ್ಪಷ್ಟಪಡಿಸುತ್ತೇವೆ.ನಿಂದನೆ ಸಂಬಂಧದಲ್ಲಿ ಅರ್ಜಿಯನ್ನು ಮರು-ಪರಿಶೀಲಿಸಲು ಅರ್ಜಿದಾರನಿಗೆ ಈ ಪರಿಹಾರವು ಲಭ್ಯವಿರುವುದರಿಂದ, ಅರ್ಜಿಯನ್ನು ಹಿಂತೆಗೆದುಕೊಳ್ಳಲು ಅನುಮತಿಸಿದ ಆದೇಶವನ್ನು ಹಿಂಪಡೆಯುವುದನ್ನು ನಾವು ಪ್ರಸ್ತಾಪಿಸುವುದಿಲ್ಲ.ಸಾಲಿಸಿಟರ್ ಜನರಲ್ರ ಸಮ್ಮತಿಯನ್ನು ಪಡೆದ ನ ಂ ತರ ಅರ್ಜಿದಾರನು ಅರ್ಜಿಯನ್ನು ಪುನರೂರ್ಜಿತ ಗೊಳಿಸಬಹುದಾಗಿದೆ.ಯಾವುದೇ ಅಸಂಗತ ಕಾರಣದ ಮೇಲೆ ಸಾಲಿಸಿಟರ್ ಜನರಲ್ರು ಸಮ್ಮತಿ ನೀಡಲು ನಿರಾಕರಿಸಿದರೆ, ಪರಿಹಾರವಿಲ್ಲದ ಅರ್ಜಿಯಾಗುವುದಿಲ್ಲವೆಂಬುದರ ಕಡೆ ನಾವು ಗಮನಸೆಳೆಯುತ್ತೇವೆ. "

26. ಮೇಲಿನ ಸದರಿ ತೀರ್ಪನ್ನು, ಪಿ.ಎನ್. ದುಡಾ ವಿರುದ್ಧ ಪಿ. ಶಿವಶಂಕರ್ ಮತ್ತು ಇತರರು (ಮೇಲಿನಂತೆ) ಮೊಕದ್ದಮೆಯಲ್ಲಿನ ತರುವಾಯದ ತೀರ್ಪಿನಲ್ಲಿ ಪರಿಗಣಿಸಲಾಗಿದೆ.ಇಬ್ಬರು ಮಾನ್ಯ ನ್ಯಾಯಾಧೀಶರನ್ನು ಒಳಗೊಂಡಿದ್ದಂಥ ಪೀಠವು, 27 ನೇ, 38 ನೇ, 40 ನೇ ಮತ್ತು 59 ನೇ ಕಂಡಿಕೆಗಳಲ್ಲಿ ಒಟ್ಟಭಿಪ್ರಾಯ ನೀಡುವಾಗ ತಮ್ಮ ಕಾರಣಗಳನ್ನು ಪ್ರತ್ಯೇಕವಾಗಿ ಸೂಚಿಸಿದ್ದು, ಅದು ಈ ಕೆಳಗಿನಂತಿದೆ:

"27. ತರುವಾಯದಲ್ಲಿ, ಅರ್ಜಿದಾರನು, ಆ ಮೊಕದ್ದಮೆಯಲ್ಲಿ, ಅರ್ಜಿಯನ್ನು ಹಿಂತೆಗೆದುಕೊಳ್ಳಲು ನ್ಯಾಯಾಲಯಕ್ಕೆ ತಾನು ಅರ್ಜಿ ಸಲ್ಲಿಸಿದ ಸಮಯದಲ್ಲಿ, ಈ ನ್ಯಾಯಾಲಯವು ರೂಪಿಸಿದ ನಿಯಮಗಳ 3 (ಸಿ)

ನಿಯಮದ ಅಡಿಯಲ್ಲಿ, ಯಾವುದೇ ಕಾರಣಕ್ಕಾಗಿ, ಅಟಾರ್ನಿ ಜನರಲ್ರು ಅರ್ಜಿಯನ್ನು ಸಲ್ಲಿಸಲು ಸಮ್ಮತಿ ನೀಡುವ ಸ್ಥಿತಿಯಲ್ಲಿಲ್ಲದಿದ್ದರೆ, ಸಾಲಿಸಿಟರ್ ಜನರಲ್ರ ಸಮ್ಮತಿಯನ್ನು ಪಡೆದು ನಿಂದನಾ ಅರ್ಜಿಯನ್ನು ಸಮರ್ಥಿಸಿಕೊಳ್ಳಬಹುದಾಗಿತ್ತು ಎಂಬುದು ತನಗೆ ಗೊತ್ತಿರಲಿಲ್ಲ ಎಂಬ ಕಾರಣದ ಮೇರೆಗೆ ಮೇಲೆ ಹೇಳಿದ ಆದೇಶವನ್ನು ಹಿಂಪಡೆಯಲು ಕೋರಿ, ಕ್ರಿಮಿನಲ್ ಸಂಕೀರ್ಣ ಅರ್ಜಿಸಂಖ್ಯೆ: 5244/1986 ನ್ನು ಸಲ್ಲಿಸಿದ್ದನು.ಆತನಿಗೆ ಹಾಗೆ ಅನುಮತಿ ನೀಡಲಾಗಿತ್ತು.ಆ ತರುವಾಯ, ಅರ್ಜಿದಾರನು ಸಾಲಿಸಿಟರ್ ಜನರಲ್ರನ್ನು ಸಂಪರ್ಕಿಸಿದ್ದರಾದರೂ, ಸಾಲಿಸಿಟರ್ ಜನರಲ್ರು ಸಾರ್ವಜನಿಕ ಹಿತಾಸಕ್ತಿಯಿಂದ ಸಮ್ಮತಿ ನೀಡಲು ನಿರಾಕರಿಸಿದ್ದರು. ತಮ್ಮ ನಿರ್ಣಯವನ್ನು ಸಮರ್ಥಿಸುವ ಕೆಲವು ಕಾರಣಗಳನ್ನು ಅವರು ನೀಡಿದ್ದರು.ಮೇಲೆ ಹೇಳಿದ ನಿರ್ಣಯದಲ್ಲಿ ನ್ಯಾಯಾಲಯವು ಕಾರಣಗಳನ್ನು ಪರಿಶೀಲಿಸಿ, ಸಮ್ಮತಿ ನೀಡಲು ನಿರಾಕರಿಸಿ ಸಾಲಿಸಿಟರ್ ಜನರಲ್ರು ಹೇಳಿದ ಕಾರಣಗಳು ಅಸ ಂ ಗತವೆ ಂ ದು ಹೇಳಲಾಗುವುದಿಲ್ಲ ಎಂದು ಅಭಿಪ್ರಾಯಪಟ್ಟು, ಅರ್ಜಿಯನ್ನು ವಜಾಗೊಳಿಸಿತು.ಈ ಅರ್ಜಿಯನ್ನು ವಜಾಗೊಳಿಸುವಾಗ, ಈ ನ್ಯಾಯಾಲಯವು, ವರದಿಯ 93 ನೇ ಪುಟದಲ್ಲಿ, " ಸದರಿ ಆದೇಶದ ಕೊನೆಯ ವಾಕ್ಯದ ಮೂಲಕ, ' ಸಾಲಿಸಿಟರ್ ಜನರಲ್ರು ಯಾವುದೇ ಅಸಂಗತ ಕಾರಣದ ಮೇಲೆ ತಮ್ಮ ಸಮ್ಮತಿಯನ್ನು ನಿರಾಕರಿಸಿದ್ದರೆ, ಅರ್ಜಿದಾರರಿಗೆ ಪರಿಹಾರವಿಲ್ಲದೆ ಇರುವುದಿಲ್ಲ ' ಎಂದು ಸಹ ಪೀಠವು ಅಭಿಪ್ರಾಯಪಟ್ಟಿರುವುದರಲ್ಲಿ ಯಾವುದೇ ಸಂಶಯವಿಲ್ಲ.ಅದರರ್ಥ, ಸೂಕ್ತ ಪ್ರಕ್ರಿಯೆಯ ಮೂಲಕ ಅರ್ಜಿದಾರನು ಈ ನ್ಯಾಯಾಲಯದ ಮುಂದೆ ಹಾಗೆ ನಿರಾಕರಿಸಿರುವುದರ ಬಗ್ಗೆ ಆಕ್ಷೇಪಣೆ ಎತ್ತಬಹುದು ಎಂಬುದೇ ಆಗಿದೆ. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ನಿರ್ಣಯದ ಪರಿಣಾಮವು, ಅಟಾರ್ನಿ ಜನರಲ್ರು ಅಥವಾ ಸಾಲಿಸಿಟರ್ ಜನರಲ್ರು ಸಮ್ಮತಿ ನೀಡುವಲ್ಲಿ ಅಥವಾ ಸಮ್ಮತಿ ನಿರಾಕರಿಸುವಲ್ಲಿ ನೀಡಿ ದ ಕಾರಣ ಗಳು ಸಮರ್ಥನೀಯವಾಗಿರುವಮಟ್ಟಿಗೆ ಇರಬೇಕು.

38. ಶ್ರೀ ಗೋಪಾಲ್ ಸುಬ್ರಮಣಿಯಂರವರು ನಮ್ಮ ಮುಂದೆ ಹಾಜರಾಗಿ, ಮಾನ್ಯ ಅಟಾರ್ನಿ ಜನರಲ್ರು ಸಹಿ ಮಾಡಿದ ಹೇಳಿಕೆಯನ್ನು ಸಲ್ಲಿಸಿದ್ದಾರೆ ಮತ್ತು ತಮ್ಮ ಮೌಖಿಕ ನಿವೇದನೆಗಳನ್ನು ಸಹ ಸಲ್ಲಿಸಿದ್ದಾರೆ.ಮಧ್ಯ ಪ್ರವೇಶಿಸಿದ ಕಕ್ಷಿದಾರರಾದ ಶ್ರೀ ತ್ರಿವೇದಿಯವರು ಸಹ ತಮ್ಮ ನಿವೇದನೆಗಳನ್ನು ಸಲ್ಲಿಸಿದ್ದಾರೆ.ಅವರ ನಿವೇದನೆಗಳ ಮುಖ್ಯ ಅಂಶವೆಂದರೆ, ಅಟಾರ್ನಿ ಜನರಲ್ರ ಕ್ರಮಗಳು ಹಾಗೂ ಸಾಲಿಸಿಟರ್ ಜನರಲ್ರ ಕ್ರಮವು ಸಹ, ಮೇಲೆ ಹೇಳಿದ ಪತ್ರದಲ್ಲಿನ ಪಕ್ಷಪಾತದ ಆರೋಪದ ಕಾರಣದಿಂದ ಉದ್ದೇಶಪೂರ್ವಕವಾಗಿವೆ.ಎ.ಐ.ಆರ್. 1945 ಪಿ.ಸಿ. 38 ರಲ್ಲಿ ವರದಿಯಾದ ವಸ್ಸಿಲಿಯಡೇಸ್ -ವಿರುದ್ಧ-ವಸ್ಸಿಲಿಯಡೇಸ್ ಮತ್ತು ಇನ್ನೊಬ್ಬರು ಮೊಕದ್ದಮೆಯನ್ನು ಅವಲಂಬಿಸಿದ್ದು, ಅದರಲ್ಲಿ ನ್ಯಾಯಾಂಗ ಸಮಿತಿಯು, ಯಾವುದೇ ಸಂಶಯಾತೀತ ವ್ಯಕ್ತಿಗಳೊಂದಿಗೆ ಎಲ್ಲಾ ವ್ಯವಹರಣೆಗಳನ್ನು ನಡೆಸಬೇಕೆಂಬುದು ಅತ್ಯಂತ ಅಪೇಕ್ಷಣೀಯವಾಗಿತ್ತಾದಾಗ್ಯೂ, ಪಕ್ಷಪಾತ ತೋರಿರುವುದು ಅಕಾರಣವಾದುದುದಾಗಿತ್ತು ಎಂದು ಪುನರುಚ್ಚರಿಸಿದೆ.ಯಾವುದೇ ಮೊಕದ್ದಮೆಯಲ್ಲಿ, ನ್ಯಾಯಾಲಯವು ಯಾವಾಗಲೂ ಸ್ವಯಂಪ್ರೇರಣೆಯಿಂದ ಕ್ರಮ ತೆಗೆದುಕೊಳ್ಳಬಹುದಾಗಿರುವ ಕಾರಣದಿಂದ ಅರ್ಜಿದಾರರು ಪರಿಹಾರ ಹೊಂದಿರುವುದಿಲ್ಲವೆಂಬ ಯಾವ ಪ್ರಶ್ನೆಯು ಇಲ್ಲ ಎಂಬುದುದನ್ನು ಸಹ ಪುನರುಚ್ಚರಿಸಲಾಗಿದೆ.ಆದುದರಿಂದ, ಸೂಕ್ತ ಮೊಕದ್ದಮೆಯಲ್ಲಿ ಅಧಿನಿಯಮದ 15 ( 1) ನೇ ಪ್ರಕರಣದ (ಬಿ) ಖಂಡದ ನಿಬಂಧನೆಗಳನುಸಾರ ಸಮ್ಮತಿ ನೀಡುವ ಪ್ರಶ್ನೆಯನ್ನು ಪರಿಗಣಿಸುವುದು ಅಟಾರ್ನಿ ಜನರಲ್ರವರಿಗೆ ಮತ್ತು ಸಾಲಿಸಿಟರ್ ಜನರಲ್ರವರಿಗೆ ವಿಧಿಸಿದ ಕರ್ತವ್ಯವಾಗಿತ್ತೇ?ಮತ್ತು ವಾಸ್ತವದಲ್ಲಿ, ಅಂಥ ಸಮ್ಮತಿಯನ್ನು ನೀಡಿರದಿದ್ದರೆ, ಈ ಪ್ರಶ್ನೆಯನ್ನು

ನ್ಯಾಯಾಲಯವು ಪರಿಗಣಿಸಬೇಕಿತ್ತೇ?ಎಂಬುದು ಪ್ರಶ್ನೆಯಾಗಿದೆ.ಇದು, ಅಟಾರ್ನಿ ಜನರಲ್ರು ಅಥವಾ ಸಾಲಿಸಿಟರ್ ಜನರಲ್ರು ನಿಂದನೆಗೆ ಹೊಣೆಗಾರರು ಎಂಬ ಭಾವದಲ್ಲಿ ನಿಂದನಾ ವ್ಯವಹರಣೆಗೆ ಅವರನ್ನು ಪಕ್ಷಕಾರರನ್ನಾಗಿ ಮಾಡುವ ಪ್ರಶ್ನೆಯಾಗಿರದೆ, ಅಟಾರ್ನಿ ಜನರಲ್ ಅಥವಾ ಸಾಲಿಸಿಟರ್ ಜನರಲ್ರು ಸಮ್ಮತಿಯನ್ನು ಪಡೆಯುವ ಮೂಲಕ ನಿಂದನಾ ವ್ಯವಹರಣೆಗಳ ಸುನಾವಣೆಯನ್ನು ಹೆಚ್ಚು ಉತ್ತಮವಾಗಿ ವ್ಯವಹರಿಸಬಹುದು ಎಂಬುದಾಗಿದೆ ಮತ್ತು ಚ ಸಮ್ಮತಿ ನೀಡುವ ಸಮರ್ಥನೀಯತೆಯ ಪ್ರಶ್ನೆಯು, ಸಿವಿಲ್ ವ್ಯವಹರಣೆಗೆ ಅನ್ವಯವಾಗುವ ಮತ್ತು ಕ್ರಿಮಿನಲ್ ವ್ಯವಹರಣೆಗೆ ಅನ್ವಯವಾಗದ ಸಿವಿಲ್ ಪ್ರಕ್ರಿಯಾ ಸಂಹಿತೆಯ I ನೇ ನಿಯಮದ II ನೇ ಕ್ರಮಾದೇಶದ ಸಾದೃಶ್ಯದ ಆಧಾರದ ಮೇಲೆ ಪರಸ್ಪರ ಸಂಬಂಧ ಹೊಂದಿದ್ದು, ಈ ಪ್ರಶ್ನೆಯನ್ನು ಪರೀಕ್ಷಿಸುವುದು ಅನುಮತೀಯವಾಗಿದೆ.ವಾಸ್ತವವಾಗಿ, ಕಾನ್ಸಿಯನ್ಸಸ್ ಗ್ರೂಪ್ (ಮೇಲೆ ಹೇಳಿದ) ಮೊಕದ್ದಮೆಯಲ್ಲಿ ಸಂಕ್ಷಿಪ್ತವಾಗಿ ಇದನ್ನು ಮಾಡಲಾಗಿದೆ.ನಿಂದನಾ ಅರ್ಜಿಯನ್ನು ಸಲ್ಲಿಸಲಾಗಿದ್ದಲ್ಲಿ ಮತ್ತು ಹಿಂದಿನ ಆದೇಶವನ್ನನುಸರಿಸಿ ಪುನರೂರ್ಜಿತಗೊಳಿಸಿದಲ್ಲಿ, ನ್ಯಾಯಾಲಯವು ಹಾಗೆ ಮಾಡುವಾಗ, ಹಿಂದಿನ ಸಂದರ್ಭದ ಆಧಾರದ ಮೇಲೆ ಪ್ರಶ್ನೆಯನ್ನು ಪರಿಗಣಿಸುವ ಹಕ್ಕನ್ನು ಮೀಸಲಿರಿಸಿದೆ.ಸಾಲಿಸಿಟರ್ ಜನರಲ್ರು ಅಸಮರ್ಪಕವಾಗಿ ಅಥವಾ ಅಸಂಗತ ಕಾರಣದ ಮೇಲೆ ಸಮ್ಮತಿ ನೀಡಲು ನಿರಾಕರಿಸಿದರೆ, ನ್ಯಾಯಾಲಯವು ಆ ಪ್ರಶ್ನೆಯನ್ನು ಪರಿಗಣಿಸಬಹುದು.ಕಾನ್ಸಿಯನ್ಸಸ್ ಗ್ರೂಪ್ (ಮೇಲೆ ಹೇಳಿದ) ಮೊಕದ್ದಮೆಯಲ್ಲಿ, ಸಮ್ಮತಿಯನ್ನು ನಿರಾಕರಿಸಿ ಸಾಲಿಸಿಟರ್ ಜನರು ನೀಡಿದ ಕಾರಣಗಳನ್ನು ನ್ಯಾಯಾಲಯವು ಪರಿಶೀಲಿಸಿದೆ.ಆ ಮೊಕದ್ದಮೆಯಲ್ಲಿ ಈ ನ್ಯಾಯಾಲಯವು, ವಿಷಯವನ್ನು ಪರಿಶೀಲಿಸಿದ ನಂತರ, ಅಂಥ ಸಮ್ಮತಿಯನ್ನು ಸೂಕ್ತವಾಗಿಯೇ ನಿರಾಕರಿಸಿತ್ತು ಎಂದು ನಿರ್ಣಯಿಸಿದೆ.ಇದು, ನಿಂದನಾ ಅರ್ಜಿಯಲ್ಲಿ, ಸಮ್ಮತಿ ನೀಡಲಾಗಲಿ ಅಥವಾ ನೀಡದಿರಲಾಗಲಿ ಅಥವಾ ಅಥವಾ ಸಮ್ಮತಿಗಾಗಿ ಸಮ್ಮತಿಗಾಗಿ ಅರ್ಜಿಯನ್ನು ಪರಿಗಣಿಸದಿರಲು ನೀಡುವ ಕಾರಣಗಳು ಸಮರ್ಥನೀಯವಾಗಿರಬೇಕು ಮತ್ತು ಆ ವ್ಯವಹರಣೆಯಲ್ಲಿ ಸಾಲಿಸಿಟರ್ ಜನರಲ್ರನ್ನು ವ್ಯವಹರಣೆಗೆ ಪಕ್ಷಕಾರರನ್ನಾಗಿ ಮಾಡಬಾರದಾಗಿತ್ತು ಎಂಬುದಕ್ಕೆ ಒತ್ತು ನೀಡಬೇಕಾಗಿತ್ತಾದರೂ, ಆ ವ್ಯವಹರಣೆಯಲ್ಲಿ ಪ್ರಶ್ನೆಯನ್ನು ಪರಿಶೀಲಿಸಬೇಕೆ ಂ ಬುದು ನಿಂದನೆಗೆ ನೀಡಿದ ಸ ಂ ಪೂರ್ಣ ಉತ್ತರವಾಗಿದೆ.ನನ್ನ ಅಭಿಪ್ರಾಯದಂತೆ, ವ್ಯವಹರಣೆಗಳಲ್ಲಿ ಪಕ್ಷಕಾರರನ್ನಾಗಿ ಮಾಡಬೇಕೆಂಬುದಕ್ಕೆ ಯಾವ ನ್ಯಾಯಾಲಯ ಅಧಿಕಾರಿಯ ಕ್ರಮವನ್ನು ವಿಚಾರಣೆ ಮಾಡಬೇಕಿತ್ತೋ ಆ ಅಧಿಕಾರಿಗೆ ಇದು ಹೆಚ್ಚು ಸೂಕ್ತವಾದುದಾಗಿದ್ದು, ಇಲ್ಲವಾದಲ್ಲಿ, ಇದು ತೀರ್ಮಾನವನ್ನು ನೀಡುವ ಮೊದಲು ಉಭಯ ಪಕ್ಷಗಳ ಅಹವಾಲನ್ನು ಆಲಿಸತಕ್ಕದ್ದು ಎ ಂ ಬ ನಿ ಂ ತವದ ಉಲ್ಲ ಂ ಘನೆಯಾಗುವುದು.ಮಾನ್ಯ ಸಾಲಿಸಿಟರ್ ಜನರಲ್ರಾದ ಶ್ರೀ ಎ.ಕೆ. ಗಂಗೂಲಿಯವರ ಪರವಾಗಿ, ವಿಸ್ತೃತ ನಿವೇದನೆಗಳನ್ನು ಸಲ್ಲಿಸಲಾಗಿದೆ.ಶ್ರೀ ಗಂಗೂಲಿಯವರು, ಏಕಕಾಲದಲ್ಲಿ ಅಟಾರ್ನಿ ಜನರಲ್ರು ಸಮ್ಮತಿಯನ್ನು ಕೋರಿ ಅರ್ಜಿದಾರರು ಅನುಸರಿಸಿದ ಪ್ರಕ್ರಿಯೆಯು ಸೂಕ್ತವಾದುದಲ್ಲ ಮತ್ತು ಸಾಲಿಸಿಟರ್ ಜನರಲ್ರನ್ನು ಕೋರಿರುವುದು ಸೂಕ್ತ ಮತ್ತು ಕಾನೂನುಬದ್ಧವಲ್ಲ ಎಂದು ನಿವೇದಿಸಿಕೊಂಡಿದ್ದಾರೆ.ಈ ನಿವೇದನೆಯನ್ನು ಒಪ್ಪಲು ಸಾಧ್ಯವಿಲ್ಲ.ಅಟಾರ್ನಿ ಜನರಲ್ರು ಅಥವಾ ಸಾಲಿಸಿಟರ್ ಜನರಲ್ರು ಸಮ್ಮತಿಯನ್ನು ನೀಡದೇ ಇದ್ದರೂ, ಪಕ್ಷಕಾರರಿಗೆ ಪರಿಹಾರ ಇಲ್ಲದೆ ಹೋಗುವುದಿಲ್ಲ ಮತ್ತು ಇದನ್ನು ನ್ಯಾಯಾಲಯದ ಗಮನಕ್ಕೆ ತರಬಹುದು.ಈ ನ್ಯಾಯಾಲಯದ ಕಾನೂನು ಅಧಿಕಾರಿಗಳಲ್ಲಿ ನಿಹಿತವಾದ ವಿವೇಚನಾಧಿಕಾರವನ್ನು, ಕಾನೂನಿನ ನಿಯಮದ ಮೂಲಕ ನಿಯಂತ್ರಿತವಾದ ಸಮಾಜದ ಸಾರ್ವಜನಿಕರ ಉದ್ದೇಶಕ್ಕಾಗಿ ಬಳಸಬೇಕೆ ಂ ಬುದು ಸಮರ್ಥನೀಯವಾಗಿದೆ.ವಾಸ್ತವವಾಗಿ, ಕಾನ್ಸಿಯಸ್ ಗ್ರೂಪ್ (ಮೇಲೆ ಹೇಳಿದ) ಮೊಕದ್ದಮೆಯಲ್ಲಿ ಇದನ್ನು ಪರಿಶೀಲಿಸಲಾಗಿತ್ತು ಮತ್ತು ಸಂಬಂಧಪಟ್ಟ ಕಾನೂನು ಅಧಿಕಾರಿಯ ಗಮನಕ್ಕೆ ಬಂದ ಕೂಡಲೇ ಅದನ್ನು ಪರಿಶೀಲಿಸಬೇಕೆಂಬುದು ಹೆಚ್ಚು

ಸೂಕ್ತವಾಗುವುದು.ಇದು ಕ್ರಮ ತೆಗೆದುಕೊಳ್ಳುವುದನ್ನು ಚ ನಿರಾಕರಿಸಲು ಸೂಕ್ತ ಕಾರಣವಿರುವ ಮೊಕದ್ದಮೆಯಾಗಿದ್ದು, ನ್ಯಾಯಾಲಯವು ಪರಿಶೀಲಿಸಬಹುದಾಗಿದೆ.ಸಮ್ಮತಿ ನೀಡಲು ನಿರಾಕರಿಸುವುದು ಯಾವುದೇ ಹಕ್ಕನ್ನು ನಿರ್ಧರಿಸುವುದಿಲ್ಲ ಮತ್ತು ಇದು ಪುನರ ವಲೋಕಿಸಬಹುದಾದುದಲ್ಲ ಎ ಂ ದು ಶ್ರೀ ಗ ಂ ಗೂಲಿಯವರು ವಾದಿಸಿದ್ದಂತೆ ಇದೆಯೆಂದು ಹೇಳಲಾಗುವುದಿಲ್ಲ.ಸಮ್ಮತಿ ನೀಡಲು ನಿರಾಕರಿಸುವುದು ನಿಂದನೆಯನ್ನು ಪ್ರಾರಂಭಿಸುವ ಒಂದು ಮಾರ್ಗವನ್ನು ಮುಚ್ಚುತ್ತದೆ.ಇದರಲ್ಲಿ ಈ ಮೊದಲು ಹೇಳಿರುವಂತೆ, ಮೂರು ಬೇರೆ ಬೇರೆ ಮಾರ್ಗಗಳಿವೆ, ಅವುಗಳೆ ಂ ದರೆ ( 1) ನ್ಯಾಯಾಲಯವು ಸ್ವಯಂಪ್ರೇರಣೆಯಿಂದ ಸಂಜ್ಞೆಯತೆಯನ್ನು ತೆಗೆದುಕೊಳ್ಳುವುದು; ( 2) ಅಟಾರ್ನಿ ಜನರಲ್ ಅಥವಾ ಸಾಲಿಸಿಟರ್ ಜನರಲ್ರ ನಿರ್ಣಯದ ಆಧಾರದ ಮೇಲೆ; ಮತ್ತು ( 3) ಅಟಾರ್ನಿ ಜನರಲ್ರ ಅಥವಾ ಸಾಲಿಸಿಟರ್ ಜನರಲ್ರ ಲಿಖಿತ ಸಮ್ಮತಿಯೊಂದಿಗೆ ಯಾರೇ ಇತರ ವ್ಯಕ್ತಿಯ ಮೂಲಕ ಸಲ್ಲಿಸಬಹುದಾಗಿದೆ.ಮೊಕದ್ದಮೆಯಲ್ಲಿ, ಸ್ಪಷ್ಟವಾಗಿಯೇ ಅಟಾರ್ನಿ ಜನರಲ್ರು ಅಥವಾ ಸಾಲಿಸಿಟರ್ ಜನರಲ್ರು ಸ್ವತಃ ತಾವೇ ಅರ್ಜಿ ಸಲ್ಲಿಸಿಲ್ಲ.ಅರ್ಜಿದಾರರು ಅರ್ಜಿ ಸಲ್ಲಿಸಲು ಹಕ್ಕುಳ್ಳವರಾಗಿದ್ದಾಗ್ಯೂ, ಅಟಾರ್ನಿ ಜನರಲ್ ಅಥವಾ ಸಾಲಿಸಿಟರ್ ಜನರಲ್ ಸಮ್ಮತಿ ಇಲ್ಲದೆ ಕಾನೂನಿಗನುಸಾರವಾಗಿ ಅವರಿಗೆ ಅರ್ಜಿ ಸಲ್ಲಿಸಲಾಗುವುದಿಲ್ಲ ಮತ್ತು ಮೂರನೆಯದು ನ್ಯಾಯಾಲಯವು ಸ್ವಯಂ ಪ್ರೇರಣೆಯಿಂದ ಗಮನಕ್ಕೆ ತೆಗೆದುಕೊಳ್ಳುವುದು.ಆದರೆ ಇದರ ಹೊರತಾಗಿಯೂ, ದೇಶದ ನಾಗರಿಕನಿಗೆ ಸಮ್ಮತಿಯೊಂದಿಗೆ ಅರ್ಜಿಯನ್ನು ಸಲ್ಲಿಸುವ ಹಕ್ಕನ್ನು ನೀಡಲಾಗಿದೆ.ಈ ಮೊಕದ್ದಮೆಯಲ್ಲಿ, ಸಮ್ಮತಿಯನ್ನು ನೀಡಿರಲಿ ಅಥವಾ ನೀಡದಿರಲಿ, ಅಟಾರ್ನಿ ಜನರಲ್ರು ಹೇಳಿದ ಕಾರಣಗಳಿಗಾಗಿ ಪರಿಗಣಿಸಲಾಗುವುದಿಲ್ಲ.ಆ ಕಾರಣಗಳು, ನ್ಯಾಯಾಲಯವು ಸ್ವಯಂಪ್ರೇರಣೆಯಿಂದ ವಿಷಯವನ್ನು ಕೈಗೆತ್ತಿಕೊಳ್ಳುವುದಕ್ಕೆ ಸಂಬಂಧಿಸಿವೆ.ಇವು ಪರಸ್ಪರ ಸಂಬಂಧಿಸಿದವುಗಳಾಗಿವೆ.ವಿಷಯದ ಆ ಆ ಹಿನ್ನೆಲೆಯಲ್ಲಿ, ಇವು ಸಮರ್ಥನೀಯವಾಗಿವೆ ಮತ್ತು ಖಂಡಿತವಾಗಿಯೂ ಇದು, ಈ ಪದ್ಧತಿಯು ಏಕೆ ಸಮ್ಮತಿಯನ್ನು ಪಡೆಯುವುದರೊಂದಿಗೆ ಬೆಳೆದು ಬ ಂ ದಿತು ಎಂಬುದನ್ನು ಪರಿಗಣಿಸಲು ಸೂಚನಾತ್ಮಕವಾಗಬಹುದು.ಇದನ್ನು [1981] 2 ಎಸ್.ಸಿ.ಆರ್. 331 ರಲ್ಲಿ ವರದಿ ಮಾಡಿದ ಎಸ್.ಕೆ. ಸರ್ಕಾರ್-ವಿರುದ್ಧ ವಿ.ಸಿ. ಮಿಶ್ರ ಮೊಕದ್ದಮೆಯಲ್ಲಿ ವಿವರಿಸಲಾಗಿದೆ.ಅದರಲ್ಲಿ ನ್ಯಾಯಾಲಯದ ಪರವಾಗಿ ಮಾತನಾಡಿದ ಸರ್ಕಾರಿಯಾರವರು, ವರದಿಯ 339 ನೇ ಪುಟದಲ್ಲಿ, ಅಧಿನಿಯಮದ 15 ನೇ ಪ್ರಕರಣದ ಅಡಿಯಲ್ಲಿ ಸಂಜೇಯತೆಯನ್ನು ತೆಗೆದುಕೊಳ್ಳುವ ಈ ಪ್ರಕ್ರಿಯಾ ವಿಧಾನಗಳನ್ನು ನಿಯಮಿಸಿರುವ ಇಡೀ ಉದ್ದೇಶವು, ಉಚ್ಚ ಚ ನ್ಯಾಯಾಲಯದ ಅಥವಾ ಸರ್ವೋಚ್ಚ ನ್ಯಾಯಾಲಯದ ಮೌಲ್ಯಯುತ ಸಮಯವನ್ನು ನ್ಯಾಯಾಲಯ ನಿಂದನೆಯ ಕ್ಷುಲ್ಲಕ ದೂರುಗಳಿಂದ ವ್ಯರ್ಥವಾಗದಂತೆ ಉಳಿಸುವುದಾಗಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ.ಅನರ್ಹ ಅರ್ಜಿಯ ಮೂಲಕ ಒದಗಿಸಲಾದ ಮಾಹಿತಿಯ ಆಧಾರದ ಮೇಲಿನ ಈ ಸ್ವಯಂ ಪ್ರೇರಣೆಯ ಅಧಿಕಾರದ ಪುನರಾವರ್ತಿತ ಬಳಕೆಯು, (2) ನೇ ಉಪ-ಪ್ರಕರಣದಲ್ಲಿ ಉಪಬಂಧಿಸಿದ ಈ ಪ್ರಕ್ರಿಯಾ ರಕ್ಷಣೆಗಳನ್ನು ನಿರರ್ಥಕವನ್ನಾಗಿಸುತ್ತದೆ.ಅಂಥ ಸಂದರ್ಭಗಳಲ್ಲಿ, ವ್ಯವಹರಣೆಗಳನ್ನು ಪ್ರಾರಂಭಿಸುವ ಮೊದಲು ಅಡ್ವಕೇಟ್-ಜನರಲ್ರ ಸಲಹೆ ಮತ್ತು ನೆರವನ್ನು ಪಡೆಯಲು ಉಚ್ಚ ನ್ಯಾಯಾಲಯಕ್ಕೆ ಸಲಹೆ ನೀಡಲಾಗಿದೆ.ಈ ಸಂಬಂಧದಲ್ಲಿ, ಈ ಪ್ರಶ್ನೆಯನ್ನು ಪರಿಶೀಲಿಸಲು ನೇಮಕ ಮಾಡಿದ್ದ ಸನ್ಯಾಲ್ ಸಮಿತಿಯ ಅಭಿಪ್ರಾಯಗಳನ್ನು ನ್ಯಾಯಾಲಯವು ಪರಾಮರ್ಶಿಸಿದ್ದು, ಅದರಲ್ಲಿ ಹೀಗೆ ಅಭಿಪ್ರಾಯಪಡಲಾಗಿದೆ: "ಅಪರಾಧಿಕ ನಿಂದನೆಯ ಮೊಕದ್ದಮೆಯಲ್ಲಿ, ನ್ಯಾಯಾಲಯದ ಎದುರಿನಲ್ಲೇ ಎಸಗಿದ ನಿಂದನೆಯಾಗಿರದೆ, ಯಾವುದೋ ಇತರ ಏಜನ್ಸಿಯು ಅರ್ಜಿಯ ಆಧಾರದ ಮೇಲೆ ಕ್ರಮ ತೆಗೆದುಕೊಂಡಿದ್ದರೆ, ಯಾವುದೇ ರೀತಿಯಲ್ಲಿ ನ್ಯಾಯಾಡಳಿತದ

ಪಾವಿತ್ರ್ಯತೆಯೊಂದಿಗೆ ಹಸ್ತಕ್ಷೇಪವಿಲ್ಲದೆ, ಅದು ನ್ಯಾಯಾಲಯದ ಹೊರೆಯನ್ನು ತಗ್ಗಿಸುತ್ತದೆ ಎಂದು ನಾವು ಅಭಿಪ್ರಾಯಪಡುತ್ತೇವೆ.

ಅಂಥ ಕ್ರಮವಿಧಾನವು ಆರೋಪ ಹೊತ್ತಿರುವ ವ್ಯಕ್ತಿಗೆ ಮತ್ತು ದೊಡ್ಡ ಪ್ರಮಾಣದಲ್ಲಿ ಸಾರ್ವಜನಿಕರಿಗೆ ಸಾಕಷ್ಟು ಭರವಸೆ ನೀಡುತ್ತದೆ.ವಾಸ್ತವವಾಗಿ, ಕೆಲವು ಉಚ್ಚ ನ್ಯಾಯಾಲಯಗಳು ಈಗಾಗಲೇ, ಕಡೇಪಕ್ಷ ಮೊಕದ್ದಮೆಗಳ ಕೆಲವು ಪ್ರವರ್ಗಗಳಲ್ಲಿ ಅಡ್ವಕೇಟ್ ಜನರಲ್ರ ಸಹಯೋಗದಲ್ಲಿ ನಿಯಮಗಳನ್ನು ರಚಿಸಿವೆ ರಚಿಸಿವೆ ...... ...... " ನ್ಯಾಯಾಲಯವು ಸ್ವಯಂಪ್ರೇರಣೆಯಿಂದ ಕ್ರಮ ತೆಗೆದುಕೊಳ್ಳಲು ಒಲವನ್ನು ಹೊಂದಿದೆಯೆಂದು ಭಾವಿಸುವುದನ್ನು ಹೊರತುಪಡಿಸಿ, ಪಕ್ಷಕಾರರು ಸಮ್ಮತಿ ಮೂಲಕ ಮಾತ್ರವೇ ಅರ್ಜಿ ಸಲ್ಲಿಸಲು ಹಕ್ಕುಳ್ಳವರಾಗಿದ್ದರೆಂಬುದು ಪದ್ಧತಿಯಾಗಿತ್ತು.ಸೂಕ್ತ ಮೊಕದ್ದಮೆಯಲ್ಲಿ ಸಮರ್ಥನೀಯ ಕಾರಣವನ್ನು ನೀಡಲಾಗಿಲ್ಲದಿದ್ದರೆ ಮತ್ತು ಅಂಥ ಸಮ್ಮತಿಯನ್ನು ನಿರಾಕರಿಸಲಾಗಿದ್ದರೆ, ಅದನ್ನು ವಿಚಾರಿಸುವುದು ನ್ಯಾಯಾಲಯಕ್ಕೆ ಸೂಕ್ತವಲ್ಲವೆಂದು ಹೇಳಬಹುದೇ?

40. ಎ.ಐ.ಆರ್. 1975 ಅಲಹಾಬಾದ್ 52 ನಲ್ಲಿ ವರದಿಯಾದ ಜಿ.ಎನ್. ವರ್ಮಾ -ವಿರುದ್ಧ-ಹರಗೋವಿಂದ್ ದಯಾಳ್ ಮತ್ತು ಇತರರು ಮೊಕದ್ದಮೆಯಲ್ಲಿ, ಅಲಹಾಬಾದ್ ಉಚ್ಚ ನ್ಯಾಯಾಲಯದ ನಿರ್ಣಯದ ಕಡೆಗೆ ಶ್ರೀ ಗಂಗೂಲಿಯವರು ನಮ್ಮ ಗಮನ ಸೆಳೆದಿದ್ದು, ಅದರಲ್ಲಿ, ನ್ಯಾಯಾಲಯ ನಿಂದನೆ ಅಧಿನಿಯಮ, 1971 ರ ಅಧಿನಿಯಮಿತಿಯ ನಂತರವೂ, ನ್ಯಾಯಾಲಯ ನಿಂದನೆಯ ವ್ಯವಹರಣೆಗಳನ್ನು ತೆಗೆದುಕೊಳ್ಳಬೇಕೆಂದು ಉಪಬಂಧಿಸಿರುವ ನಿಯಮಗಳು ಅನ್ವಯವಾಗುವುದು ಮುಂದುವರಿಯುತ್ತದೆ ಎಂದು ವಿಭಾಗೀಯ ಪೀಠವು ಪುನರುಚ್ಚರಿಸಿದೆ.ಆದುದರಿಂದ, ನ್ಯಾಯಾಲಯವು ಸ್ವಯಂಪ್ರೇರಿತವಾಗಿ ಸಂಜ್ಞೆಯತೆಯನ್ನು ತೆಗೆದುಕೊಳ್ಳಬಹುದಾಗಿದೆ ಮತ್ತು ಖಾಸಗಿ ವ್ಯಕ್ತಿಯು ಅರ್ಜಿಯಲ್ಲಿ ಒಳಗೊಂಡಿರುವ ಮಾಹಿತಿಯನ್ನು ಬಳಸಿಕೊಳ್ಳಬಹುದಾಗಿದೆ.ನಾವು ಇದರಲ್ಲಿ ಈ ಮೊದಲು ಹೇಳಿದಂತೆ, ನಿಸ್ಸಂದೇಹವಾಗಿ ನ್ಯಾಯಾಲಯವು ಸ್ವಯಂ ಪ್ರೇರಿತವಾಗಿ ಸಂಜ್ಞೆಯತೆಯನ್ನು ತೆಗೆದುಕೊಳ್ಳಬಹುದಾದರೂ, ಸಾರ್ವಜನಿಕರು ಸಹ ನ್ಯಾಯಾಲಯಯಕ್ಕೆ ಅರ್ಜಿ ಸಲ್ಲಿಸುವ ಹಕ್ಕನ್ನು ಹೊಂದಿರುತ್ತಾರೆ.ಈ ಹಕ್ಕನ್ನು ಕುರಿತು ನ್ಯಾಯಾಲಯದ ಗಮನಕ್ಕೆ ತರುವುದು ಅಟಾರ್ನಿ ಜನರಲ್ರಾಗಲಿ ಅಥವಾ ಸಾಲಿಸಿಟರ್ ಜನರಲ್ರಾಗಲಿ ಸಮ್ಮತಿ ನೀಡುವುದನ್ನು ಅವಲಂಬಿಸಿರುತ್ತದೆ ಮತ್ತು ಆ ಸಮ್ಮತಿಯನ್ನು ಕಾರಣಗಳಿಲ್ಲದೆ ತಡೆಹಿಡಿದರೆ ಅಥವಾ ಅಧಿನಿಯಮದ 15 ನೇ ಪ್ರಕರಣದ ಅಡಿಯಲ್ಲಿ ಯಾರೇ ಇತರ ವ್ಯಕ್ತಿಗೆ ಸೃಜಿಸಲ್ಪಟ್ಟ ಆ ಹಕ್ಕನ್ನು ಪರಿಗಣಿಸದೆ ಇದ್ದರೆ, ಅದನ್ನು ನ್ಯಾಯಾಲಯಕ್ಕೆ ಸಲ್ಲಿಸಿದ ಅರ್ಜಿಯ ಆಧಾರದ ಮೇಲೆ ವಿಚಾರಣೆ ಮಾಡಬೇಕಾಗುತ್ತದೆ.

59. ಮೊಟ್ಟಮೊದಲನೆಯದಾಗಿ, ಅಟಾರ್ನಿ ಜನರಲ್ರ/ಸಾಲಿಸಿಟರ್ ಜನರಲ್ರ ಕಾರ್ಯಪಾತ್ರವು, ಸಾರ್ವಜನಿಕರ ಜೊತೆ ಜೊತೆಗೆ ಆರೋಪಿತ ನಿಂದಕನ ಹಕ್ಕುಗಳನ್ನು ಒಳಗೊಂಡಿರುವ ದಾವೆಯನ್ನು ಕುರಿತು ನಿರ್ಧರಿಸುವ ನ್ಯಾಯಿಕ ಸ್ವರೂಪದ ಕಾರ್‍ಯಪಾತ್ರಕ್ಕಿಂತ ಹೆಚ್ಚಾಗಿ, ಆಡಳಿತಾತ್ಮಕ ವಿಷಯದಲ್ಲಿ ನ್ಯಾಯಾಲಯಕ್ಕೆ ನೆರವು ನೀಡುವ ನ್ಯಾಯಾಲಯ ಸಲಹೆಗಾರನ ಕಾರ್ಯಪಾತ್ರಕ್ಕೆ ಹೆಚ್ಚು ಸಂಬಂಧ ಹೊಂದಿರುತ್ತದೆ.[1981] 2 ಎಸ್.ಸಿ.ಆರ್. 331 ರಲ್ಲಿ ವರದಿಯಾದ ಎಸ್.ಸಿ. ಸರ್ಕಾರ್ -ವಿರುದ್ಧ ವಿ.ಸಿ. ಮಿಶ್ರ ಮೊಕದ್ದಮೆಯಲ್ಲಿ ಸರ್ವೋಚ್ಚ

ನ್ಯಾಯಾಲಯವು ಸೂಚಿಸಿರುವಂತೆ, ನಿಂದನೆಯ ಚ ಅಪರಾಧಿಯಾಗಿರುವ ವ್ಯಕ್ತಿಗಳನ್ನು ಶಿಕ್ಷಿಸಲು ಸ್ವಯಂಪ್ರೇರಿತ ಅಧಿಕಾರವನ್ನು ಪುನರಾವರ್ತಿತವಾಗಿ ಬಳಕೆ ಮಾಡುವಲ್ಲಿ ನ್ಯಾ ಂ ತಾ ಲ ಂ ತಕ್ಕೆ ಕೆಲವೊ ಂ ದು ತೊ ಂ ದರೆಗಳಿವೆ.ಕ ಅಟಾರ್ನಿ ಜನರಲ್ರು ಎರಡು ರೀತಿಗಳಲ್ಲಿ ನೆರವು ಮತ್ತು ಸಹಾಯ ನೀಡುತ್ತಾರೆ.ಒಂದು ಕಡೆ, ನ್ಯಾಯಾಲಯದ ಘನತೆ ಮತ್ತು ಪ್ರತಿಷ್ಠೆಯನ್ನು ಎತ್ತಿಹಿಡಿಯುವ ಅಗತ್ಯವಿದೆಯೆಂದು ಅವರು ಭಾವಿಸುವ ಮೊಕದ್ದಮೆಗಳು ಗಮನಕ್ಕೆ ಬಂದಾಗ, ಕ್ರಮಕ್ಕಾಗಿ ನ್ಯಾಯಾಲಯಕ್ಕೆ ಅವರು ಅರ್ಜಿ ಸಲ್ಲಿಸುತ್ತಾರೆ.

ಇನ್ನೊಂದೆಡೆ, ನ್ಯಾಯಾಲಯದ ಮೌಲ್ಯಯುತ ಸಮಯವನ್ನು ಉಳಿಸಲು ಸಾರ್ವಜನಿಕರಿಂದ ಬಂದ ದೂರುಗಳನ್ನು ಪರಿಶೀಲಿಸುವಲ್ಲಿ ಅವರು ಸಹಾಯ ಮಾಡುತ್ತಾರೆ.ಹೌಸ್ ಆಫ್ ಲಾರ್ಡ್ಸ್ನ ಥಾಲಿಡೋಮೈಡ್ ಮೊಕದ್ದಮೆ:ಎ.ಜಿ. -ವಿರುದ್ಧ-ಟೈಮ್ಸ್ ನ್ಯೂಸ್ ಪೇಪರ್, [1972] ಎ.ಸಿ. 277 ರಲ್ಲಿ, ಇನ್ನೊಂದು ಸಂದರ್ಭದಲ್ಲಿ, ಗೌರಿಯಲ್ -ವಿರುದ್ಧ ಯೂನಿಯನ್ ಆಫ್ ಪೋಸ್ಟ್ ಆಫೀಸ್ ವರ್ಕರ್ [1978] ಎ.ಸಿ. 435 ಮೊಕದ್ದಮೆಯಲ್ಲಿ ಲಾರ್ಡ್ ರೀಡ್ ಮತ್ತು ಲಾರ್ಡ್ ಕ್ರಾಸ್ರವರ ಹಾಗೂ ಮೇಲ್ಮನವಿ ನ್ಯಾಯಾಲಯದಲ್ಲಿ ಇದೇ ಮೊಕದ್ದಮೆ ಕುರಿತು (1977-1 ಕ್ಯು.ಬಿ. 729) ಲಾರ್ಡ್ ಡೆನ್ನಿಂಗ್ ಮತ್ತು ಲಾಟನ್ ಎಲ್ಜೆ ಇವರು ನೀಡಿರುವ ಅಭಿಪ್ರಾಯಗಳು ಗಮನಕ್ಕೆ ತರಲಾಗಿದ್ದರೂ, ಅಟಾರ್ನಿ ಜನರಲ್ರು ಪ್ರಕಾರಗಳ ಈ ಅಂಶದ ಬಗ್ಗೆ ಗಮನ ಸೆಳೆಯುತ್ತವೆ ".

27. ಬಾಳ್ ಠಾಕ್ರೆ -ವಿರುದ್ಧ-ಹರೀಶ್ ಪಿಂಪಲ್ಂಟೆ ಮತ್ತು ಇನ್ನೊಬ್ಬರು (ಮೇಲಿನಂತೆ) ಮೊಕದ್ದಮೆಯಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು, ನ್ಯಾಯಾಲಯ ನಿಂದನೆ ಅಧಿನಿಯಮದ 15 ನೇ ಪ್ರಕರಣದೊಂದಿಗೆ ಓದಲಾಗುವ ಸಂವಿಧಾನದ 215 ನೇ ಅನುಚ್ಛೇದದ ಉಪಬಂಧಗಳನ್ನು ಪರಿಗಣಿಸಿ, 13, 14, 15 ಮತ್ತು 18 ನೇ ಕಂಡಿಕೆಗಳಲ್ಲಿ ಈ ಕೆಳಗಿನಂತೆ ಅಭಿಪ್ರಾಯಪಟ್ಟಿದೆ:

" 13.ಪಿ.ಎನ್. ದುಡಾ ಮೊಕದ್ದಮೆಯಲ್ಲಿ (ಮೇಲೆ ಹೇಳಿದ), ಈ ಕೆಳಗಿನಂತೆ ಅಭಿಪ್ರಾಯಪಡಲಾಗಿದೆ:

54. ಅಧಿನಿಯಮ ಮತ್ತು ನಿಯಮಗಳನ್ನು ಒಟ್ಟಿಗೆ ಅವಲೋಕಿಸಲಾಗಿ, ಈ ನ್ಯಾಯಾಲಯಕ್ಕೆ ಸಂಬಂಧಪಡುವಷ್ಟರ ಮಟ್ಟಿಗೆ, ನಿಂದನಾ ಕ್ರಮವನ್ನು ನ್ಯಾಯಾಲಯವು ಸ್ವಯಂಪ್ರೇರಿತವಾಗಿ ಅಥವಾ ಅಟಾರ್ನಿ ಜನರಲ್ರು (ಅಥವಾ ಸಾಲಿಸಿಟರ್ ಜನರಲ್) ಕೋರಿಕೆಯ ಮೇರೆಗೆ ಅಥವಾ ಅವರ ಲಿಖಿತ ಸಮ್ಮತಿಯ ಮೇರೆಗೆ ಇತರ ಯಾರೇ ವ್ಯಕ್ತಿಯ ಮನವಿಯ ಆಧಾರದ ಮೇಲೆ ತೆಗೆದುಕೊಳ್ಳಬಹುದು ಎಂಬುದು ಸ್ಪಷ್ಟವಾಗುತ್ತದೆ.ನ್ಯಾಯಾಲಯ ಅಥವಾ ಅಟಾರ್ನಿ ಜನರಲ್ರು ವಿಷಯ ಕುರಿತು ಕಾರಪ್ರವೃತ್ತ ವಾಗುವುದನ್ನು ಆಯ್ಕೆ ಮಾಡಿಕೊಳ್ಳುವಲ್ಲಿ ಯಾವುದೇ ತೊಂದರೆ ಇಲ್ಲ. ಆದರೆ, ಇದನ್ನು ಮಾಡದೇ ಇದ್ದಾಗ ಮತ್ತು ಅಂಥ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಖಾಸಗಿ ವ್ಯಕ್ತಿಯು ಅಪೇಕ್ಷಿಸಿದಾಗ, ಮೂರರಲ್ಲಿ ಒಂದು ಕ್ರಮ ಆತನಿಗೆ ಮುಕ್ತವಾಗಿರುತ್ತದೆ.ತನ್ನ ಸ್ವಾಧೀನದಲ್ಲಿರುವ ಮಾಹಿತಿಯನ್ನು ಆತನು ನ್ಯಾಯಾಲಯದ ಮುಂದೆ ಮಂಡಿಸಿ, ಕ್ರಮ ತೆಗೆದುಕೊಳ್ಳಲು ನ್ಯಾಯಾಲಯವನ್ನು ಕೋರಬಹುದು (ನೋಡಿ ಸಿ.ಕೆ. ದರಿ-ವಿರುದ್ಧ ಒ.ಪಿ.).

ಗುಪ್ತಾ ಮತ್ತು ಸರ್ಕಾರ್ ವಿರುದ್ಧ – ಮಿಶ್ರಾ ಮೊಕದ್ದಮೆ):D ಆತನು ಮಾಹಿತಿಯನ್ನು ಅಟಾರ್ನಿ ಜನರಲ್ರು ಮುಂದೆ ಮಂಡಿಸಿ, ಕ್ರಮ ಕೈಗೊಳ್ಳುವಂತೆ ಅವರನ್ನು ಕೋರಬಹುದು; ಅಥವಾ ಆತನು ಮಾಹಿತಿಯನ್ನು ಅಟಾರ್ನಿ ಜನರಲ್ರು ಮುಂದೆ ಮಂಡಿಸಿ, ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಲು ತನಗೆ ಅನುಮತಿ ನೀಡುವಂತೆ ಅವರಲ್ಲಿ ಮನವಿ ಮಾಡಿಕೊಳ್ಳಬಹುದು. "

14. ದುಡಾ ಮೊಕದ್ದಮೆಯಲ್ಲಿ ನೀಡಿದ ನಿರ್ದೇಶನಗಳು ಮತ್ತು ವಿಧಿಸಲಾದ ಕಾರವಿಧಾನವು, ನ್ಯಾಯಾಲಯ ನಿಂದನೆಗಾಗಿ ಸ್ವಯಂಪ್ರೇರಿತ ಕ್ರಮ ತೆಗೆದುಕೊಳ್ಳಲು, ಅದರ ಮುಂದೆ ಕೆಲವು ಮಾಹಿತಿಗಳನ್ನು ಮಂಡಿಸಿದಾಗ, ನ್ಯಾಯಾಲಯವು ಸ್ವಯಂಪ್ರೇರಿತವಾಗಿ ಕ್ರಮ ಪ್ರಾರ ಂ ಭಿಸುವಂಥ ಮೊಕದ್ದಮೆಗಳಿಗೆ ಮಾತ್ರ ಅನ್ವಯವಾಗುತ್ತವೆ.

15. ಜೆ.ಆರ್. ಪರಾಶರ್, ವಕೀಲರು ಮತ್ತು ಇತರರು ವಿರುದ್ಧ ಪ್ರಶಾಂತ್ ಭೂಷಣ್, ವಕೀಲರು ಮತ್ತು ಇತರರು [(2001) 6 ಎಸ್ಸಿಸಿ 735] ಮೊಕದ್ದಮೆಯಲ್ಲಿನ ಕೆಲವು ಅಭಿಪ್ರಾಯಗಳನ್ನು ಉಲ್ಲೇಖಿಸುವುದು ಉಪಯುಕ್ತವಾಗುವುದು.ಆ ಮೊಕದ್ದಮೆಯಲ್ಲಿ, ಅಧಿ ನಿ ಂ ತ ಮ ಂ ದ 15 ನೇ ಪ್ರಕರಣದ ಂ ತೆ ಇರುವ ಸರ್ವೋಚ್ಚ ನ್ಯಾಯಾಲಯದ ನಿಂದನೆ, 1975 ರ ವ್ಯವಹರಣೆಗಳನ್ನು ನಿಯಂತ್ರಿಸುವ ನಿಯಮಗಳ 3 ನೇ ನಿಯಮವನ್ನು ಗಮನಿಸಲಾಗಿ, ಅಪರಾಧಿ ಕ ನಿ ಂ ದನೆಯು ಮೊಕದ್ದಮೆಗಳಲ್ಲಿ ( ಎ) ಸ್ವಯಂಪ್ರೇರಿತವಾಗಿ; ಅಥವಾ (ಬಿ) ಅಟಾರ್ನಿ ಜನರಲ್ರು ಅಥವಾ ಸಾಲಿಸಿಟರ್ ಜನರಲ್ರು ಸಲ್ಲಿಸಿದ ಅರ್ಜಿಯ ಆಧಾರದ ಮೇಲಾಗಲಿ ಅಥವಾ (ಸಿ) ಯಾರೇ ವ್ಯಕ್ತಿಯು ಸಲ್ಲಿಸಿದ ಅರ್ಜಿಯ ಆಧಾರದ ಮೇಲಾಗಲಿ ನ್ಯಾಯಾಲಯಗಳು ಕ್ರಮ ತೆಗೆದುಕೊಳ್ಳಬಹುದೆಂದು ಅದು ಉಪಬಂಧಿಸುತ್ತದೆ ಹಾಗೂ ಅಟಾರ್ನಿ ಜನರಲ್ ಅಥವಾ ಸಾಲಿಸಿಟರ್ ಜನರಲ್ರ ಲಿಖಿತದಲ್ಲಿನ ಸಮ್ಮತಿಯೊಂದಿಗಿನ ಅಪರಾಧಿಕ ನಿಂದನೆಯ, ಅಲ್ಲದೆ 3 (ಬಿ) ಮತ್ತು (ಸಿ) ನಿಯಮಗಳ ಮೇರೆಗಿನ ಅರ್ಜಿಗಳನ್ನು ಮಾತ್ರವೇ ಪ್ರಾಥಮಿಕ ಸುನಾವಣೆಗಾಗಿ ನ್ಯಾಯಾಲಯದ ಮುಂದೆ ಮಂಡಿಸಬೇಕೆಂದು ಉಪಬಂಧಿಸುವ 5 ನೇ ನಿಯಮದ ಸಂದರ್ಭದಲ್ಲಿ ಮತ್ತು ನೋಟೀಸು ನೀಡುವುದಕ್ಕೆ ಸಂಬಂಧಿಸಿದ ಆದೇಶಗಳಿಗಾಗಿ, ಅಟಾರ್ನಿ ಜನರಲ್ರು ಅಥವಾ ಸಾಲಿಸಿಟರ್ ಜನರಲ್ರು ಸಮ್ಮತಿ ನೀಡಿದ್ದರೆ ಮಾತ್ರ ಅನುಮತಿಗಾಗಿನ ಅರ್ಜಿಯಾಗಿ ರಿಜಿಸ್ಟ್ರಿಯು ವಿಷಯವನ್ನು ನ್ಯಾಯಾಲಯದ ಮುಂದೆ ಪಟ್ಟಿ ಮಾಡಬಹುದಾಗಿದೆ ಎಂದು ಅಭಿಪ್ರಾಯಪಡಲಾಗಿತ್ತು.ಅಂಥ ಸ ಂ ದರ್ಭದಲ್ಲಿ, ಅಟಾರ್ನಿ ಜನರಲ್ರು ಜನರಲ್ರು ವಿಷಯ ಕುರಿತು ವ್ಯವಹರಿಸಲು ನಿರ್ದಿಷ್ಟವಾಗಿ ನಿರಾಕರಿಸಿದ್ದರು ಮತ್ತು ಸಾಲಿಸಿಟರ್ ಜನರಲ್ರ ಸಮ್ಮತಿ ನೀಡಲು ಅವರಿಗೆ ಯಾವುದೇ ಮನವಿಯನ್ನು ಸಲ್ಲಿಸಿರಲಿಲ್ಲ.ಆದುದರಿಂದ, ರಿಜಿಸ್ಟ್ರಿಯು ಸದರಿ ಅರ್ಜಿಯನ್ನು ಪ್ರಾಥಮಿಕ ಸುನಾವಣೆಗಾಗಿ ನ್ಯಾಯಾಲಯದ ಮುಂದೆ ಮಂಡಿಸಬಾರದಾಗಿತ್ತು ಎಂಬ ತೀರ್ಮಾನಕ್ಕೆ ಬರಲಾಗಿತ್ತು.ಸ್ವಯಂಪ್ರೇರಿತ ಸಂಜ್ಞೇಯತೆಯನ್ನು ತೆಗೆದುಕೊಳ್ಳುವ ಕುರಿತು ವ್ಯವಹರಿಸಿ, 28 ನೇ ಕ ಂ ಡಿಕೆಯಲ್ಲಿ ಈ ಕ್ ಳ ಗಿನ ಂ ತೆ ಅಭಿಪ್ರಾಯಪಡಲಾಗಿತ್ತು:

" ಸಹಜವಾಗಿಯೇ, ಅರ್ಜಿದಾರರು ಮನವಿ ಮಾಡಿಕೊಂಡಿದ್ದರೆ, ಈ ನ್ಯಾಯಾಲಯವು ಸ್ವಯಂಪ್ರೇರಿತವಾಗಿ ಸಂಜ್ಞೇಯತೆಯನ್ನು ತೆಗೆದುಕೊಳ್ಳುತ್ತಿತ್ತು.

ಅವರು ಮನವಿ ಮಾಡಿಕೊಂಡಿರುವುದಿಲ್ಲ.ಅವರು ಮನವಿ ಮಾಡಿಕೊಂಡಿದ್ದರೂ, ನ್ಯಾಯಾಲಯವು ಅರ್ಜಿದಾರರ ಹೇಳಿಕೆಗಳ ಆಧಾರದ ಮೇಲೆ ಕ್ರಮಕೈಗೊಳ್ಳಬೇಕಿತ್ತೆ, ಪೊಲೀಸರು ಅರ್ಜಿದಾರರ ದೂರಿನ ಸಂಜ್ಞೇಯತೆ ತೆಗೆದುಕೊಳ್ಳಲು ನಿರಾಕರಿಸಿದ್ದರು ಎಂದು ಅವರು ನೇರವಾಗಿ ಬಹಿರಂಗಪಡಿಸಿದ್ದರೇ ಎ ಂ ಬುದು ಸ ಂ ಶಯಾತ್ಮಕವಾಗಿದೆ.ಯಾವುದೇ ಸಂದರ್ಭದಲ್ಲೂ, ಅಟಾರ್ನಿ ಜನರಲ್ರು ವ್ಯವಹರಣೆಗಳನ್ನು ಪ್ರಾರಂಭಿಸುವುದು ಅಥವಾ ಕೊನೇಪಕ್ಷ ಅವರ ಸಮ್ಮತಿ ನೀಡುವುದು ಅಗತ್ಯವಾದ ವಿಷಯಗಳನ್ನು ಹೊರತುಪಡಿಸಿ, ಸ್ವಯಂಪ್ರೇರಿತವಾಗಿ ಕ್ರಮ ಕೈಗೊಳ್ಳುವ ಅಧಿಕಾರವನ್ನು ವಿರಳವಾಗಿ ಚಲಾಯಿಸಬೇಕಾಗುತ್ತದೆ.ಸಾಮಾನ್ಯವಾಗಿ, ನ್ಯಾಯಾಲಯಗಳು ದಾಖಲೆಗಳ ಪರಿಶೀಲನೆಯಂಥ ಅಥವಾ ಸುದ್ದಿ

ಪತ್ರಿಕೆಯಲ್ಲಿನ ವರದಿಯನ್ನು ಓದಿದ್ದರ ಆಧಾರದ ಮೇಲೆ ಅಥವಾ ಸಾರ್ವಜನಿಕ ಭಾಷಣದಿಂದ ಆಲಿಸುವಂಥ ಅಥವಾ ಸ್ವಯಂವೇದ್ಯ ದಸ್ತಾವೇಜಿನಂಥ ಅದರ ಸ್ವಂತದ ಮೂಲಗಳಿಂದ ಮಾಹಿತಿಯನ್ನು ಪಡೆದ ಸಂದರ್ಭದಲ್ಲಿ ಮಾತ್ರವೇ ಈ ಅಧಿಕಾರ ಚಲಾವಣೆಯನ್ನು ಪ್ರಯೋಗಿಸುತ್ತವೆ.ಇಲ್ಲವಾದಲ್ಲಿ, 15 ನೇ ಪ್ರಕರಣದ ( 1) ನೇ ಉಪ-ಪ್ರಕರಣವು ನಿರರ್ಥಕವಾಗಬಹುದು. "

18. ನಿಂದನಾ ಕ್ರಮದ ಮತ್ತು ಮುಖ್ಯ ನ್ಯಾಯಾಧೀಶರ ಅಧಿಕಾರಗಳ ಸಂಬಂಧದಲ್ಲಿ, ಇದರಲ್ಲಿ ಈ ಮೊದಲು ನಾವು ಗಮನಿಸಿರುವುದರ ಹಿನ್ನೆಲೆಯಲ್ಲಿ ದುಡಾ ಮೊಕದ್ದಮೆಯ ನಿರ್ದೇಶನಗಳನ್ನು ನೋಡಿದಾಗ ಮತ್ತು ವಿಶ್ಲೇಷಿದಾಗ, ನ್ಯಾಯಾಲಯವು ಸ್ವಂತ ನಿರ್ಣಯದ ಮೇಲೆ ಸ್ವಯಂಪ್ರೇರಿತವಾಗಿ ಯಾವ ನಿಂದನಾ ಕ್ರಮಗಳನ್ನು ತೆಗೆದುಕೊಳ್ಳಲು ಉದ್ದೇಶಿಸುವುದೋ ಅವುಗಳ ಸುಗಮ ಕಾವ್ಯನಿರ್ವಹಣೆಯನ್ನು ಮತ್ತು ಸುವ್ಯವಸ್ಥೆಗೊಳಿಸುವುದನ್ನು ನಿಶ್ಚಿತಪಡಿಸಲು ಉಚ್ಚ ನ್ಯಾಯಾಲಯಗಳು ಅನುಸರಿಸಬೇಕಾದ ಕಾರ್ಯವಿಧಾನವನ್ನು ಅದು ಗೊತ್ತುಪಡಿಸುವುದೆ ೦ ಬುದು ಸ್ಪಷ್ಟವಾಗುತ್ತದೆ.ಈ ನಿರ್ದೇಶನಗಳು, ಉಚ್ಚ ನ್ಯಾಯಾಲಯದ ಅಧಿಕಾರವನ್ನು ಚ ಮೊಟಕುಗೊಳಿಸುವ ಅಥವಾ ತೆಗೆದುಹಾಕುವ ಪರಿಣಾಮವನ್ನು ಹೊಂದಿರುವುದಿಲ್ಲ.ಅಧಿನಿಯಮದ 15 ನೇ ಪ್ರಕರಣದ ಅಡಿಯಲ್ಲಿ ಅನ್ಯಥಾ ಅಪೂರ್ಣವಾಗಿರುವ ನಿಂದನಾ ಅರ್ಜಿಯಲ್ಲಿ ಒದಗಿಸಿದ ಮಾಹಿತಿಯ ಆಧಾರದ ಮೇಲೆ ಸ್ವಯಂಪ್ರೇರಿತ ಅಧಿಕಾರದ ಪುನರಾವರ್ತಿತ ಬಳಕೆಯು, ಅಡ್ವಕೇಟ್ ಜನರಲ್ರ ಸಮ್ಮತಿಯ ಪ್ರಕ್ರಿಯಾ ಸುರಕ್ಷತೆಯನ್ನು ನಿರರ್ಥಕಗೊಳಿಸುತ್ತದೆ.ದುಡಾ ಮೊಕದ್ದಮೆಯಲ್ಲಿ ನೀಡಿದ ನಿರ್ದೇಶನಗಳು ಕಾನೂನುಬದ್ಧವಾಗಿವೆ ಮತ್ತು ಸಿಂಧುವಾಗಿವೆ ಎಂಬುದು ನಮ್ಮ ಅಭಿಪ್ರಾಯವಾಗಿದೆ.

28. ರತನ್ ಚಂದ್ರ ಶರ್ಮ ಮತ್ತು ಇನ್ನೊಬ್ಬರು –ವಿರುದ್ಧ-ಕು.ಶೀತಲ್ ಶರ್ಮ ಮತ್ತು ಇತರರು (ಮೇಲಿನಂತೆ) ಮೊಕದ್ದಮೆಯಲ್ಲಿ ಈ ನ್ಯಾಯಾಲಯದ ವಿಭಾಗೀಯ ಪೀಠವು, 19 ನೇ ಮತ್ತು 20 ನೇ ಕಂಡಿಕೆಗಳಲ್ಲಿ ಈ ಕೆಳಗಿನಂತೆ ಅಭಿಪ್ರಾಯಪಟ್ಟಿದೆ.

"19. ಅಧಿನಿಯಮದ 15 ನೇ ಪ್ರಕರಣದ ಉಪಬಂಧಗಳು ಪ್ರಕ್ರಿಯಾತ್ಮಕ ಸ್ವರೂಪದ್ದಾಗಿವೆ ಮತ್ತು ಅಧಿನಿಯಮದ ಉಪಬಂಧಗಳ ಅಡಿಯಲ್ಲಿ ಅ ನಿಂದಕನನ್ನು ಶಿಕ್ಷಿಸಲು ಉಚ್ಚ ನ್ಯಾಯಾಲಯಕ್ಕೆ ಅಥವಾ ಸರ್ವೋಚ್ಚ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಬಯಸುವ ಯಾರೇ ವ್ಯಕ್ತಿಯು, ಲಿಖಿತದಲ್ಲಿ ಅಡ್ವಕೇಟ್ ಜನರಲ್ರ ಅಥವಾ ಸಂದರ್ಭಾನುಸಾರ ಅಟಾರ್ನಿ ಜನರಲ್ರ ಸಮ್ಮತಿಯನ್ನು ಪಡೆಯಬೇಕು ಎಂಬುದನ್ನು ಕಾನೂನು ಕಡ್ಡಾಯಪಡಿಸುತ್ತದೆ.ಅಡ್ವಕೇಟ್ ಜನರಲ್ರು, ಸಮರ್ಥನೀಯ ಕಾರಣಗಳಿದ್ದರೂ, ಲಿಖಿತದಲ್ಲಿ ಸಮ್ಮತಿ ನೀಡಲು ನಿರಾಕರಿಸಿದ ಅಥವಾ ನಿಂದಕನ ವಿರುದ್ಧ ನಿಂದನಾ ವ್ಯವಹರಣೆಗಳನ್ನು ಪ್ರಾರಂಭಿಸಲು, ಅಡ್ವಕೇಟ್ ಜನರಲ್ರು ಕೆಲವರಿಗೆ ಸಮ್ಮತಿಯನ್ನು ನೀಡಿ, ಇತರರಿಗೆ ತಮ್ಮ ಸಮ್ಮತಿ ನೀಡಲು ನಿರಾಕರಿಸಿದ ಸಂದರ್ಭದಲ್ಲಿ ಸಹ, ಪದ್ಯಾಯ ಪರಿಹಾರ ಪಡೆಯುವುದಕ್ಕೆ ಉಪಬಂಧಿಸಿ ಅಧಿನಿಯಮದಲ್ಲಿ ಯಾವುದೇ ಉಪಬಂಧವನ್ನು ಕಲ್ಪಿಸಿರುವುದಿಲ್ಲ.

20. ಈ ಅಭಿಪ್ರಾಯವು, ಈಗ ಎತ್ತಿದ ಪ್ರಶ್ನೆಗೆ ನಿರ್ದಿಷ್ಟವಾಗಿ ಉತ್ತರಿಸದಿದ್ದರೂ, ಅಂಥ ಸಂದರ್ಭದಲ್ಲಿ, ಈ ನ್ಯಾಯಾಲಯವು, ಸ್ವಯಂಪ್ರೇರಿತ ಸಂಜ್ಞೇಯತೆ ತೆಗೆದುಕೊಳ್ಳುವ ಅಥವಾ ಅರ್ಜಿಯು ಕ್ಷುಲ್ಲಕವಾಗಿದ್ದರೆ ಅಥವಾ ಆರೋಪಿಸಲಾದ ನಿಂದನೆಯು ತಾಂತ್ರಿಕವಾದುದು ಅಥವಾ ಅಪ್ರಯೋಜಕವಾದುದು ಆಗಿದ್ದರೆ, ಪಕ್ಷಕಾರನ ಅರ್ಜಿಯನ್ನು ತಿರಸ್ಕರಿಸುವ ಪೂರ್ಣ ವಿವೇಚನಾಧಿಕಾರವನ್ನು ಹೊಂದಿದೆ.ಆದಾಗ್ಯೂ, ನ್ಯಾಯಾಲಯವು ಈ ಅಧಿಕಾರವನ್ನು ವಿರಳವಾಗಿ ಚಲಾಯಿಸಬೇಕು.ನಮ್ಮ ಅಭಿಪ್ರಾಯದಲ್ಲಿ, ಅಡ್ವಕೇಟ್

ಜನರು ಸಮ್ಮತಿ ನೀಡಲು ನಿರಾಕರಿಸಿದಂಥ ಸಂದರ್ಭಗಳಲ್ಲಿ, ಇದು ನ್ಯಾಯದ ಉದ್ದೇಶವನ್ನು ಈಡೇರಿಸುವುದು.ಇಲ್ಲವಾದಲ್ಲಿ, ಸೂಕ್ತ ಮೊಕದ್ದಮೆಯಲ್ಲಿ, ಅಡ್ವಕೇಟ್ ಜನರಲ್ರು ಲಿಖಿತದಲ್ಲಿ ತಮ್ಮ ಸಮ್ಮತಿಯನ್ನು ನೀಡಲು ನಿರಾಕರಿಸಿದರೆ, ಅಧಿನಿಯಮದ ಉದ್ದೇಶವೇ ವಿಫಲಗೊಳ್ಳುವುದು.

29. ದಿ ಸೀಮೆನ್ಸ್ ಇಂಜಿನಿಯರಿಂಗ್ ಅಂಡ್ ಮ್ಯಾನುಫ್ಯಾಕ್ಚರಿಂಗ್ ಕಂಪನಿ ಆಫ್ ಇಂಡಿಯ ಅಮಿಟೆಡ್ -ವಿರುದ್ಧ ಭಾರತ ಒಕ್ಕೂಟ ಮತ್ತು ಇತರರು (ಮೇಲಿನಂತೆ) ಮೊಕದ್ದಮೆಯಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು, 6 ನೇ ಕಂಡಿಕೆಯಲ್ಲಿ ಈ ಚ ಕೆಳಗಿನಂತೆ ಅಭಿಪ್ರಾಯಪಟ್ಟಿದೆ:

"6. ಹಾಗೆಂದು, ಕೆಲವು ರೀತಿಯ ಮೊಕದ್ದಮೆಗಳಲ್ಲಿ, ಆಡಳಿತಾತ್ಮಕ ಕಾನೂನಿನ ತ್ವರಿತ ಪ್ರಕ್ರಿಯೆಗನುಗುಣವಾಗಿ ನ್ಯಾಯಾಲಯಗಳ ಬದಲಿಗೆ ಆಡಳಿತಾತ್ಮಕ ಪ್ರಾಧಿಕಾರಗಳನ್ನು ಮತ್ತು ನ್ಯಾಯಾಧಿಕರಣಗಳನ್ನು ತರಬೇಕೆ ಂ ದರೆ, ಆಡಳಿತಾತ್ಮಕ ಪ್ರಾಧಿಕಾರಗಳ ಮತ್ತು ನ್ಯಾಯಾಧಿಕರಣಗಳ ಆದೇಶಗಳಿಂದ ಬಾಧಿತರಾಗಿರುವರೆಂದು ಕೋರುವ ವ್ಯಕ್ತಿಗಳಿಗೆ ಅವುಗಳು ನ್ಯಾಯ ನೀಡಬೇಕು ಮತ್ತು ಸೂಕ್ತವಾಗಿ ಸುನಾವಣೆ ಮಾಡಬೇಕು ಹಾಗೂ ಅವುಗಳು ಮಾಡಿದ ಆದೇಶಗಳ ಸಮರ್ಥನೆಗಾಗಿ ಸಮರ್ಪಕವಾದ ಸ್ಪಷ್ಟ ಮತ್ತು ವ್ಯಕ್ತ ಕಾರಣಗಳನ್ನು ನೀಡಬೇಕು ಎಂಬುದು ಅತ್ಯಗತ್ಯ.ನಂತರ ಮಾತ್ರವೇ, ಆಡಳಿತಾತ್ಮಕ ಪ್ರಾಧಿಕಾರಗಳು ಮತ್ತು ನ್ಯಾಯಾಧಿಕರಣಗಳು ನ್ಯಾಯಿಕ ಸ್ವರೂಪದ ಪ್ರಕಾರವನ್ನು ನಿರ್ವಹಿಸಿ, ಅವುಗಳ ಅಸ್ತಿತ್ವವನ್ನು ಸಮರ್ಥಿಸಿಕೊಳ್ಳಲು ಮತ್ತು ನ್ಯಾಯನಿರ್ಣಯದ ಪ್ರಕ್ರಿಯೆಯಲ್ಲಿ ಭರವಸೆಯನ್ನು ಮೂಡಿಸುವ ಮೂಲಕ ಜನರಲ್ಲಿ ವಿಶ್ವಾಸಾರ್ಹತೆಯ ಮಟ್ಟವನ್ನು ತಲುಪಲು ಶಕ್ತವಾಗುವವು.ಆದೇಶದ ಸಮರ್ಥನೆಯಲ್ಲಿ ನೀಡಬೇಕಾದ ಕಾರಣಗಳನ್ನು ಅಗತ್ಯಪಡಿಸುವ ನಿಯಮವು, ತೀರ್ಮಾನವನ್ನು ಕೊಡುವ ಮೊದಲು ಉಭಯ ಪಕ್ಷಗಳನ್ನು ಆಲಿಸತಕ್ಕದ್ದು ಎಂಬ ತತ್ವದಂತಿದ್ದು, ಅದು ಪ್ರತಿಯೊಂದು ನ್ಯಾಯಿಕ ಸ್ವರೂಪದ ಪ್ರಕ್ರಿಯೆಯನ್ನು ಕುರಿತು ತಿಳಿಸಬೇಕು ಮತ್ತು ಈ ನಿಯಮವನ್ನು ಅದರ ಸಮುಚಿತ ಅರ್ಥಕ್ಕನುಸಾರವಾಗಿ ಪಾಲಿಸಬೇಕು ಹಾಗೂ ಕೇವಲ ಪಾಲನೆಯ ಸಬೂಬು ಕಾನೂನಿನ ಅಗತ್ಯತೆಯನ್ನು ಈಡೇರಿಸುವುದಿಲ್ಲ.ಭಾರತ ಸರ್ಕಾರವು ಸಹ, ಪುನರ್ಪರಿಶೀಲನಾ ಅರ್ಜಿಯನ್ನು ತಿರಸ್ಕರಿಸಿದ್ದಕ್ಕೆ ಅಥವಾ ಅದರ ಆದೇಶಕ್ಕೆ ಸಮರ್ಥನೆಯಾಗಿ ಯಾವುದೇ ಕಾರಣಗಳನ್ನು ನೀಡಲು ವಿಫಲವಾಗಿದೆ.ಆದರೆ, ಪುನರ್ಪರಿಶೀಲನಾ ಅರ್ಜಿಯನ್ನು ತಿರಿಸ್ಕರಿಸುವಲ್ಲಿ, ಅದು ಕಲೆಕ್ಟರ್‌ವರ ಬಳಿ ಚಾಲ್ತಿಯಲ್ಲಿದ್ದಂಥದೇ ಕಾರಣವನ್ನು ಅಳವಡಿಸಿಕೊಂಡಿದೆ.ಈಗಾಗಲೇ ಗಮನಕ್ಕೆ ತಂದಿರುವಂತೆ ಕಲೆಕ್ಟರ್ ಕಾರಣವನ್ನು ನೀಡಿದ್ದು, ಅದು ಮನವರಿಕೆಯಾಗುವುದು ಪ್ರಯಾಸವೇ; ಆದುದರಿಂದ, ಭಾರತ ಸರ್ಕಾರವು ಪುನರ್ಪರಿಶೀಲನಾ ಅರ್ಜಿಯನ್ನು ತಳ್ಳಿಹಾಕುವಾಗ, ಅಪೀಲುದಾರರ ಪರವಾಗಿ ಮಂಡಿಸಲಾದ ವಾದಗಳನ್ನು ಕುರಿತು ವ್ಯವಹರಿಸಿ ಸೂಕ್ತ ಮತ್ತು ಪರಾಪ್ತ ಕಾರಣಗಳನ್ನು ನೀಡಿದ್ದಿದ್ದರೆ ಉತ್ತಮವಾಗಿರುತ್ತಿತ್ತು.ಭವಿಷ್ಯದಲ್ಲಿ, ಸುಂಕ ಪ್ರಾಧಿಕಾರಗಳ ಮುಂದೆ ಬರುವ ವ್ಯವಹರಣೆಗಳನ್ನು ಕುರಿತು ನ್ಯಾಯನಿರ್ಣಯಿಸುವಾಗ, ಅದು ಹೊರಡಿಸುವ ಆದೇಶದಿಂದ ಬಾಧಿತರಾಗುವವರು, ಸುಂಕ ಪ್ರಾಧಿಕಾರಗಳ ಹಸ್ತಕ್ಷೇಪದಿಂದ ಅವರ ಮೊಕದ್ದಮೆಗೆ ಸೂಕ್ತ ಪರಿಗಣನೆ ಸಿಕ್ಕಿದೆ ಎಂದು ಭರವಸೆ ಪಡೆಯುವಂತಾಗಲು ಹಾಗೂ ಸುಂಕ ಪ್ರಾಧಿಕಾರಗಳು ನೀಡಿದ ನ್ಯಾಯನಿರ್ಣಯದ ನ್ಯಾಯಸಮ್ಮತೆಯನ್ನು ಸಹ, ಉನ್ನತ ನ್ಯಾಯಾಧಿಕರಣ ಅಥವಾ ನ್ಯಾಯಾಲಯದಲ್ಲಿ ತೃಪ್ತಿಕರವಾಗಿ

ಪರೀಕ್ಷಿಸುವಂತಾಗಲು, ಅದು ಹೆಚ್ಚು ಜಾಗರೂಕತೆಯಿಂದ ಇರುವುದಾಗಿ ಚ ಮತ್ತು ಸಮುಚಿತ ಕಾರಣಗಳನ್ನು ನೀಡಿದ ಆದೇಶಗಳನ್ನು ಹೊರಡಿಸುವುದಾಗಿ ನಾವು ಆಶಿಸುತ್ತೇವೆ ಮತ್ತು ನಂಬುತ್ತೇವೆ.ಯಥಾರ್ಥದಲ್ಲಿ, ಸುಂಕ ಮತ್ತು ಅಬಕಾರಿ ಕಾನೂನುಗಳ ಅಡಿಯಲ್ಲಿ ಉದ್ಭವಿಸುವ ಮೊಕದ್ದಮೆಗಳಲ್ಲಿ, ಆದಾಯ ತೆರಿಗೆ ಮೇಲ್ಮನವಿ ನ್ಯಾಯಾಧಿಕರಣ ಅಥವಾ ವಿದೇಶಿ ವಿನಿಮಯ ನಿಯಂತ್ರಣ ಮೇಲ್ಮನವಿ ಮಂಡಳಿಯಂಥ, ಸ್ವತಂತ್ರ ನ್ಯಾಯಿಕ ಸ್ವರೂಪದ ನ್ಯಾಯಾಧಿಕರಣವನ್ನು ಸ್ಥಾಪಿಸುವುದು ಅಪೇಕ್ಷಣೀಯವಾದುದಾಗಿದ್ದು, ಅದು ಕಾನೂನುಗಳ ಅಡಿಯಲ್ಲಿನ ಮೇಲ್ಮನವಿಗಳ ಮತ್ತು ಪುನರ್ಪರಿಶೀಲನಾ ಅರ್ಜಿಗಳ ನಿರ್ಧರಣೆಯನ್ನು ಭಾರತ ಸರ್ಕಾರಕ್ಕೆ ಬಿಡುವುದಕ್ಕೆ ಬದಲಾಗಿ ಅಂಥ ಮೇಲ್ಮನವಿಗಳ ಮತ್ತು ಪುನರ್ಪರಿಶೀಲನಾ ಅರ್ಜಿಗಳ ಅಂತಿಮ ವಿಲೆಯನ್ನು ಮಾಡುವುಂತಾಗುವುದು.ಒಂದು ಸ್ವತಂತ್ರ ನ್ಯಾಯಿಕ ಸ್ವರೂಪದ ನ್ಯಾಯಾಧಿಕರಣವು, ಖಂಡಿತವಾಗಿಯೂ ಸಾರ್ವಜನಿಕರ ಮನಸ್ಸಿನಲ್ಲಿ ಅತ್ಯಂತ ಹೆಚ್ಚು ವಿಶ್ವಾಸವನ್ನು ಚ ಮೂಡಿಸುತ್ತದೆ.ಅಡ್ವಕೇಟ್ ಜನರಲ್ರು ಹೊರಡಿಸಿದ ಪ್ರಶ್ನಿತ ಆದೇಶದ ಸೂಕ್ಷ್ಮ ಪರಿಶೀಲನೆಯಿಂದ, ಮೊದಲನೆಯ ಕಂಡಿಕೆಯು ಎಸಿ ಅರ್ಜಿದಾರರು ಮಾಡಿದ ವಾದಗಳ ಪುನರಾವರ್ತನೆಯಾಗಿದೆ ಮತ್ತು ಎರಡನೇ ಕಂಡಿಕೆಯು ಸಲಹಾತ್ಮಕವಾಗಿದ್ದು, ಪ್ರಸ್ತುತ ಅರ್ಜಿಯಲ್ಲಿ ಹೇಳಿದ ಕಾರಣದ ಆಧಾರದ ಮೇಲೆ ಅರ್ಜಿಯನ್ನು ತಿರಸ್ಕರಿಸುವುದು ಅಡ್ವಕೇಟ್ ಜನರಲ್ರಿಗೆ ಬಿಟ್ಟ ವಿಷಯ ಎಂದು ಮಾತ್ರವೇ ಹೇಳಲಾಗಿದೆ.ಆದುದರಿಂದ, ದಾವೆಸಂಖ್ಯೆ: ಒ.ಎಸ್. 11/2019 ನ್ನು ಹೂಡಿರುವುದು, ಅಧಿನಿಯಮದ 2 (ಸಿ) ಪ್ರಕರಣದ ಅಡಿಯಲ್ಲಿ ಪರಿಭಾಷಿಸಿದಂತೆ ನ್ಯಾಯಾಲಯ ಅಪರಾಧಿಕ ನಿಂದನೆ ಎಂಬ ನಿರ್ಣಯಕ್ಕೆ ಬರಲಾಗುವುದಿಲ್ಲ ಎಂಬುದು ಪರಿಗಣನೀಯ ಅಭಿಪ್ರಾಯವಾಗಿದೆ. "

30. ಮಾನ್ಯ ಅಡ್ವಕೇಟ್ ಜನರು ಹೊರಡಿಸಿದದಿನಾಂಕ: 14.12.2012 ರ ಅನುಬಂಧ-ಎಸ್ನಲ್ಲಿರುವ ಪ್ರಶ್ನಿತ ಆದೇಶವನ್ನು ಎಚ್ಚರಿಕೆಯಿಂದ ಅವಲೋಕಿಸಲಾಗಿ, ಪ್ರಶ್ನಿತ ಆದೇಶದ 1 ನೇ ಕಂಡಿಕೆಯು, ಅರ್ಜಿದಾರರು ಮಾಡಿದ ವಾದಗಳ ಪುನರಾವರ್ತನೆ ಮಾತ್ರವಾಗಿದೆ ಮತ್ತು ಸಲಹೆ ಮೂಲಕ 2 ನೇ ಕಂಡಿಕೆಯಲ್ಲಿ, " ಪ್ರಸ್ತುತ ಅರ್ಜಿಯಲ್ಲಿ ಹೇಳಿದ ಕಾರಣಗಳ ಆಧಾರದ ಮೇಲೆ ವಾದವನ್ನು ತಿರಸ್ಕರಿಸುವುದಕ್ಕಾಗಿ ಅರ್ಜಿ ಸಲ್ಲಿಸಲು ಅರ್ಜಿದಾರರಿಗೆ ಅವಕಾಶವಿದೆ.ಒ.ಎಸ್. ಸಂಖ್ಯೆ:1103/2009 ನ್ನು ಹೂಡಿರುವುದನ್ನು, ಅಧಿನಿಯಮದ 2 (ಸಿ) ಪ್ರಕರಣದಲ್ಲಿ ಉಪಬ ಂ ಧಿಸಿದಂತೆ ನ್ಯಾಯಾಲಯದ ಅಪರಾಧಿಕ ನಿಂದನೆ ಎ ಂ ದು ಅರ್ಥೈಸಲಾಗುವುದಿಲ್ಲವೆಂಬುದು ನನ್ನ ಅಭಿಪ್ರಾಯ. "ಎಂದು ಹೇಳಲಾಗಿದೆ.ಇದು ಸ್ಪಷ್ಟವಾಗಿ, ಮಾನ್ಯ ಅಡ್ವಕೇಟ್ ಜನರಲ್ -1 ನೇ ಎದುರುದಾರರು, ಅಧಿನಿಯಮದ 15 ( 1) (ಬಿ) ಪ್ರಕರಣದ ಉಪಬಂಧಗಳ ಮೇರೆಗೆ ಅಧಿಕಾರಗಳನ್ನು ಚಲಾಯಿಸುವಾಗ, ಅರ್ಜಿದಾರರು ಎತ್ತಿದ ವಾದಗಳನ್ನು ಮತ್ತು ವಾದಗಳ ಸಮರ್ಥನೆಯಲ್ಲಿದ್ದ ತೀರ್ಪುಗಳನ್ನು ಪರಿಶೀಲಿಸಿರುವುದಿಲ್ಲ ಎಂಬುದನ್ನು ಸೂಚಿಸುತ್ತದೆ.ಸ್ಟೀಲ್ ಅಥಾರಿಟಿ ಆಫ್ ಇಂಡಿಯಾ ಅಮಿಟೆಡ್ –ವಿರುದ್ಧ-ಸೇಲ್ಸ್ ಟ್ಯಾಕ್ಸ್ ಆಫಿಸರ್, ರೂರ್ಕೆಲಾ -1 ನೇ ವೃತ್ತ ಮತ್ತು ಇತರರು ಮೊಕದ್ದಮೆಯಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯದ ತೀರ್ಪಿನಿಂದ ನನ್ನ ಅಭಿಪ್ರಾಯ ಉಳಿಯುವುದಿಲ್ಲ.ಅದರಲ್ಲಿ, ಮಾನ್ಯ ಸರ್ವೋಚ್ಚ ನ್ಯಾಯಾಲಯವು, ರಾಜ್ ಕಿಶೋರ್ ಝಾ -ವಿರುದ್ಧ ಬಿಹಾರ್ ಚ ರಾಜ್ಯ ಮತ್ತು ಇತರರು ಮೊಕದ್ದಮೆಯಲ್ಲಿ ಈ ತೀರ್ಪನ್ನು ಪುನರುಚ್ಚರಿಸಿ, ಈ ಕೆಳಗಿನಂತೆ ಅಭಿಪ್ರಾಯಪಟ್ಟಿದೆ:

"10. ಕಾರಣವು ಪ್ರತಿಯೊಂದು ನಿರ್ಣಯದ ಹೃದಯ ಬಡಿತವಾಗಿದೆ.ಅದು ಆದೇಶದಲ್ಲಿ ಸ್ಪಷ್ಟತೆಯನ್ನು ತರುತ್ತದೆ ಮತ್ತು ಅದಿಲ್ಲದೆ ನಿಷ್ಫಲವಾಗುತ್ತದೆ.ಆಡಳಿತಾತ್ಮಕ ಆದೇಶಗಳ ಸಂಬಂಧದಲ್ಲಿ ಸಹ, (1971) 1 ಎಎಲ್ಲ್ ಇಆರ್ 1148 ರಲ್ಲಿ ವರದಿಯಾದ ಬೀನ್-ವಿರುದ್ಧ ಅಮಾಲ್ಗಮೇಟೆಡ್ ಇಂಜಿನಿಯರಿಂಗ್ ಯೂನಿಯನ್

ಮೊಕದ್ದಮೆಯಲ್ಲಿ ಲಾರ್ಡ್ ಡನ್ನಿಂಗ್ ಎಮ್.ಆರ್. ಅವರು, " ಕಾರಣಗಳನ್ನು ನೀಡುವುದು ಉತ್ತಮ ಆಡಳಿತದ ಮೂಲ ತಳಹದಿಗಳಲ್ಲಿ ಒಂದು ” ಎಂದು ಅಭಿಪ್ರಾಯಪಟ್ಟಿದ್ದಾರೆ.1974 ಐಸಿಆರ್ 120 (ಎನ್‌ಐಆರ್ಸಿ) ರಲ್ಲಿ ವರದಿಯಾದ ಅಲೆಸ್ಕಾಂಡರ್ ಮೆಷಿನರಿ (ಡ್ಯೂಡ್ಲಿ) ಲಿಮಿಟೆಡ್ -ವಿರುದ್ಧ ಕ್ಯಾಬ್ ಮೊಕದ್ದಮೆಯಲ್ಲಿ: "ಕಾರಣಗಳನ್ನು ನೀಡಲು ವಿಫಲವಾಗುವುದು ನ್ಯಾಯವನ್ನು ಅಲ್ಲಗಳೆದಂತಾಗುವುದು " ಎಂದು ಅಭಿಪ್ರಾಯಪಡಲಾಗಿತ್ತು. "ಕಾರಣಗಳು, ಪ್ರಶ್ನಿತ ವಿವಾದಕ್ಕೆ ನಿರ್ಣಯ ತೆಗೆದುಕೊಳ್ಳುವವನ ಮನಸ್ಸು ಮತ್ತು ತೆಗೆದುಕೊಳ್ಳುವ ತೀರ್ಮಾನ ಅಥವಾ ನಿರ್ಣಯದ ನಡುವಿನ ಜೀವಂತ ಕೊಂಡಿಗಳಾಗಿವೆ ".ಕಾರಣಗಳು ವ್ಯಕ್ತಿನಿಷ್ಠತೆಯನ್ನು ವಸ್ತುನಿಷ್ಠತೆಯನ್ನಾಗಿ ಬದಲಾಯಿಸುತ್ತವೆ.ಕಾರಣಗಳನ್ನು ದಾಖಲಿಸುವುದಕ್ಕೆ ಒತ್ತು ನೀಡುವ ಉದ್ದೇಶವೆಂದರೆ, ನಿರ್ಣಯವು " ಸಮಸ್ಯೆಯ ಬೇಧಿಸಲಾಗದ ಪಾರ್ಶ್ವವನ್ನು ಪ್ರಕಟಪಡಿಸಿದರೆ, ಅದು, ಅದರ ಮೌನದಿಂದಲೇ ಆಗಿರುತ್ತದೆ; ನ್ಯಾಯಾಲಯಗಳ ಮೇಲ್ಮನವಿ ಪ್ರಕಾರವನ್ನು ನೆರವೇರಿಸಲು ಅಥವಾ ತೀರ್ಮಾನದ ವಿಧಿಬದ್ಧತೆಯನ್ನು ಕುರಿತು ನ್ಯಾಯನಿರ್ಣಯಿಸುವಾಗ, ವಾಸ್ತವವಾಗಿ ನ್ಯಾಯಿಕ ಪರಿಶೀಲನೆಯ ಅಧಿಕಾರವನ್ನು ಚಲಾಯಿಸಲು ಅವುಗಳನ್ನು ಅಸಾಧ್ಯಗೊಳಿಸುತ್ತದೆ.ಕಾರಣದ ಹಕ್ಕು, ಸಮರ್ಥ ನ್ಯಾಯಿಕ ವ್ಯವಸ್ಥೆಯ ಅನಿವಾರ ಭಾಗವಾಗಿದೆ; ಕಡೇಪಕ್ಷ ಕಾರಣಗಳು, ನ್ಯಾಯಾಲಯದ ಮುಂದಿರುವ ವಿಷಯದ ಕಡೆಗೆ ಅದು ಗಮನ ನೀಡಿರುವುದನ್ನು ಸೂಚಿಸಲು ಪರಾಪ್ತವಾಗಿರುತ್ತವೆ.ಮತ್ತೊಂದು ತರ್ಕವೆಂದರೆ, ನಿರ್ಣಯವು ಏಕೆ ತನ್ನ ವಿರುದ್ಧವಾಗಿತ್ತು ಎಂಬುದನ್ನು ಬಾಧಿತ ಪಕ್ಷಕಾರನು ತಿಳಿದುಕೊಳ್ಳಬಹುದು ಎಂಬುದಾಗಿದೆ.ಸಹಜ ನ್ಯಾಯದ ಮತ್ತೊಂದು ಸತ್ಪರಿಣಾಮಕಾರಿ ಅಗತ್ಯತೆಯೆಂದರೆ, ಮಾಡಲಾದ ಆದೇಶಕ್ಕೆ ಕಾರಣಗಳನ್ನು ಕೂಲಂಕಷವಾಗಿ ತಿಳಿಸುವುದಾಗಿದೆ. "ಸಮಸ್ಯತೆಯ ಬೇಧಿಸಲಾಗದ ಪಾರ್ಶ್ವ " ವು, ಸಾಮಾನ್ಯವಾಗಿ ನ್ಯಾಯಿಕ ಅಥವಾ ನ್ಯಾಯಿಕ-ಸ್ವರೂಪದ ಕಾವ್ಯನಿರ್ವಹಣೆಯೊಂದಿಗೆ ಅಸಮಂಜಸ ವಾಗಿರುತ್ತದೆ. "

31. ಅಧ್ಯಕ್ಷರು, ಶಿಸ್ತು ಪ್ರಾಧಿಕಾರ, ರಾಣಿ ಲಕ್ಷ್ಮೀ ಬಾಯಿ ಕ್ಷೇತ್ರೀಯ ಗ್ರಾಮೀಣ ಬ್ಯಾಂಕ್ -ವಿರುದ್ಧ-ಜಗದೀಶ್ ಶರಣ್ ವರ್ಷಿ ಮತ್ತು ಇತರರು ಮೊಕದ್ದಮೆಯಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು, 8 ನೇ ಕಂಡಿಕೆಯಲ್ಲಿ ಈ ಕೆಳಗಿನಂತೆ ಚ ಅಭಿಪ್ರಾಯಪಟ್ಟಿದೆ:

" 8.ಎಸ್.ಎನ್. ಮುಖರ್ಜಿ -ವಿರುದ್ಧ ಭಾರತ ಒಕ್ಕೂಟ ಮೊಕದ್ದಮೆಯಲ್ಲಿ, ಈ ನ್ಯಾಯಾಲಯದ ಸಂವಿಧಾನ ಪೀಠವು ಅಭಿಪ್ರಾಯಪಟ್ಟಿರುವಂತೆ, ಕಾರಣಗಳನ್ನು ಬಹಿರಂಗಪಡಿಸುವ ಉದ್ದೇಶವೆಂದರೆ, ಜನತೆ ನ್ಯಾಯಿಕ ಅಥವಾ ನ್ಯಾಯಿಕ-ಸ್ವರೂಪದ ಪ್ರಾಧಿಕಾರಗಳಲ್ಲಿ ವಿಶ್ವಾಸ ಹೊಂದಬೇಕೆಂಬುದಾಗಿದೆ.ಕಾರಣಗಳನ್ನು ಬಹಿರಂಗಪಡಿಸದ ಹೊರತು, ಪ್ರಾಧಿಕಾರವು ಗಮನ ನೀಡಿದೆಯೇ ಅಥವಾ ಇಲ್ಲವೇ ಎಂಬುದನ್ನು ಒಬ್ಬ ವ್ಯಕ್ತಿಯು ಹೇಗೆ ಬ ತಿಳಿದುಕೊಳ್ಳಬಹುದಾಗಿದೆ?ಅಲ್ಲದೆ, ಕಾರಣಗಳನ್ನು ನೀಡುವುದು ಮಧ್ಯಸ್ಥಿಕೆಯ ಅವಕಾಶಗಳನ್ನು ಕಡಿಮೆಗೊಳಿಸುತ್ತದೆ.ಆದ್ದರಿಂದ, ಕಡೇ ಪಕ್ಷ ಸಂಕ್ಷಿಪ್ತವಾಗಿ ಕೆಲವು ಕಾರಣಗಳನ್ನು, ನ್ಯಾಯಿಕ ಅಥವಾ ನ್ಯಾಯಿಕ-ಸ್ವರೂಪದ ಆದೇಶದಲ್ಲಿ, ಅದು ಸಕಾರಾತ್ಮಕ ಆದೇಶವಾಗಿದ್ದರೂ ಸಹ ಬಹಿರಂಗಪಡಿಸಬೇಕು ಎಂಬುದು ಕಾನೂನಿನ ನಿಯಮದ ಅತ್ಯಾವಶ್ಯಕ ಅಗತ್ಯತೆಯಾಗಿದೆ. "

32. ಅಸಿಸ್ಟಂಟ್ ಕಮಿಷನರ್, ಕಮರ್ಷಿಯಲ್ ಟ್ಯಾಕ್ಸ್ ಡಿಪಾರ್ಟ್ಮೆಂಟ್, ವರ್ಕ್ಸ್ ಕಾಂಟ್ಯಾಕ್ಟ್ ಅಂಡ್ ಅಜಿಂಗ್, ಕೋಟಾ -ವಿರುದ್ಧ-ಶುಕ್ಲಾ ಅಂಡ್ ಬ್ರದರ್ ಮೊಕದ್ದಮೆಯಲ್ಲಿ, ಮಾನ್ಯ ಸರ್ವೋಚ್ಚ ನ್ಯಾಯಾಲಯವು, 13 ನೇ ಕಂಡಿಕೆಯಲ್ಲಿ ಚ ಈ ಕೆಳಗಿನಂತೆ ಅಭಿಪ್ರಾಯಪಟ್ಟಿದೆ:

"13. ಪುನರಾವರ್ತನೆಯ ಕಾರಣದಿಂದಾಗಿ, ಕಾರಣಗಳನ್ನು ದಾಖಲಿಸುವುದು ನ್ಯಾಯ ವಿತರಣೆ ಅತ್ಯಾವಶ್ಯಕ ಗುಣಲಕ್ಷಣವಾಗಿದೆ ಎಂಬ ಅಭಿಪ್ರಾಯವನ್ನು ಈ ನ್ಯಾಯಾಲಯವು ನಿರಂತರವಾಗಿ ತಳೆಯುತ್ತಾ ಬಂದಿದೆ ಎಂಬುದನ್ನು ನಾವು ಗಮನಿಸ ಬಹುದಾಗಿದೆ.ಕಾನೂನಿನಗನುಗುಣವಾಗಿ ಯಾವುದೇ ತೊ ಂ ದರೆಯೊಂದಿಗೆ ನ್ಯಾಯಾಲಯವನ್ನು ಸಂಪರ್ಕಿಸುವ ವ್ಯಾಜ್ಯಕಾರನು, ತನ್ನ ಮನವಿಯನ್ನು ಪುರಸ್ಕರಿಸಿದ್ದಕ್ಕೆ ಅಥವಾ ತಿರಸ್ಕರಿಸಿದ್ದಕ್ಕೆ ಕಾರಣಗಳನ್ನು ತಿಳಿಯುವ ಹಕ್ಕನ್ನು ಹೊಂದಿರುತ್ತಾನೆ.ಕಾರಣಗಳು ಆದೇಶದ ಆತ್ಮವಿದ್ದಂತೆ.ಕಾರಣಗಳನ್ನು ದಾಖಲಿಸದೇ ಇರುವುದರಿಂದ, ಅದು ಇಬ್ಬಗೆಯ ಅಸ್ಥಿರತೆಗಳಿಗೆ ದಾರಿ ಮಾಡಿಕೊಡುತ್ತದೆ; ಮೊದಲನೆಯದಾಗಿ, ಬಾಧಿತ ಪಕ್ಷಕಾರನಿಗೆ ಅದು ಹಾನಿಯನ್ನುಂಟು ಮಾಡಬಹುದು ಮತ್ತು ಎರಡನೆಯದಾಗಿ, ಹೆಚ್ಚು ನಿರ್ದಿಷ್ಟವಾಗಿ ಯುಕ್ತ ನ್ಯಾಯ ನೀಡಿಕೆಗೆ ಅಡ್ಡಿಯಾಗುತ್ತದೆ.ಚ ಈ ತತ್ವಗಳು ಆಡಳಿತಾತ್ಮಕ ಅಥವಾ ಕಾರ್ಯನಿರ್ವಾಹಕ ಕ್ರಮಗಳಿಗೆ ಮಾತ್ರವಲ್ಲದೆ, ಅವು ಸಮಾನ ಬಲದೊಂದಿಗೆ, ಅಲ್ಲದೆ ವಾಸ್ತವವಾಗಿ, ನ್ಯಾಯಿಕ ಉದ್ಘೋಷಣೆಗಳಿಗೆ ಹೆಚ್ಚಿನ ಪ್ರಮಾಣದ ನಿಷ್ಕೃಷ್ಟತೆಯೊಂದಿಗೆ ಅನ್ವಯವಾಗುತ್ತವೆ.ಕಾರಣಗಳಿಲ್ಲದೆ ನೀಡಿದ ತೀರ್ಪು, ವ್ಯಾಜ್ಯಕಾರನ ಕ್ಷೇಮನ್ನು ತಿರಸ್ಕರಿಸುವಲ್ಲಿ ನ್ಯಾಯಾಲಯವು ಮಾನದಂಡವಾಗಿ ಇಟ್ಟುಕೊಂಡಿರುವ ಕಾರಣವನ್ನು ತಿಳಿಯಲು ಆತನನ್ನು ಅಸಮರ್ಥಗೊಳಿಸುವುದರಿಂದ, ಯಾವ ವ್ಯಕ್ತಿಯ ವಿರುದ್ದ ಅದನ್ನು ಉದ್ಘೋಷಿಸಲಾಗಿದೆಯೋ ಆತನಿಗೆ ಅದು ಹಾನಿಯನ್ನುಂಟು ಮಾಡುತ್ತದೆ; ಅಷ್ಟೇ ಅಲ್ಲದೆ, ತೀರ್ಪನ್ನು ಪ್ರಶ್ನಿಸುವ ಸಂದರ್ಭದಲ್ಲಿ, ಉಚ್ಚ ನ್ಯಾಯಾಲಯದ ಮುಂದೆ ಚ ಸಮರ್ಪಕ ಮತ್ತು ಸೂಕ್ತ ಕಾರಣಗಳನ್ನು ಆತನು ಗ್ರಹಿಸುವಲ್ಲಿ ಅಡೆತಡೆಗಳನ್ನುಂಟು ಮಾಡುತ್ತದೆ.ಈಗ, ನಾವು ಇದೇ ರೀತಿಯ ಅಭಿಪ್ರಾಯವನ್ನು ನೀಡಿರುವ ಈ ನ್ಯಾಯಾಲಯದ ಮತ್ತು ಉಚ್ಚ ನ್ಯಾಯಾಲಯಗಳ ಕೆಲವು ತೀರ್ಪುಗಳನ್ನು ಇಲ್ಲಿ ಚ ಉಲ್ಲೇಖಿಸಬಹುದಾಗಿದೆ. "

33. ಈಸ್ಟ ಕೋಸ್ಟ ರೈಲ್ವೆ ಮತ್ತು ಇನ್ನೊಬ್ಬರು ವಿರುದ್ದ ಮಹಾದೇವ್ ಅಪ್ಪಾರಾವ್ ಮತ್ತು ಇತರರು 118 ಮೊಕದ್ದಮೆಯಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ಚ ಈ ಕೆಳಗಿನಂತೆ ಅಭಿಪ್ರಾಯಪಟ್ಟಿದೆ:

"9. ಆಡಳಿತಾತ್ಮಕ/ಕಾರ್ಯನಿರ್ವಹಣಾ ಅಥವಾ ಶಾಸನಾತ್ಮಕ ಅಧಿಕಾರಗಳನ್ನು ಚಲಾಯಿಸಿ ಒಂದು ಸಾರ್ವಜನಿಕ ಪ್ರಾಧಿಕಾರವು ಹೊರಡಿಸಿದ ಆದೇಶವನ್ನು, ಆ ಆದೇಶದಲ್ಲಿ ಅಥವಾ ಯಾವುದೇ ದಾಖಲೆಯಲ್ಲಿ ಅಥವಾ ಸಮಕಾಲಿಕವಾಗಿ ನಿರ್ವಹಿಸಿದ ಕಡತದಲ್ಲಿ ಹೇಳಿದ ಕಾರಣಗಳ ಮೂಲಕ ಸ್ಥಾಪಿಸಬೇಕು ಎಂಬ ಕಾನೂನಿನ ಸುವಿಧಿತ ತತ್ವದ ಬಗ್ಗೆ ಯಾವುದೇ ವಿವಾದವಿರುವುದಿಲ್ಲ.ಇದು, ಕಾರಣಗಳ ಕೊರತೆಯಿಂದ ಉದ್ಭವಿಸುವ ಅಸ್ಥಿರತೆಯನ್ನು, ಅಂಥ ಯಾವುದೇ ಆದೇಶದ ಊರ್ಜಿತತೆಯು ಪ್ರಶ್ನೆಗೊಳಗಾದಲ್ಲಿ, ಆಗ ಪ್ರಾಧಿಕಾರವು, ನ್ಯಾಯಾಲಯದ ಮುಂದೆ ಸಲ್ಲಿಸಿದ ಅಫಿಡಾವಿಟ್ನಲ್ಲಿ ಅಂಥ ಕಾರಣಗಳನ್ನು ಹೇಳಿ, ಆದೇಶವನ್ನು ಹೊರಡಿಸಿ ಸರಿಪಡಿಸಲಾಗುವುದಿಲ್ಲ ಎಂಬುದನ್ನು ಇದು ಒಳಗೊಳ್ಳುತ್ತದೆ.ಈ ಸಂಬಂಧದಲ್ಲಿನ ಕಾನೂನು ನಿಲುವನ್ನು, ಕಮ್ಯಾಂಡರ್ ಆಫ್ ಪೊಲೀಸ್ -ವಿರುದ್ದ-ಗೋರ್ಧನ್ದಾಸ್ ಭಾಂಜಿ ಮೊಕದ್ದಮೆಯಲ್ಲಿ ಈ ನ್ಯಾಯಾಲಯದ ನಿರ್ಣಯದ ಮೂಲಕ ಇತ್ಯರ್ಥಗೊಳಿಸಲಾಗಿದ್ದು, ಅದರಲ್ಲಿ ಈ ನ್ಯಾಯಾಲಯವು ಈ ಕೆಳಗಿನಂತೆ ಅಭಿಪ್ರಾಯಪಟ್ಟಿದೆ (ಎಐಆರ್ ಪುಟ 18, ಕಂಡಿಕೆ9):

"9. ಶಾಸನಾತ್ಮಕ ಅಧಿಕಾರವನ್ನು ಚಲಾಯಿಸಿ, ಸಾರ್ವಜನಿಕವಾಗಿ ಮಾಡಿದ ಸಾರ್ವಜನಿಕ ಆದೇಶವನ್ನು ಹೊರಡಿಸಿದ ಅಧಿಕಾರಿಯ ಉದ್ದೇಶ ಏನಾಗಿತ್ತು ಅಥವಾ ಆತನ ಮನಸ್ಸಿನಲ್ಲಿ ಏನಿತ್ತು ಅಥವಾ ಆತನು ಏನನ್ನು ಮಾಡಲು ಉದ್ದೇಶಿಸಿದ್ದ ಎಂಬುದಾಗಿ ಆತನು ತರುವಾಯದಲ್ಲಿ ನೀಡುವ ವಿವರಣೆಗಳ ಹಿನ್ನೆಲೆಯಲ್ಲಿ ಆ

ಆದೇಶವನ್ನು ಅರ್ಥೈಸಲಾಗುವುದಿಲ್ಲ.ಸಾರ್ವಜನಿಕ ಪ್ರಾಧಿಕಾರಗಳು ಸಾರ್ವಜನಿಕ ಆದೇಶಗಳನ್ನು ಹೊರಡಿಸುವುದರ ಉದ್ದೇಶ, ಸಾರ್ವಜನಿಕ ಪರಿಣಾಮ ಉಂಟು ಮಾಡುವುದಾಗಿರುತ್ತದೆ ಮತ್ತು ಯಾರನ್ನು ಉದ್ದೇಶಿಸಲಾಗಿರುತ್ತದೆಯೋ ಅವರ ಕೃತ್ಯ ಮತ್ತು ನಡತೆಯನ್ನು ಪರಿಣಾಮಗೊಳಿಸುವ ಉದ್ದೇಶವನ್ನು ಹೊಂದಿರುತ್ತವೆ ಹಾಗೂ ಆದೇಶದಲ್ಲಿ ಸ್ವತಃ ಬಳಸಲಾಗಿರುವ ಭಾಷೆಗೆ ಸಂಬಂಧಿಸಿದಂತೆ ಅದನ್ನು ವಸ್ತುನಿಷ್ಠವಾಗಿಯೇ ಅರ್ಥೈಸಬೇಕಾಗುತ್ತದೆ. "

34. ಮಾನ್ಯ ಸರ್ವೋಚ್ಚ ನ್ಯಾಯಾಲಯವು, ನ್ಯಾಯಾಲಯ ನಿಂದನೆ ಅಧಿನಿಯಮದ 2 (ಸಿ), 12 ನೇ ಮತ್ತು 15 ನೇ ಪ್ರಕರಣಗಳ ಉಪಬಂಧಗಳನ್ನು ಪರಿಗಣಿಸುವಾಗ, ಮುತ್ತು ಕರುಪ್ಪನ್ -ವಿರುದ್ಧ ಪಾರಿತಿ ಇಲಾಂವಜುತಿ ಮತ್ತು ಇನ್ನೊಬ್ಬರು ಮೊಕದ್ದಮೆಯಲ್ಲಿ ಮತ್ತು ಈ ಹಿಂದೆ ಹೇಳಿದ ಬಾಳ್ ಠಾಕ್ರೆ ಮೊಕದ್ದಮೆಯ ಪ್ರಾಸ್ತಾವಿಕ ಅಭಿಪ್ರಾಯದ 7 ನೇ, 9 ನೇ ಮತ್ತು 14 ನೇ ಕಂಡಿಕೆಗಳಲ್ಲಿ ಈ ಕೆಳಗಿನಂತೆ ಅಭಿಪ್ರಾಯಪಟ್ಟಿದೆ:

"7. ಸುಳ್ಳು ಅಫಿಡಾವಿಟ್ ಸಲ್ಲಿಸುವ ಮೂಲಕ ಸುಳ್ಳು ಸಾಕ್ಷ್ಯವನ್ನು ನೀಡುವುದು ದುಷ್ಟತನವಾಗಿದ್ದು, ಇದನ್ನು ಕಠಿಣವಾಗಿ ನಿಯಂತ್ರಿಸಬೇಕಾಗಿದೆ.ತಪ್ಪಿತಸ್ಥನನ್ನು ಶಿಕ್ಷಿಸುವುದು ನ್ಯಾಯದ

19. ಎಐಆರ್ 2011 ಎಸ್ಸಿ 1645

ಹಿತಾಸಕ್ತಿಯಲ್ಲಿ ವಿಹಿತವೆಂದು ಪರಿಗಣಿಸಿದಾಗ, ಆದರೆ ಮೇಲ್ನೋಟಕ್ಕೆ ಮುಖ್ಯ ವಿಷಯ ಕುರಿತು " ಉದ್ದೇಶಪೂರ್ವಕ ಅಸತ್ಯ " ದ ಮೊಕದ್ದಮೆಯಾಗಿರದೆ ಇದ್ದಲ್ಲಿ ಮತ್ತು ಆರೋಪಗಳಿಗೆ ಸೂಕ್ತ ಆಧಾರವಿದೆ ಎಂದು ನ್ಯಾಯಾಲಯಕ್ಕೆ ಮನವರಿಕೆಯಾದಾಗ, ಪ್ರಾಸಿಕ್ಯೂಷನ್ನೆ ಆದೇಶಿಸಬೇಕು.

9. ಅರೆ-ಅಪರಾಧಿಕ ಸ್ವರೂಪದ್ದಾಗಿರುವ ನಿಂದನಾ ವ್ಯವಹರಣೆಗಳು, ಸಾಬೀತುಪಡಿಸುವ ಹೊಣೆ ಮತ್ತು ರುಜುವಾತಿನ ಗುಣಮಟ್ಟ ಇವು ಅಪರಾಧಿಕ ಮೊಕದ್ದಮೆಗಳಲ್ಲಿ ಅಗತ್ಯಪಡಿಸಿರುವಂಥದೇ ಆಗಿರುತ್ತದೆ.ಉದ್ದೇಶಕ್ಕೆ ಸಂಬಂಧಿಸಿದಂತೆ ರಚಿಸಿದ ಶಾಸನಾತ್ಮಕ ನಿಯಮಗಳಿಗನುಸಾರ ಆರೋಪಗಳನ್ನು ರೂಪಿಸಬೇಕಾಗುತ್ತದೆ ಮತ್ತು ಆರೋಪಿತ ನಿಂದಕನು ಸಂಶಯದ ಲಾಭಕ್ಕೆ ಹಕ್ಕುಳ್ಳವನೆಂಬುದನ್ನು ಗಮನದಲ್ಲಿರಿಸಿಕೊಂಡು, ಸ ಂ ದೇಹಾತೀತವಾಗಿ ಅವುಗಳನ್ನು ಸಾಬೀತುಪಡಿಸಬೇಕಾಗುತ್ತದೆ.ಕೇವಲ ಸಾಧ್ಯತೆಗಳನ್ನಾಧರಿಸಿ, ನಿಂದನಾ ವ್ಯವಹರಣೆಗಳಲ್ಲಿ ಯಾವುದೇ ದಂಡನೆಯನ್ನು ವಿಧಿಸುವುದಕ್ಕೆ ಕಾನೂನು ಅವಕಾಶ ನೀಡುವುದಿಲ್ಲ.ಜೊತೆಗೆ, ನ್ಯಾಯಾಲಯವು ಮೇಲೆ ಅಭಿಪ್ರಾಯಪಟ್ಟಂತೆ ಕೇವಲ ಊಹೆಗಳನ್ನು ಮತ್ತು ಅನುಮಾನಗಳನ್ನು ಆಧರಿಸಿ, ಯಾವುದೇ ಆಧಾರವಿಲ್ಲದೆ ಆಪಾದಿತ ನಿಂದಕನನ್ನು ಶಿಕ್ಷಿಸುವುದಿಲ್ಲ.ಅರೆ-ಅಪರಾಧಿಕ ಸ್ವರೂಪದ್ದಾಗಿರುವ ನಿಂದನಾ ವ್ಯವಹರಣೆಗಳು, ಅವುಗಳಲ್ಲಿ ಅನ್ವಯವಾಗಬಹುದಾದ ನಿಯಮಗಳ ಅಡಿಯಲ್ಲಿ ಗೊತ್ತುಪಡಿಸಿದ ಕಾರವಿಧಾನವನ್ನು, ಕಡ್ಡಾಯವಾಗಿ ಪಾಲಿಸುವುದನ್ನು ಅಗತ್ಯಪಡಿಸುತ್ತವೆ.

14. ಪ್ರಶಾಂತ್ ಭೂಷಣ್ ಮೊಕದ್ದಮೆಯಲ್ಲಿ (2010 ಎಐಆರ್ ಎಸ್ಡಬ್ಲ್ಯೂ 5356) (ಮೇಲೆ ಹೇಳಿದ) ಈ ನ್ಯಾಯಾಲಯದ ಇತ್ತೀಚಿನ ನಿರ್ಣಯದಿಂದ, ವ್ಯವಹರಣೆಗಳಲ್ಲಿ ಒಳಗೊಂಡ ವಿವಾದವು, ನ್ಯಾಯ ಪ್ರದಾನತೆಯ ಮೇಲೆ ಮತ್ತು ನ್ಯಾಯ ನೀಡಿಕೆ ವ್ಯವಸ್ಥೆಯ ಮೇಲೆ ಹೆಚ್ಚಿನ ಪರಿಣಾಮ ಬೀರುವುದಿದ್ದರೆ, ನ್ಯಾಯಾಲಯವು, ಸಂದರ್ಭಾನುಸಾರ ಅಡ್ವಕೇಟ್ ಜನರಲ್ ಸಮ್ಮತಿ ಇಲ್ಲದೆಯೂ ನಿಂದನಾ ವ್ಯವಹರಣೆಗಳನ್ನು ಕುರಿತು ವಿಚಾರಣೆ ಮಾಡಲು ಸಕ್ಷಮವಾಗಿರುತ್ತದೆ. 'ಎಂದು ಸ್ಪಷ್ಟವಾಗುತ್ತದೆ.

35. ಆಯಿಲ್ ಅಂಡ್ ನ್ಯಾಚುರಲ್ ಗ್ಯಾಸ್ ಕಾರ್ಪೊರೇಷನ್ ಅಮಿಟೆಡ್-ವಿರುದ್ಧ-ವೆಸ್ಟರ್ನ್ ಜಿಇಸಿಒ ಇಂಟರ್ನ್ಯಾಷನಲ್ ಅಮಿಟೆಡ್ ಮೊಕದ್ದಮೆಯಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು, 38 ನೇ ಕಂಡಿಕೆಯಲ್ಲಿ ಸಾರ್ವಜನಿಕ ಚ ಹಿತಾಸಕ್ತಿಯನ್ನು ಪರಿಗಣಿಸುವಾಗ, ಈ ಕೆಳಗಿನಂತೆ ಅಭಿಪ್ರಾಯಪಟ್ಟಿದೆ:

"38. ಭಾರತ ಕಾನೂನು ನೀತಿಗೆ ಸಮಾನವಾಗಿ ಪ್ರಮುಖವಾದ ಮತ್ತು ವಾಸ್ತವವಾಗಿ ಮೂಲಭೂತವಾದ ತತ್ವವೆಂದರೆ, ನ್ಯಾಯಾಲಯ ಮತ್ತು ಹಾಗೆಯೇ, ನ್ಯಾಯಿಕ ಸ್ವರೂಪದ ಪ್ರಾಧಿಕಾರವು, ಅದರ ಮುಂದಿರುವ ಪಕ್ಷಕಾರರ ಹಕ್ಕುಗಳನ್ನು ಮತ್ತು ಬಾಧ್ಯತೆಗಳನ್ನು ನಿರ್ಧರಿಸುವಾಗ, ಸಹಜ ನ್ಯಾಯ ತತ್ವಗಳಿಗನುಸಾರವಾಗಿ ಹಾಗೆ ಮಾಡಬೇಕಾಗುತ್ತದೆ.ಇದಲ್ಲದೆ, ವಿಷಯವನ್ನು ನಿರ್ಧರಿಸುವ ನ್ಯಾಯಾಲಯವು/ಪ್ರಾಧಿಕಾರವು, ಒಂದಲ್ಲ ಒಂದು ರೀತಿಯಲ್ಲಿ ಅಭಿಪ್ರಾಯವನ್ನು ತೆಗೆದುಕೊಳ್ಳುವಾಗ, ಸಹವರ್ತಿ ಸಂಗತಿಗಳು ಮತ್ತು ಸಂದರ್ಭಗಳೆಡೆಗೆ ಅದರ ಗಮನವನ್ನು ಹರಿಸಬೇಕು ಎಂಬುದು ಸಹಜ ನ್ಯಾಯ ತತ್ವಗಳ ಹಲವು ಅಂಶಗಳಲ್ಲಿ ಒಂದು ಅಂಶವಾಗಿರುವ ಬಹು ಪ್ರಸಿದ್ಧ ' ಉಭಯ ಪಕ್ಷಗಳ ಅಹವಾಲನ್ನು ಆಲಿಸತಕ್ಕದ್ದು ಎ 0 ಬ ನಿಯಮವಾಗಿದೆ.ಗಮನ ಹರಿಸದೇ ಇರುವುದು, ಯಾವುದೇ ನ್ಯಾಯನಿರ್ಣಯಕ್ಕೆ ಬಾಧಕವಾಗುವ ದೋಷವಾಗಿದೆ.ಮನಸ್ಸಿನ ಬಹಿರಂಗ ಪಡಿಸುವಿಕೆಯಿಂದ, ಮನೋವಿವೇಕವನ್ನು ಅತ್ಯುತ್ತಮವಾಗಿ ವ್ಯಕ್ತಪಡಿಸಲಾಗುತ್ತದೆ ಮತ್ತು ನ್ಯಾಯಾಲಯವು ಅಥವಾ ಪ್ರಾಧಿಕಾರವು ತೆಗೆದುಕೊಳ್ಳುವ ನಿರ್ಣಯಕ್ಕೆ ಸಮರ್ಥನೆಯಾಗಿ ನೀಡುವ ಕಾರಣಗಳನ್ನು ದಾಖಲಿಸುವ ಮೂಲಕ ಮನಸ್ಸಿನ ಬಹಿರಂಗಪಡಿಸುವಿಕೆಯನ್ನು ಅತ್ಯುತ್ತಮವಾಗಿ ಮಾಡಲಾಗುತ್ತದೆ.ನ್ಯಾಯನಿರ್ಣಯಿಸುವ ಪ್ರಾಧಿಕಾರವು, ತನ್ನ ಮನೋವಿವೇಕವನ್ನು ಬಳಸುವುದು ಅಗತ್ಯವಾಗಿದ್ದು, ಆ ಅಭಿಪ್ರಾಯದಲ್ಲಿ ಅದು ನಮ್ಮ ನ್ಯಾಯಶಾಸ್ತ್ರದಲ್ಲಿ ಎಷ್ಟು ಆಳವಾಗಿ ಬೇರೂರಿದೆಯೆಂದರೆ, ಅದನ್ನು ಮೂಲ ನೀತಿ ಅಥವಾ ಭಾರತದ ಕಾನೂನು ಎ ಂ ಬ ಂ ತೆ ವಿವರಿಸಬಹುದಾಗಿದೆ. "

36. ಅಸೋಸಿಯೇಟ್ ಬಿಲ್ಡರ್ -ವಿರುದ್ಧ-ದೆಹಲಿ ಡೆವಲಪ್ಮೆಂಟ್ ಅಥಾರಿಟ್ ಮೊಕದ್ದಮೆಯಲ್ಲಿ, ಮಾನ್ಯ ಸರ್ವೋಚ್ಚ ನ್ಯಾಯಾಲಯವು ಮಧ್ಯಸ್ಥಿಕೆ ಮತ್ತು ಚ ಸಂಧಾನ ಅಧಿನಿಯಮದ ಉಪಬಂಧಗಳನ್ನು ಪರಿಗಣಿಸುವಾಗ, 28 ನೇ ಕಂಡಿಕೆಯಲ್ಲಿ ಈ ಕೆಳಗಿನಂತೆ ಅಭಿಪ್ರಾಯಪಟ್ಟಿದೆ:

"28. ಒಎನ್ಜಿಸಿ ಲಿಮಿಟೆಡ್ -ವಿರುದ್ಧ-ವೆಸ್ಟರ್ನ್ ಜಿಕೊ ಇಂಟರ್ನ್ಯಾಷನಲ್ ಲಿಮಿಟೆಡ್ ಮೊಕದ್ದಮೆಯ ಇತ್ತೀಚಿನ ತೀರ್ಪಿನಲ್ಲಿ, ಈ ನ್ಯಾಯಾಲಯವು, ಮೂರು ಇತರ ವಿಶಿಷ್ಟ ಮತ್ತು ಮೂಲಭೂತ ನ್ಯಾಯತತ್ವಗಳನ್ನು ಸೇರಿಸಿದ್ದು, ಅವುಗಳನ್ನು ಭಾರತದ ಕಾನೂನಿನ ಮೂಲ ನೀತಿಯ ಅವಿಭಾಜ್ಯ ಅಂಗವೆಂದು ಅರ್ಥ ಮಾಡಿಕೊಳ್ಳಬೇಕು.ನ್ಯಾಯಾಲಯವು ಈ ಕೆಳಗಿನ ಂ ತೆ ಅಭಿಪ್ರಾಯಪಟ್ಟಿದೆ:(ಎಸ್ಸಿ ಪುಟ 278-80; 35 ಮತ್ತು 38-40 ಕಂಡಿಕೆಗಳು)

"35. ಹಾಗಿದ್ದರೆ, ಭಾರತದ ಕಾನೂನಿನ ಮೂಲ ನೀತಿಯನ್ನು ಯಾವುದು ರೂಪಿಸುತ್ತದೆ ' ಎಂಬುದು ಪ್ರಶ್ನೆಯಾಗಿದೆ.ಒಎನ್ಜಿಸಿಯಲ್ಲಿನ ನಿರ್ಣಯವು, ಆ ಅಂಶವನ್ನು ವಿವರಿಸುವುದಿಲ್ಲ. ಹಾಗೆ ವಿವರಿಸಿದರೂ, ನಮ್ಮ ಅಭಿಪ್ರಾಯದಲ್ಲಿ ಆ ನಿರೂಪಣೆಯು, ಈ ದೇಶದಲ್ಲಿನ ನ್ಯಾಯ ಪ್ರದಾನ ಮಾಡುವುದಕ್ಕೆ ಮತ್ತು ಕಾನೂನು ಜಾರಿಗೆ ತಳಹದಿಯನ್ನು ಒದಗಿಸುವಂಥ ಎಲ್ಲಾ ಮೂಲಭೂತ ತತ್ವಗಳನ್ನು ಒಳಗೊಂಡಿರಬೇಕು. "ಭಾರತದ ಕಾನೂನಿನ ಮೂಲ ನೀತಿ " ಎಂಬ ಪದಾವಳಿಗಳ ಉದ್ದೇಶವನ್ನು ಸಂಪೂರ್ಣವಾಗಿ ಅರ್ಥ ಮಾಡಿಕೊಳ್ಳದೆ, ಭಾರತದ ಕಾನೂನಿನ ಮೂಲ ನೀತಿಯ ಅವಿಭಾಜ್ಯ ಅಂಗವೆಂದು ಅತ್ಯಗತ್ಯವಾಗಿ ಅರಿತುಕೊಳ್ಳಬೇಕಾದಂಥ

ಮೂರು ವಿಶಿಷ್ಟ ಮತ್ತು ಮೂಲಭೂತ ನ್ಯಾಯ ತತ್ವಗಳನ್ನು ನಾವು ಉಲ್ಲೇಖಿಸಲು ಸಾಧ್ಯವಿಲ್ಲ.ಮೊದಲ ಮತ್ತು ಮುಖ್ಯವಾದ ತತ್ವವೆಂದರೆ, ನಾಗರಿಕನ ಹಕ್ಕುಗಳ ಮೇಲೆ ಪರಿಣಾಮ ಬೀರುವ ಅಥವಾ ಯಾವುದೇ ನಾಗರಿಕ ಸ್ಥಾನಮಾನಗಳಿಗೆ ಕಾರಣವಾಗುವ ನ್ಯಾಯಾಲಯವಾಗಲಿ ಅಥವಾ ಇತರ ಪ್ರಾಧಿಕಾರವಾಗಲಿ ಕೈಗೊಳ್ಳುವ ಪ್ರತಿಯೊಂದು ನಿರ್ಧರಣೆಯಲ್ಲಿ, ನ್ಯಾಯಾಲಯ ಅಥವಾ ಸಂಬಂಧಪಟ್ಟ ಪ್ರಾಧಿಕಾರವು, ವಿಷಯದಲ್ಲಿ " ನ್ಯಾಯಿಕ ಮಾರ್ಗ " ಎಂದು ಕರೆಯಲಾಗುವ ಕಾನೂನು ಪದ್ಧತಿಯನ್ನು ಅಳವಡಿಸಿಕೊಳ್ಳಲು ಬದ್ಧವಾಗಿರುತ್ತದೆ.ನ್ಯಾಯಾಲಯ ಅಥವಾ ಪ್ರಾಧಿಕಾರವು ಚಲಾಯಿಸಿದ ಅಧಿಕಾರದ ಸ್ವರೂಪದಿಂದಲೇ ಉದ್ಭವಿಸುವ ನ್ಯಾಯಿಕ ಮಾರ್ಗವನ್ನು ಅಳವಡಿಸಿಕೊಳ್ಳುವ ಕರ್ತವ್ಯವನ್ನು, ಪ್ರತ್ಯೇಕವಾಗಿ ಅಥವಾ ಹೆಚ್ಚುವರಿಯಾಗಿ ಸಂಬಂಧಪಟ್ಟ ವೇದಿಕೆಯ ಮೇಲೆ ವಿಧಿಸಲಾಗುವುದಿಲ್ಲ.ನೆನಪಿನಲ್ಲಿಟ್ಟುಕೊಳ್ಳಬೇಕಾದ ಅಂಶವೆಂದರೆ, ನ್ಯಾಯಿಕ ಮತ್ತು ನ್ಯಾಯಿಕ ಸ್ವರೂಪದ ನಿರ್ಧರಣೆಯಲ್ಲಿ ನ್ಯಾಯಿಕ ಮಾರ್ಗದ ಪ್ರಾಮುಖ್ಯತೆಯು, ನ್ಯಾಯಾಲಯ, ನ್ಯಾಯಾಧಿಕರಣ ಅಥವಾ ಪ್ರಾಧಿಕಾರದ ಮುಂದೆ ಪಕ್ಷಕಾರರ ಹಕ್ಕುಗಳ ಅಥವಾ ಬಾಧ್ಯತೆಗಳ ಮೇಲೆ ಪರಿಣಾಮ ಬೀರುವಂಥ ಅಧಿಕಾರಗಳನ್ನು ಅವು ಚಲಾಯಿಸುವವರೆಗೆ, ನ್ಯಾಯಿಕ ಮಾರ್ಗದ ನಿಷ್ಠತೆಯನ್ನು ಅವರು ತೋರಿಸುತ್ತವೆ ಎಂಬ ವಾಸ್ತವಿಕತೆಯಲ್ಲಿದ್ದು, ಮಧ್ಯಸ್ಥಿಕೆ ಮೂಲಕ, ಮನಸೋಇಚ್ಛೆಯಾಗಿ ಅಥವಾ ಖಯಾಲಿಯಂತೆ ಅವು ಕಾರನಿರ್ವಹಿಸಲಾಗುವುದಿಲ್ಲ.ಪ್ರಾಧಿಕಾರವು ಸದ್ಭಾವನೆಯಿಂದ ಕಾರನಿರ್ವಹಿಸುತ್ತಿದೆ ಮತ್ತು ವಿಷಯವನ್ನು ಕುರಿತು ನ್ಯಾಯಯುತವಾಗಿ, ಯುಕ್ತವಾಗಿ ಮತ್ತು ವಸ್ತುನಿಷ್ಠವಾದ ರೀತಿಯಲ್ಲಿ ಕಾರ್ಯನಿರ್ವಹಿಸುತ್ತಿದೆ ಎಂದು ಹಾಗೂ ಅದರ ನಿರ್ಣಯವು ಯಾವುದೇ ಬಾಹ್ಯ ಪರಿಗಣನೆಯಿಂದ ಪ್ರಚೋದಿತವಾಗಿಲ್ಲವೆಂದು ನ್ಯಾಯಿಕ ಮಾರ್ಗವು ನಿಶ್ಚಿತಪಡಿಸುತ್ತದೆ.ಆ ಭಾವದಲ್ಲಿ ನ್ಯಾಯಿಕ ಮಾರ್ಗವು, ನ್ಯಾಯಾಲಯ, ನ್ಯಾಯಾಧಿಕರಣ ಅಥವಾ ಪ್ರಾಧಿಕಾರದ ನಿರ್ಣಯವನ್ನು ಸವಾಲಿಗೆ ಗುರಿಯಾಗಿಸಲು ಸಾಧ್ಯವಿರುವಂಥ ಲೋಪದೋಷಗಳ ವಿರುದ್ಧ ತಡೆಯಾಗಿ ಕಾರನಿರ್ವಹಿಸುತ್ತದೆ.

38. ನ್ಯಾಯಾಲಯ ಹಾಗೆಯೇ ನ್ಯಾಯಿಕ ಸ್ವರೂಪದ ಪ್ರಾಧಿಕಾರದ ಮುಂದಿರುವ ಪಕ್ಷಕಾರರ ಹಕ್ಕುಗಳನ್ನು ಮತ್ತು ಬಾಧ್ಯತೆಗಳನ್ನು ನಿರ್ಧರಿಸುವಾಗ, ಅದು/ಅವು ಸಹಜ ನ್ಯಾಯ ತತ್ವಗಳಿಗನುಸಾರವಾಗಿ ಹಾಗೆ ಮಾಡಬೇಕೆಂಬುದು ಭಾರತದ ಕಾನೂನು ನೀತಿಗೆ ಅಷ್ಟೇ ಪ್ರಮುಖವಾದ ಮತ್ತು ವಾಸ್ತವವಾಗಿ ಮೂಲಭೂತವಾದ ತತ್ವವಾಗಿದೆ.ಇದಲ್ಲದೆ, ಒಂದಲ್ಲ ಒಂದು ರೀತಿಯಲ್ಲಿ ಅಭಿಪ್ರಾಯವನ್ನು ಕೈಗೊಳ್ಳುವಾಗ, ಸಹವರ್ತಿ ಸಂಗತಿಗಳ ಮತ್ತು ಸಂದರ್ಭಗಳ ಕಡೆಗೆ ವಿಷಯವನ್ನು ಕುರಿತು ನಿರ್ಧರಿಸುವ ನ್ಯಾಯಾಲಯವು/ಪ್ರಾಧಿಕಾರವು ಗಮನಹರಿಸಬೇಕೆಂಬುದು, ಸಹಜ ನ್ಯಾಯತತ್ವಗಳ ಅಂಶಗಳನ್ನು ಕುರಿತು ಪ್ರಸಿದ್ಧ ಉಭಯ ಪಕ್ಷಕಾರರ ವಾದಗಳನ್ನು ಆಲಿಸತಕ್ಕದ್ದು ಎಂಬುದು ನಿಯಮವಾಗಿದೆ.ಮನಸ್ಸಿನಲ್ಲಿರುವುದನ್ನು ಬಹಿರ ಂ ಗಪಡಿಸುವ ಮೂಲಕ ಗಮನ ಹರಿಸುವುದನ್ನು ಅತ್ಯುತ್ತಮವಾಗಿ ವ್ಯಕ್ತಪಡಿಸಲಾಗುತ್ತದೆ ಮತ್ತು ಮನಸ್ಸಿನಲ್ಲಿರುವುದನ್ನು ಬಹಿರಂಗಪಡಿಸುವುದನ್ನು, ನ್ಯಾಯಾಲಯ ಅಥವಾ ಪ್ರಾಧಿಕಾರವು ತೆಗೆದುಕೊಳ್ಳುವ ನಿರ್ಣಯದ ಸಮರ್ಥನೆಯಲ್ಲಿ ಕಾರಣಗಳನ್ನು ದಾಖಲಿಸುವ ಮೂಲಕ ಅತ್ಯುತ್ತಮವಾಗಿ ಮಾಡಲಾಗುತ್ತದೆ.ನ್ಯಾಯನಿರ್ಣಯಿಸುವ ಪ್ರಾಧಿಕಾರವು ಗಮನಹರಿಸಬೇಕೆಂಬುದು ಅಗತ್ಯವಾಗಿದ್ದು, ಆ ಅಭಿಪ್ರಾಯದಲ್ಲಿ, ಅದು ನಮ್ಮ ನ್ಯಾಯಶಾಸ್ತ್ರದಲ್ಲಿ ಎಷ್ಟು ಆಳವಾಗಿ ಬೇರೂರಿದೆ ಎಂದರೆ, ಅದನ್ನು ಭಾರತದ ಕಾನೂನಿನ ಮೂಲ ನೀತಿಯೆಂದು ವಿವರಿಸಬಹುದಾಗಿದೆ.

39. ಈಗ ಈ ತತ್ವವನ್ನು, ದುರಾಗ್ರಹದಿಂದ ಕೂಡಿರುವ ಅಥವಾ ಹಾಗೆ ಅತಾರ್ಕಿಕವಾಗಿರುವ ನಿರ್ಣಯವನ್ನು ಯಾರೇ ಯುಕ್ತ ವ್ಯಕ್ತಿಯು ನ್ಯಾಯಾಲಯದಲ್ಲಿ ಸಮರ್ಥಿಸಲಾಗದಿರುವುದಿಲ್ಲ ಎಂಬುದನ್ನು ಆಡಳಿತಾತ್ಮಕ

ಕಾನೂನಿನಲ್ಲಿನ ಶಾಸನಾತ್ಮಕ ನ್ಯಾಯಿಕ ಮೂಲಭೂತ ತತ್ವವೆಂದು ಗುರುತಿಸಿರುವುದು ಕಡಿಮೆ ಪ್ರಾಮುಖ್ಯತೆಯದೇನಲ್ಲ.ನಿರ್ಣಯಗಳ ದುರಾಗ್ರಹತೆ ಅಥವಾ ಅತಾರ್ಕಿಕತೆಯನ್ನು ತರ್ಕಸಮ್ಮತೆತೆಯ ವೆಡ್ನಸ್ಬರಿ ತತ್ವದ ಒರೆಗಲ್ಲಿನ ಆಧಾರದ ಮೇಲೆ ಪರೀಕ್ಷಿಸಲಾಗಿದೆ.ತರ್ಕಸಮ್ಮತೆತೆಯ ಮಾನದಂಡಗಳನ್ನು ಈಡೇರಿಸುವುದಿಲ್ಲವೆಂಬ ನಿರ್ಣಯಗಳು, ಸಾಮಾನ್ಯವಾಗಿ ವರಿಷ್ಠ ನ್ಯಾಯಾಲಯಗಳ ರಿಟ್ ಅಧಿಕಾರವಾಪ್ತಿಯಲ್ಲಿ ನ್ಯಾಯಾಲಯದಲ್ಲಿ ಪ್ರಶ್ನಿಸಲು ಮುಕ್ತವಾಗಿರುತ್ತವೆಯಾದರೂ, ಅವು ಲಭ್ಯವಿರುವಲ್ಲಿ ಶಾಸನಾತ್ಮಕ ಪ್ರಕ್ರಿಯೆಗೆ ಸಮನಾಗಿರುತ್ತವೆ.

40. ಇದು, ಭಾರತದ ಕಾನೂನಿನ ಮೂಲ ನೀತಿಯನ್ನು ಏನು ರೂಪಿಸಿದೆಯೋ ಅದನ್ನು ಆದ್ಯಂತವಾಗಿ ಪಟ್ಟಿ ಮಾಡುವುದು ನಮಗೆ ಅವಶ್ಯಕವೂ ಅಲ್ಲ ಅಥವಾ ಯುಕ್ತವೂ ಅಲ್ಲ ಅಥವಾ ಪರಿಭಾಷೆಯ ನಿರ್ಬ ೦ ಧದಲ್ಲಿ ಅಭಿಪ್ರಾಯವನ್ನು ನೀಡುವುದು ಸಾಧ್ಯವೂ ಇಲ್ಲ. ಪ್ರಸ್ತುತ ಮೊಕದ್ದಮೆಯ ಸಂದರ್ಭದಲ್ಲಿ ಮುಖ್ಯವಾದ ಅಂಶವೆಂದರೆ, ಮಧ್ಯಸ್ಥಗಾರರ ಮುಂದೆ ಸಾಬೀತುಪಡಿಸಿದ ಸಂಗತಿಗಳ ಆಧಾರದ ಮೇಲೆ ಅವರು ಯಾವ ತೀರ್ಮಾನಕ್ಕೆ ಬರಬೇಕಿತ್ತೋ ಆ ತೀರ್ಮಾನಕ್ಕೆ ಬರಲು ವಿಫಲರಾದರೆ ಅಥವಾ ಅದಕ್ಕೆ ಪ್ರತಿಯಾಗಿ ಸಮರ್ಥಿಸಲಾಗದ ನ್ಯಾಯದ ವೈಫಲ್ಯವಾಗಿ ಪರಿಣಮಿಸುವ ತೀರ್ಮಾನಕ್ಕೆ ಅವರು ಬಂದರೆ, ಐತೀರ್ಪುಗಳನ್ನು ನೀಡುವಲ್ಲಿ ಗಣನೀಯ ಸ್ವಾತಂತ್ರ್ಯವನ್ನು ಹೊಂದಿರುವಂಥ ಮಧ್ಯಸ್ಥಿಕೆ ನ್ಯಾಯಾಧಿಕರಣವು ನ್ಯಾಯ ನಿರ್ಣಯಿಸಿದಾಗಲೂ, ಪ್ರಶ್ನಿಸಲು ಅವಕಾಶವಿರುತ್ತದೆ ಮತ್ತು ಉಲ್ಲ ೦ ಘನೆಯ ಭಾಗವು ಉಳಿದ ಭಾಗದಿಂದ ಪ್ರತ್ಯೇಕವಾಗಿದೆಯೇ ಅಥವಾ ಪ್ರತ್ಯೇಕವಾಗಿಲ್ಲವೇ ಎಂಬುದನ್ನಾಧರಿಸಿ ಕೈಬಿಡಬಹುದು ಅಥವಾ ಮಾರ್ಪಡಿಸಬಹುದು.

37. ಸಾಂಗ್ಯಾಂಗ್ ಇಂಜಿನಿಯರಿಂಗ್ & ಕನ್ಸ್ಟ್ರಕ್ಷನ್ ಕಂಪನಿ ಅಮಿಟೆಡ್ -ವಿರುದ್ಧ ಭಾರತ ರಾಷ್ಟ್ರೀಯ ಹೆದ್ದಾರಿಗಳ ಪ್ರಾಧಿಕಾರ (ಎನ್ಹೆಚ್ಎಐ) [22] ಮೊಕದ್ದಮೆಯಲ್ಲಿನ ಇತ್ತೀಚಿನ ತೀರ್ಪಿನಲ್ಲಿ, ಮಾನ್ಯ ಸರ್ವೋಚ್ಚ ನ್ಯಾಯಾಲಯವು, ನ್ಯಾಯಾಲಯ ಮತ್ತು ನ್ಯಾಯಿಕ ಸ್ವರೂಪದ ಪ್ರಾಧಿಕಾರಗಳೆರಡನ್ನು ಗಮನದಲ್ಲಿರಿಸಿಕೊಂಡು ವಿಷಯವನ್ನು ಪರಿಗಣಿಸುವಾಗ, 17 ನೇ ಕಂಡಿಕೆಯಲ್ಲಿ ಈ ಕೆಳಗಿನಂತೆ ಅಭಿಪ್ರಾಯಪಟ್ಟಿದೆ:

"17. 1996 ರ ಅಧಿನಿಯಮದ 34 ನೇ ಪ್ರಕರಣದಲ್ಲಿರುವ " ಭಾರತದ ಸಾರ್ವಜನಿಕ ನೀತಿ " ಪದಾವಳಿಯ ಮತ್ತೊಂದು ಅಭಿವ್ಯಕ್ತಿಯಲ್ಲಿ, ಅಸೋಸಿಯೇಟ್ ಬಿಲ್ಡರ್ (ಮೇಲೆ ಹೇಳಿದ) ಮೊಕದ್ದಮೆಯಲ್ಲಿ ವಿವರಿಸಿದ್ದ, ವೆಸ್ಟರ್ನ್ ಜೆಕೋ (ಮೇಲೆ ಹೇಳಿದ) ಮೊಕದ್ದಮೆಯಲ್ಲಿ, ಈ ನ್ಯಾಯಾಲಯದ ಮತ್ತೊಂದು ತೀರ್ಪಿನ ಮೂಲಕ ಈ ಮುಂದಿನಂತೆ ಅಭಿಪ್ರಾಯಪಡಲಾಗಿದೆ: "28. ಇತ್ತೀಚಿನ ತೀರ್ಪಿನಲ್ಲಿ, ಈ ನ್ಯಾಯಾಲಯವು ಒಎನ್ಜಿಸಿ ಲಿಮಿಟೆಡ್ -ವಿರುದ್ಧ-ವೆಸ್ಟರ್ನ್ ಜೆಕೋ ಇಂಟರ್ನ್ಯಾಷನಲ್ ಲಿಮಿಟೆಡ್ ಮೊಕದ್ದಮೆಯಲ್ಲಿ, ಮೂರು ಇತರ ವಿಶಿಷ್ಟ ಮತ್ತು ಮೂಲಭೂತ ನ್ಯಾಯತತ್ವಗಳನ್ನು ಸೇರಿಸಿದ್ದು, ಅವುಗಳನ್ನು ಭಾರತದ ಕಾನೂನಿನ ಮೂಲ ನೀತಿಯ ಅವಿಭಾಜ್ಯ ಅಂಗವೆಂದು ಅರ್ಥ ಮಾಡಿಕೊಳ್ಳಬೇಕು.ನ್ಯಾಯಾಲಯವು ಈ ಕೆಳಗಿನಂತೆ ಅಭಿಪ್ರಾಯಪಟ್ಟಿದೆ:(ಎಸ್ಸಿಸಿ ಪುಟ 78-80, 35 ಮತ್ತು 38-40 ಕಂಡಿಕೆಗಳು)

"35. ಹಾಗಿದ್ದರೆ, ಭಾರತದ ಕಾನೂನಿನ ಮೂಲ ನೀತಿಯನ್ನು ಯಾವುದು ರೂಪಿಸುತ್ತದೆ ' ಎಂಬುದು ಪ್ರಶ್ನೆಯಾಗಿದೆ.ಒಎನ್ಜಿಸಿಯಲ್ಲಿನ ನಿರ್ಣಯವು, ಆ ಅಂಶವನ್ನು ವಿವರಿಸುವುದಿಲ್ಲ.ಹಾಗೆ ವಿವರಿಸಿದರೂ, ನಮ್ಮ ಅಭಿಪ್ರಾಯದಲ್ಲಿ ಆ ನಿರೂಪಣೆಯು, ಈ ದೇಶದಲ್ಲಿನ ನ್ಯಾಯ ಪ್ರದಾನ ಮಾಡುವುದಕ್ಕೆ ಮತ್ತು ಕಾನೂನು

ಜಾರಿಗೆ ತಳಹದಿಯನ್ನು ಒದಗಿಸುವಂಥ ಎಲ್ಲಾ ಮೂಲಭೂತ ತತ್ವಗಳನ್ನು ಒಳಗೊಂಡಿರಬೇಕು. "ಭಾರತದ ಕಾನೂನಿನ ಮೂಲ ನೀತಿ " ಎಂಬ ಪದಾವಳಿಗಳ ಉದ್ದೇಶವನ್ನು ಮಾಡಿಕೊಳ್ಳದೆ, ಭಾರತದ ಕಾನೂನಿನ ಮೂಲ ನೀತಿಯ ಅವಿಭಾಜ್ಯ ಅಂಗವೆಂದು ಅತ್ಯಗತ್ಯವಾಗಿ ಅರಿತುಕೊಳ್ಳಬೇಕಾದಂಥ ಮೂರು ವಿಶಿಷ್ಟ ಮತ್ತು ಮೂಲಭೂತ ನ್ಯಾಯ ತತ್ವಗಳನ್ನು ನಾವು ಉಲ್ಲೇಖಿಸಲು ಸಾಧ್ಯವಿಲ್ಲ.ಮೊದಲ ಮತ್ತು ಮುಖ್ಯವಾದ ತತ್ವವೆಂದರೆ, ನಾಗರಿಕ ಹಕ್ಕುಗಳ ಮೇಲೆ ಪರಿಣಾಮ ಬೀರುವ ಅಥವಾ ಯಾವುದೇ ನಾಗರಿಕ ಸ್ಥಾನಮಾನಗಳಿಗೆ ಕಾರಣವಾಗುವ ನ್ಯಾಯಾಲಯವಾಗಲಿ ಅಥವಾ ಇತರ ಪ್ರಾಧಿಕಾರವಾಗಲಿ ಕೈಗೊಳ್ಳುವ ಪ್ರತಿಯೊ ಂ ದು ನಿರ್ಧರಣೆಯಲ್ಲಿ, ನ್ಯಾಯಾಲಯ ಅಥವಾ ಸ ಂ ಬ ಂ ಧಪಟ್ಟ ಎ ಪ್ರಾಧಿಕಾರವು, ವಿಷಯದಲ್ಲಿ ನ್ಯಾಯಿಕ ಮಾರ್ಗ 99 " ಎಂದು ಕರೆಯಲಾಗುವ ಕಾನೂನು ಪದ್ಧತಿಯನ್ನು ಅಳವಡಿಸಿಕೊಳ್ಳಲು ಬದ್ಧವಾಗಿರುತ್ತದೆ.ನ್ಯಾಯಾಲಯ ಅಥವಾ ಪ್ರಾಧಿಕಾರವು ಚಲಾಯಿಸಿದ ಅಧಿಕಾರದ ಸ್ವರೂಪದಿಂದಲೇ ಉದ್ಭವಿಸುವ ನ್ಯಾಯಿಕ ಮಾರ್ಗವನ್ನು ಅಳವಡಿಸಿಕೊಳ್ಳುವ ಕರ್ತವ್ಯವನ್ನು, ಪ್ರತ್ಯೇಕವಾಗಿ ಅಥವಾ ಹೆಚ್ಚುವರಿಯಾಗಿ ಸಂಬಂಧಪಟ್ಟ ವೇದಿಕೆಯ ಮೇಲೆ ವಿಧಿಸಲಾಗುವುದಿಲ್ಲ.ನೆನಪಿನಲ್ಲಿಟ್ಟುಕೊಳ್ಳಬೇಕಾದ ಅಂಶವೆಂದರೆ, ನ್ಯಾಯಿಕ ಮತ್ತು ನ್ಯಾಯಿಕ ಸ್ವರೂಪದ ನಿರ್ಧರಣೆಯಲ್ಲಿ ನ್ಯಾಯಿಕ ಮಾರ್ಗದ ಪ್ರಾಮುಖ್ಯತೆಯು, ನ್ಯಾಯಾಲಯ, ನ್ಯಾಯಾಧಿಕರಣ ಅಥವಾ ಪ್ರಾಧಿಕಾರದ ಮುಂದೆ ಪಕ್ಷಕಾರರ ಹಕ್ಕುಗಳ ಅಥವಾ ಬಾಧ್ಯತೆಗಳ ಮೇಲೆ ಪರಿಣಾಮ ಬೀರುವಂಥ ಅಧಿಕಾರಗಳನ್ನು ಅವು ಚಲಾಯಿಸುವವರೆಗೆ, ನ್ಯಾಯಿಕ ಮಾರ್ಗದ ನಿಷ್ಠತೆಯನ್ನು ಅವರು ತೋರಿಸುತ್ತವೆ ಎಂಬ ವಾಸ್ತವಿಕತೆಯಲ್ಲಿದ್ದು, ಮಧ್ಯಸ್ಥಿಕೆ ಮೂಲಕ, ಮನಸೋಇಚ್ಛೆಯಾಗಿ ಅಥವಾ ಖಯಾಲಿಯಂತೆ ಅವು ಕಾರನಿರ್ವಹಿಸಲಾಗುವುದಿಲ್ಲ.ಪ್ರಾಧಿಕಾರವು ಪ್ರಾಮಾಣಿಕವಾಗಿ ಕಾರನಿರ್ವಹಿಸುತ್ತಿದೆ ಮತ್ತು ವಿಷಯವನ್ನು ಕುರಿತು ನ್ಯಾಯಯುತವಾಗಿ, ಯುಕ್ತವಾಗಿ ಮತ್ತು ವಸ್ತುನಿಷ್ಠವಾದ ರೀತಿಯಲ್ಲಿ ಕಾರ್ಯನಿರ್ವಹಿಸುತ್ತಿದೆ ಎಂದು ಹಾಗೂ ಅದರ ನಿರ್ಣಯವು ಯಾವುದೇ ಬಾಹ್ಯ ಪರಿಗಣನೆಯಿಂದ ಪ್ರಚೋದಿತವಾಗಿಲ್ಲವೆಂದು ನ್ಯಾಯಿಕ ಮಾರ್ಗವು ನಿಶ್ಚಿತಪಡಿಸುತ್ತದೆ.ಆ ಭಾವದಲ್ಲಿ ನ್ಯಾಯಿಕ ಮಾರ್ಗವು, ನ್ಯಾಯಾಲಯ, ನ್ಯಾಯಾಧಿಕರಣ ಅಥವಾ ಪ್ರಾಧಿಕಾರದ ನಿರ್ಣಯವನ್ನು ಸವಾಲಿಗೆ ಗುರಿಯಾಗಿಸಲು ಸಾಧ್ಯವಿರುವಂಥ ಲೋಪದೋಷಗಳ ವಿರುದ್ಧ ತಡೆಯಾಗಿ ಕಾವ್ಯನಿರ್ವಹಿಸುತ್ತದೆ.

38. ನ್ಯಾಯಾಲಯ ಹಾಗೆಯೇ ನ್ಯಾಯಿಕ ಸ್ವರೂಪದ ಪ್ರಾಧಿಕಾರದ ಮುಂದಿರುವ ಪಕ್ಷಕಾರರ ಹಕ್ಕುಗಳನ್ನು ಮತ್ತು ಬಾಧ್ಯತೆಗಳನ್ನು ನಿರ್ಧರಿಸುವಾಗ, ಅದು/ಅವು ಸಹಜ ನ್ಯಾಯ ತತ್ವಗಳಿಗನುಸಾರವಾಗಿ ಹಾಗೆ ಮಾಡಬೇಕೆಂಬುದು ಭಾರತದ ಕಾನೂನು ನೀತಿಗೆ ಅಷ್ಟೇ ಪ್ರಮುಖವಾದ ಮತ್ತು ವಾಸ್ತವವಾಗಿ ಮೂಲಭೂತವಾದ ತತ್ವವಾಗಿದೆ.ಇದಲ್ಲದೆ, ಒಂದಲ್ಲ ಒಂದು ರೀತಿಯಲ್ಲಿ ಅಭಿಪ್ರಾಯವನ್ನು ಕೈಗೊಳ್ಳುವಾಗ, ಸಹವರ್ತಿ ಸಂಗತಿಗಳ ಮತ್ತು ಸಂದರ್ಭಗಳ ಕಡೆಗೆ ವಿಷಯವನ್ನು ಕುರಿತು ನಿರ್ಧರಿಸುವ ನ್ಯಾಯಾಲಯವು ಪ್ರಾಧಿಕಾರವು ಗಮನಹರಿಸಬೇಕೆಂಬುದು, ಸಹಜ ನ್ಯಾಯತತ್ವಗಳ ಅಂಶಗಳನ್ನು ಕುರಿತು ಪ್ರಸಿದ್ಧ ಉಭಯ ಪಕ್ಷಕಾರರ ವಾದಗಳನ್ನು ಆಲಿಸತಕ್ಕದ್ದು ಎಂಬುದು ನಿಯಮವಾಗಿದೆ.ಮನಸ್ಸಿನಲ್ಲಿರುವುದನ್ನು ಬಹಿರಂಗಪಡಿಸುವ ಮೂಲಕ ಗಮನ ಹರಿಸುವುದನ್ನು ಅತ್ಯುತ್ತಮವಾಗಿ ವ್ಯಕ್ತಪಡಿಸಲಾಗುತ್ತದೆ ಮತ್ತು ಮನಸ್ಸಿನಲ್ಲಿರುವುದನ್ನು ಬಹಿರಂಗಪಡಿಸುವುದನ್ನು, ನ್ಯಾಯಾಲಯ ಅಥವಾ ಪ್ರಾಧಿಕಾರವು ತೆಗೆದುಕೊಳ್ಳುವ ನಿರ್ಣಯದ ಸಮರ್ಥನೆಯಲ್ಲಿ ಕಾರಣಗಳನ್ನು ದಾಖಲಿಸುವ ಮೂಲಕ ಅತ್ಯುತ್ತಮವಾಗಿ ಮಾಡಲಾಗುತ್ತದೆ.ನ್ಯಾಯನಿರ್ಣಯಿಸುವ ಪ್ರಾಧಿಕಾರವು ಗಮನಹರಿಸಬೇಕೆಂಬುದು ಅಗತ್ಯವಾಗಿದ್ದು, ಆ

ಅಭಿಪ್ರಾಯದಲ್ಲಿ, ಅದು ನಮ್ಮ ನ್ಯಾಯಶಾಸ್ತ್ರದಲ್ಲಿ ಎಷ್ಟು ಆಳವಾಗಿ ಬೇರೂರಿದೆ ಎಂದರೆ, ಅದನ್ನು ಭಾರತದ ಕಾನೂನಿನ ಮೂಲ ನೀತಿಯೆಂದು ವಿವರಿಸಬಹುದಾಗಿದೆ.

39. ಈಗ ಈ ತತ್ವವನ್ನು, ದುರಾಗ್ರಹದಿಂದ ಕೂಡಿರುವ ಅಥವಾ ಹಾಗೆ ಅತಾರ್ಕಿಕವಾಗಿರುವ ನಿರ್ಣಯವನ್ನು ಯಾರೇ ಯುಕ್ತ ವ್ಯಕ್ತಿಯು ನ್ಯಾಯಾಲಯದಲ್ಲಿ ಸಮರ್ಥಿಸಲಾಗದಿರುವುದಿಲ್ಲ ಎಂಬುದನ್ನು ಆಡಳಿತಾತ್ಮಕ ಕಾನೂನಿನಲ್ಲಿನ ಶಾಸನಾತ್ಮಕ ನ್ಯಾಯಿಕ ಮೂಲಭೂತ ತತ್ವವೆಂದು ಗುರುತಿಸಿರುವುದು ಕಡಿಮೆ ಪ್ರಾಮುಖ್ಯತೆಯದೇನಲ್ಲ.ನಿರ್ಣಯಗಳ ದುರಾಗ್ರಹತೆ ಅಥವಾ ಅತಾರ್ಕಿಕತೆಯನ್ನು ತರ್ಕಸಮ್ಮತೆತೆಯ ವೆಡ್ನಸ್ಬರಿ ತತ್ವದ ಒರೆಗಲ್ಲಿನ ಆಧಾರದ ಮೇಲೆ ಪರೀಕ್ಷಿಸಲಾಗಿದೆ.ತರ್ಕಸಮ್ಮತೆತೆಯ ಮಾನದಂಡಗಳನ್ನು ಈಡೇರಿಸುವುದಿಲ್ಲವೆಂಬ ನಿರ್ಣಯಗಳು, ಸಾಮಾನ್ಯವಾಗಿ ವರಿಷ್ಠ ನ್ಯಾಯಾಲಯಗಳ ರಿಟ್ ಅಧಿಕಾರವಾಪ್ತಿಯಲ್ಲಿ ನ್ಯಾಯಾಲಯದಲ್ಲಿ ಪ್ರಶ್ನಿಸಲು ಮುಕ್ತವಾಗಿರುತ್ತವೆಯಾದರೂ, ಅವು ಲಭ್ಯವಿರುವಲ್ಲಿ ಶಾಸನಾತ್ಮಕ ಪ್ರಕ್ರಿಯೆಗೆ ಸಮನಾಗಿರುತ್ತವೆ.

40. ಇದು, ಭಾರತದ ಕಾನೂನಿನ ಮೂಲ ನೀತಿಯನ್ನು ಏನು ರೂಪಿಸಿದೆಯೋ ಅದನ್ನು ಆದ್ಯಂತವಾಗಿ ಪಟ್ಟಿ ಮಾಡುವುದು ನಮಗೆ ಅವಶ್ಯಕವೂ ಅಲ್ಲ ಅಥವಾ ಯುಕ್ತವೂ ಅಲ್ಲ ಅಥವಾ ಪರಿಭಾಷೆಯ ನಿರ್ಬಂಧದಲ್ಲಿ ಅಭಿಪ್ರಾಯವನ್ನು ನೀಡುವುದು ಸಾಧ್ಯವೂ ಇಲ್ಲ. ಪ್ರಸ್ತುತ ಮೊಕದ್ದಮೆಯ ಸಂದರ್ಭದಲ್ಲಿ ಮುಖ್ಯವಾದ ಅಂಶವೆಂದರೆ, ಮಧ್ಯಸ್ಥಗಾರರ ಮುಂದೆ ಸಾಬೀತುಪಡಿಸಿದ ಸಂಗತಿಗಳ ಆಧಾರದ ಮೇಲೆ ಅವರು ಯಾವ ತೀರ್ಮಾನಕ್ಕೆ ಬರಬೇಕಿತ್ತೋ ಆ ತೀರ್ಮಾನಕ್ಕೆ ಬರಲು ವಿಫಲರಾದರೆ ಅಥವಾ ಅದಕ್ಕೆ ಪ್ರತಿಯಾಗಿ ಸಮರ್ಥಿಸಲಾಗದ ನ್ಯಾಯದ ವೈಫಲ್ಯವಾಗಿ ಪರಿಣಮಿಸುವ ತೀರ್ಮಾನಕ್ಕೆ ಅವರು ಬಂದರೆ, ಐತೀರ್ಪುಗಳನ್ನು ನೀಡುವಲ್ಲಿ ಗಣನೀಯ ಸ್ವಾತಂತ್ರ್ಯ ಮತ್ತು ಅವಕಾಶವನ್ನು ಹೊಂದಿರುವಂಥ ಮಧ್ಯಸ್ಥಿಕೆ ನ್ಯಾಯಾಧಿಕರಣವು ನ್ಯಾಯ ನಿರ್ಣಯಿಸಿದಾಗಲೂ, ಪ್ರಶ್ನಿಸಲು ಅವಕಾಶವಿರುತ್ತದೆ ಮತ್ತು ಉಲ್ಲಂಘನೆಯ ಭಾಗವು ಉಳಿದ ಭಾಗದಿಂದ ಪ್ರತ್ಯೇಕವಾಗಿದೆಯೇ ಅಥವಾ ಪ್ರತ್ಯೇಕವಾಗಿಲ್ಲವೇ ಎಂಬುದನ್ನಾಧರಿಸಿ ಕೈಬಿಡಬಹುದು ಅಥವಾ ಮಾರ್ಪಡಿಸಬಹುದು. "

38, 3 ನೇ ಮತ್ತು 4 ನೇ ಎದುರುದಾರರ ಪರ ಮಾನ್ಯ ನ್ಯಾಯವಾದಿಗಳು, ಏಕ್ತಾ ಶಕ್ತಿ ಫೌಂಡೇಷನ್ ವಿರುದ್ಧ- ದೆಹಲಿಯ ಎನ್ಸಿಟಿ ಸರ್ಕಾರ (ಮೇಲಿನಂತೆ) ಮೊಕದ್ದಮೆಯಲ್ಲಿ ತೀರ್ಪನ್ನು ಅವಲಂಬಿಸಿದ್ದು, ಅದು, ಸಮಗ್ರ ಮಕ್ಕಳ ಅಭಿವೃದ್ಧಿ ಯೋಜನಾ ಕಾರ್ಯಕ್ರಮದ ಅಡಿಯಲ್ಲಿ ಪೂರಕ ಪೋಷಕ ಆಹಾರ ಸಿದ್ಧಪಡಿಸಲು ಮತ್ತು ಪೂರೈಸಲು ' ಸ್ವ-ಸಹಾಯ ಗುಂಪುಗಳ ಸಾಮರ್ಥ್ಯ ನಿರ್ಮಾಣಕ್ಕಾಗಿ ಸವಿವರವಾದ ಯೋಜನೆ ' ಎಂದು ಕರೆಯಲಾಗುವ ಯೋಜನೆಯ ಅನುಷ್ಠಾನದಲ್ಲಿ, ಕೇಂದ್ರ ಸರ್ಕಾರವು ತೆಗೆದುಕೊಂಡ ಕಾರನೀತಿ ನಿರ್ಣಯದ ಮೊಕದ್ದಮೆಯಾಗಿದ್ದು, ಅದರಲ್ಲಿ " ಆಡಳಿತಾತ್ಮಕ 1 ಕ್ರಮದ ನ್ಯಾಯಿಕ ಪರಿಶೀಲನೆಯ ಅಧಿಕಾರವನ್ನು ಚಲಾಯಿಸುವಾಗ, ನ್ಯಾಯಾಲಯವು ಮೇಲ್ಮನವಿ ಪ್ರಾಧಿಕಾರವಾಗುವುದಿಲ್ಲ ಮತ್ತು ಕಾರನೀತಿಯ ವಿಷಯದಲ್ಲಿ ಕಾರ್ಯಾಂಗಕ್ಕೆ ನಿರ್ದೇಶಿಸಲು ಅಥವಾ ಸಲಹೆ ನೀಡಲು ಸಂವಿಧಾನವು ನ್ಯಾಯಾಲಯಕ್ಕೆ ಅನುಮತಿ ನೀಡುವುದಿಲ್ಲ.ಕಾರ್ಯನೀತಿ ನಿರ್ಣಯಗಳ ಅಥವಾ ಸರ್ಕಾರವು ನಿರ್ದೇಶನದ ಅನುಷ್ಠಾನದ ವಿಷಯದಲ್ಲಿ ಮೂಲಭೂತ ಹಕ್ಕಿನ ಉಲ್ಲಂಘನೆಯಾಗಿದೆ ಎಂಬುದನ್ನು ತೋರಿಸದವರೆಗೆ, ನ್ಯಾಯಾಲಯಗಳು ಹಸ್ತಕ್ಷೇಪ ಮಾಡುವ ಸಂದರ್ಭಗಳೇ ಇರುವುದಿಲ್ಲ ' ಎಂದು ನಿರ್ಣಯಿಸಲಾಗಿದೆ.ಮಾನ್ಯ ಸರ್ವೋಚ್ಚ ನ್ಯಾಯಾಲಯವು ವಿಧಿಸಿದ ಸದರಿ ನಿಯಮದೊಂದಿಗೆ ಈ ಚ ನ್ಯಾಯಾಲಯವು ಯಾವುದೇ ವಿರೋಧವನ್ನು

ಹೊಂದಿರುವುದಿಲ್ಲ.ಅಧಿನಿಯಮದ 15 ( 1) (ಬಿ) ಪ್ರಕರಣದ ಅಡಿಯಲ್ಲಿ ಮಾನ್ಯ ಅಡ್ವಕೇಟ್ ಜನರು ನಿರ್ವಹಿಸಿದ ಸಾಂವಿಧಾನಿಕ ಪ್ರಕಾರವನ್ನು ಕುರಿತು ಮಾತ್ರವೇ ಪ್ರಸ್ತುತ ರಿಟ್ ಅರ್ಜಿಯಲ್ಲಿ ಪ್ರಶ್ನಿಸಲಾಗಿದ್ದು, ಅವರು ಹೊರಡಿಸಿದ ಆದೇಶವು ಸಮ ೦ ಜಸ ಕಾರಣಗಳನ್ನಾಧರಿಸಿದೆಯೇ ಎಂಬುದನ್ನು ನೋಡಬೇಕಿದೆ.ಆದುದರಿಂದ, ಸದರಿ ತೀರ್ಪು, ಪ್ರಸ್ತುತ ಮೊಕದ್ದಮೆಯ ಸಂಗತಿಗಳಿಗೆ ಮತ್ತು ಸಂದರ್ಭಗಳಿಗೆ ಅನ್ವಯವಾಗುವುದಿಲ್ಲ.

39, 3 ನೇ ಮತ್ತು 4 ನೇ ಎದುರುದಾರರ ಪರ ಮಾನ್ಯ ನ್ಯಾಯವಾದಿಗಳು ಅವಲಂಬಿಸಿದ ದೆಹಲಿಯ ಎನ್.ಸಿ.ಟಿ. ರಾಜ್ಯ ಮತ್ತು ಇನ್ನೊಬ್ಬರು ವಿರುದ್ಧ ಸಂಜೀವ್ ಅಅಯಾಸ್ ಬಿಟ್ಟೂ (ಮೇಅನಂತೆ) ಮೊಕದ್ದಮೆಯ ಮತ್ತೊಂದು ತೀರ್ಪಿನಲ್ಲಿ, ಕಾನೂನುಬಾಹಿರತೆ, ಅತಾರ್ಕಿಕತೆ ಮತ್ತು ಪ್ರಕ್ರಿಯಾ ಅನೌಚಿತ್ಯತೆಯ ಕಾರಣದ ಮೇಲೆ ಮಾತ್ರವೇ ನ್ಯಾಯಿಕ ಪರಿಶೀಲನೆ ಮಾಡಲಾಗುತ್ತದೆಂದು ಮಾನ್ಯ ಸರ್ವೋಚ್ಚ ನ್ಯಾಯಾಲಯವು ಅಭಿಪ್ರಾಯಪಟ್ಟಿದೆ.ಒಪ್ಪಿಕೊಂಡಂತೆ, ಪ್ರಸ್ತುತ ಮೊಕದ್ದಮೆಯಲ್ಲಿ, ಸುಸಂಗತ ದಾಖಲೆಗಳ ಮತ್ತು ಸುಂಗತ ಸಂಗತಿಗಳ ಪರಿಶೀಲನೆಯಾಗದಿರುವುದರಿಂದ, ಮಾನ್ಯ ಅಡ್ವಕೇಟ್ ಜನರಲ್ -1 ನೇ ಎದುರುದಾರರು ಹೊರಡಿಸಿದ ಆದೇಶವು ಸಕಾರಣ ಆದೇಶವಲ್ಲ.ಯಾವುದೇ ಕಾರಣಗಳನ್ನು ನೀಡದೆ ಮತ್ತು ದೂರಿನಲ್ಲಿ ಮಾಡಿದ ವಾದಗಳ ಪುನರುಚ್ಚರಣೆಯ ಹೊರತಾಗಿ, ನಿರುಪಾಧಿಕವಾಗಿ ಯಾವುದೇ ಸ್ವತಂತ್ರ ಕಾರಣವಿಲ್ಲ.ಆದುದರಿಂದ, ಮಾನ್ಯ ಅಡ್ವಕೇಟ್ ಜನರು ಹೊರಡಿಸಿದ ಆದೇಶಕ್ಕೆ ಯಾವುದೇ ಆಧಾರವಿಲ್ಲ, ಅತಾರ್ಕಿಕತೆ ಮತ್ತು ಪಕ್ರಿಯಾ ಅನೌಚಿತ್ಯತೆಯಿಂದ ಕೂಡಿದೆ.ಆದುದರಿಂದ, ಪ್ರಸ್ತುತ ಮೊಕದ್ದಮೆಯ ಸಂಗತಿಗಳಿಗೆ ಮತ್ತು ಸಂದರ್ಭಗಳಿಗೆ ಸದರಿ ತೀರ್ಪು ಅನ್ವಯವಾಗುವುದಿಲ್ಲ.

40, 3 ನೇ ಮತ್ತು 4 ನೇ ಎದುರುದಾರರ ಪರ ಮಾನ್ಯ ನ್ಯಾಯವಾದಿಗಳು ಅವಲಂಬಿಸಿದ ಉತ್ತರ ಪ್ರದೇಶ ರಾಜ್ಯ ಮತ್ತು ಇನ್ನೊಬ್ಬರು ವಿರುದ್ಧ-ಜೋಹಿ ಮಲ್ (ಮೇಅನಂತೆ) ಮೊಕದ್ದಮೆಯಲ್ಲಿನ ಮೊತ್ತೊಂದು ತೀರ್ಪಿನಲ್ಲಿ, ಮಾನ್ಯ ಸರ್ವೋಚ್ಚ ನ್ಯಾಯಾಲಯವು, ನ್ಯಾಯಿಕ ಪರಿಶೀಲನೆಯ ವ್ಯಾಪ್ತಿಯು ಅತ್ಯಂತ ಚ ಪರಿಮಿತವಾಗಿದೆ.ಮಾನ್ಯ ಸರ್ವೋಚ್ಚ ನ್ಯಾಯಾಲಯವು ವಿಧಿಸಿದ ನಿಯಮದೊಂದಿಗೆ ಈ ನ್ಯಾಯಾಲಯವು ಯಾವುದೇ ವಿರೋಧ ಹೊಂದಿರುವುದಿಲ್ಲ.ಮಾನ್ಯ ಅಡ್ವಕೇಟ್ ಜನರು ಸಕಾರಣವಲ್ಲದ ಆದೇಶವನ್ನು ಹೊರಡಿಸಿದ್ದಾರೆ ಎಂಬ ಸಂಗತಿಯ ದೃಷ್ಟಿಯಿಂದ, ನ್ಯಾಯಾಲಯದ ಪ್ರಕ್ರಿಯೆಯನ್ನು ದುರುಪಯೋಗಪಡಿಸಿಕೊಳ್ಳುವ ಕ್ಷುಲ್ಲಕ ವ್ಯಾಜ್ಯದಿಂದ ನ್ಯಾಯಾಲಯದ ಘನತೆಯನ್ನು ಕಾಪಾಡಿಕೊಳ್ಳುವ ದೃಷ್ಟಿಯಿಂದ ಮಾತ್ರವೇ ಈ ನ್ಯಾಯಾಲಯವು ಹಸ್ತಕ್ಷೇಪ ಮಾಡಿದೆ.ಆದುದರಿಂದ, ಪ್ರಸ್ತುತ ಮೊಕದ್ದಮೆಯ ಸಂಗತಿಗಳಿಗೆ ಮತ್ತು ಸಂದರ್ಭಗಳಿಗೆ ಸದರಿ ತೀರ್ಪು ಅನ್ವಯವಾಗುವುದಿಲ್ಲ.

41. ಮಾನ್ಯ ನ್ಯಾಯವಾದಿಗಳು ಅವಲಂಬಿಸಿದ ಬಾಳ್ ಠಾಕ್ರೆ -ವಿರುದ್ಧ-ಹರೀಶ್ ಪಿಂಪಲ್ಖುಟೆ ಮತ್ತು ಇನ್ನೊಬ್ಬರು ಮೊಕದ್ದಮೆಯಲ್ಲಿ ಮತ್ತು ಮೇಲೆ ಹೇಳಿದ ಇನ್ನೊಂದು ಮೊಕದ್ದಮೆಯಲ್ಲಿ, ಮಾನ್ಯ ಸರ್ವೋಚ್ಚ ನ್ಯಾಯಾಲಯವು, 4 ನೇ ಚ ಮತ್ತು 5 ನೇ ಕಂಡಿಕೆಗಳಲ್ಲಿ, ಸಾಲಿಸಿಟರ್ ಜನರಲ್/ಅಡ್ವಕೇಟ್ ಜನರಲ್ರು ದಾಖಲಿಸಿದ ಯುಕ್ತ ಕಾರಣಗಳಿರಬೇಕೆಂದು ಹೇಳಲಾದ ದುಡಾ ಮೊಕದ್ದಮೆಯನ್ನು ಅಂತಿಮವಾಗಿ ಎತ್ತಿಹಿಡಿಯಿತು.ದುಡಾ ಮೊಕದ್ದಮೆಯಲ್ಲಿ, ಈರ್ವರು ಮಾನ್ಯ ನ್ಯಾಯಾಧೀಶರು ತಮ್ಮ ಕಾರಣಗಳನ್ನು ಪ್ರತ್ಯೇಕವಾಗಿ ನೀಡಿದರಾದರೂ, ಸದರಿ ತೀರ್ಪಿನ 38 ನೇ ಮತ್ತು 40 ನೇ ಕಂಡಿಕೆಗಳನ್ನು ಒಟ್ಟುಗೂಡಿಸುವಾಗ, ' ನ್ಯಾಯಾಲಯದ ಗಮನಕ್ಕೆ ತರುವ ಹಕ್ಕು, ಅಟಾರ್ನಿ ಜನರಲ್ರು ಅಥವಾ ಸಾಲಿಸಿಟರ್ ಜನರು ನೀಡುವ

ಸಮ್ಮತಿಯನ್ನಾಧರಿಸಿರುತ್ತದೆ ಹಾಗೂ ಆ ಸಮ್ಮತಿಯನ್ನು ಕಾರಣಗಳಿಲ್ಲದೆ ಅಥವಾ ಅಧಿನಿಯಮದ 15 ನೇ ಪ್ರಕರಣದ ಅಡಿಯಲ್ಲಿ ಯಾರೇ ಇತರ ವ್ಯಕ್ತಿಗೆ ನೀಡಿದ ಆ ಹಕ್ಕನ್ನು ಪರಿಗಣಸದೆ ತಡೆಹಿಡಿದರೆ, ಅದನ್ನು ನ್ಯಾಯಾಲಯಕ್ಕೆ ಸಲ್ಲಿಸಿದ ಅರ್ಜಿಯಲ್ಲಿ ವಿಚಾರಣೆ ಮಾಡಬಹುದಾಗಿದೆ ' ಎಂದು ದಾಖಲಿಸಿದ್ದಾರೆ.ಆದುದರಿಂದ, ವಾಸ್ತವದಲ್ಲಿ ಸದರಿ ತೀರ್ಪುಗಳನ್ನು, ಎಂದರೆ ಮೇಲೆ ಹೇಳಿದ ಅ ಬಾಳ್ ಠಾಕ್ರೆ ಮತ್ತು ದುಡಾ ಮೊಕದ್ದಮೆಗಳ ತೀರ್ಪುಗಳನ್ನು ಎದುರುದಾರರ ಪರ ಮಾನ್ಯ ನ್ಯಾಯವಾದಿಗಳು ಅವಲಂಬಿಸಿರುವುದು ಅರ್ಜಿದಾರರ ಪರವಾಗಿದ್ದು, ಯಾವುದೇ ರೀತಿಯಲ್ಲೂ ಎದುರುದಾರಿಗೆ ಸಹಾಯಕಾರಿಯಾಗಿರುವುದಿಲ್ಲ.

42. ಇಂದು ತೀರ್ಪಿನ ಉಕ್ತಲೇಖನ ನೀಡುವಾಗ, 3 ನೇ ಮತ್ತು 4 ನೇ ಎದುರುದಾರರ ಪರ ಮಾನ್ಯ ನ್ಯಾಯವಾದಿಗಳು ಕೇರಳ ಉಚ್ಚ ನ್ಯಾಯಾಲಯದ ಮತ್ತು ಬಾಂಬೆ ಉಚ್ಚ ನ್ಯಾಯಾಲಯದ ತೀರ್ಪುಗಳ ಪ್ರತಿಗಳನ್ನು ಹಾಜರುಪಡಿಸಿದ್ದಾರೆ.ಡಾ. ಜೋಸೆಫ್ ಕುಝಿಜಲೀಲ್ -ವಿರುದ್ಧ-ಜೋಸೆಫ್ ಪುಲಕುನೆಲ್ ಅಲಿಯಾಸ್ ಪಿಎಸ್ .23 ಮೊಕದ್ದಮೆಯಲ್ಲಿ, ಆರೋಪಿಸಲಾದ ನಿಂದನೆಯು ಅಧೀನ ನ್ಯಾಯಾಲಯದ್ದಾಗಿದೆ.ಅನುಬಂಧ- ಎ ಯಲ್ಲಿ ಗುರುತಿಸಲಾದ ಕರಪತ್ರದ ಪ್ರಕಟಣೆಯ ಮೂಲಕ, ಮೊದಲನೇ ಪ್ರತಿವಾದಿಯು ನ್ಯಾಯಿಕ ಪ್ರಕ್ರಿಯೆಯ ಯುಕ್ತ ಕ್ರಮಕ್ಕೆ ಬಾಧಕ ತರಲು ಪ್ರಯತ್ನಿಸಿದ್ದು, ಇದು ಅಧಿನಿಯಮದ ಅರ್ಥವ್ಯಾಪ್ತಿಯಲ್ಲಿ ಅಪರಾಧಿಕ ನಿಂದನೆಯಾಗಿತ್ತು ಎಂದು ಕ್ಲೇಮು ಮಾಡಲಾಗಿದೆ.ಆ ಆಧಾರದ ಮೇಲೆ, ಅಧಿನಿಯಮದ ಅಡಿಯಲ್ಲಿ ಕ್ರಮ ತೆಗೆದುಕೊಳ್ಳಲು ಉಲ್ಲೇಖಿಸುವಂತೆ ಸಂಬಂಧಪಟ್ಟ ಅಧೀನ ನ್ಯಾಯಾಲಯಕ್ಕೆ ಮನವಿ ಸಲ್ಲಿಸುವುದಕ್ಕೆ ಬದಲಾಗಿ, ಅರ್ಜಿದಾರನು ನ್ಯಾಯಾಲಯ ನಿಂದನೆ ಅಧಿನಿಯಮದ 15 ನೇ ಪ್ರಕರಣವನ್ನು ಅನ್ವಯಿಸಿ ಅಡ್ವಕೇಟ್ ಜನರಲ್ರವರಿಗೆ ಅರ್ಜಿ ಸಲ್ಲಿಸಿದ್ದನು.ಅಧಿನಿಯಮದ

23. 1999 ( 2) ಎಎಲ್ಟಿ ಸಿಆರ್ಐ 442, 2000 ಸಿಆರ್ಐಎಲ್ಜೆ 1264

15 ನೇ ಪ್ರಕರಣದ ಅಡಿಯಲ್ಲಿ, ಉಚ್ಚ ನ್ಯಾಯಾಲಯವು, ಅಡ್ವಕೇಟ್ ಜನರಲ್ರು ಮಂಡಿಸಿದ ನಿರ್ಣಯವನ್ನಾಧರಿಸಿಯಾಗಲಿ ಅಥವಾ ವಿಚಾರಣಾ ನ್ಯಾಯಾಲಯವು ಮಾಡಿದ ಉಲ್ಲೇಖದ ಆಧಾರದ ಮೇಲಾಗಲಿ, ವಿಚಾರಣಾ ನ್ಯಾಯಾಲಯದ ಅಪರಾಧಿಕ ನಿಂದನೆಯ ಮೇಲೆ ಕ್ರಮ ತೆಗೆದುಕೊಳ್ಳಬಹುದು.ಅಧಿನಿಯಮದ 15 ನೇ ಪ್ರಕರಣವು, ವಿಚಾರಣಾ ನ್ಯಾಯಾಲಯದ ಅಪರಾಧಿಕ ನಿಂದನೆಗೆ ಸಂಬಂಧಿಸಿದಂತೆ ಅಡ್ವಕೇಟ್ ಜನರಲ್ ಮುಂದೆ ವ್ಯಾಜ್ಯಕಾರನು ಅಥವಾ ಯಾರೇ ಇತರ ಸಕ್ಷಮ ವ್ಯಕ್ತಿಯು ಅರ್ಜಿ ಸಲ್ಲಿಸುವುದನ್ನು ಕುರಿತು ಪರ್ಯಾಲೋಚಿಸಿರುವುದಿಲ್ಲವಾದರೂ, ಅಧಿನಿಯಮದ 15 ( 1) ನೇ ಪ್ರಕರಣವು ಸ್ಥೂಲವಾಗಿ ಅಪರಾಧಿಕ ನಿಂದನೆಯ ಮೊಕದ್ದಮೆ ಕುರಿತು ಉಪಬಂಧ ಕಲ್ಪಿಸುತ್ತದೆ.ಅಂಥ ಸಂದರ್ಭಗಳಲ್ಲಿ, ಕೇರಳ ಉಚ್ಚ ನ್ಯಾಯಾಲಯವು, ರಿಟ್ ಅರ್ಜಿಯು ಚ ಸಮರ್ಥನೀಯವಾಗಿಲ್ಲವೆಂದು ಅಭಿಪ್ರಾಯಪಟ್ಟಿತ್ತು.ಒಪ್ಪಿಕೊಂಡಿರುವಂತೆ ಪ್ರಸ್ತುತ ಮೊಕದ್ದಮೆಯಲ್ಲಿ, ಅಧಿನಿಯಮದ 15 ( 1) (ಬಿ) ಪ್ರಕರಣದ ಅಡಿಯಲ್ಲಿ ಅರ್ಜಿದಾರರು ಸಲ್ಲಿಸಿದ ಅರ್ಜಿಯನ್ನು ಗಮನ ಹರಿಸದೆ ಮತ್ತು ಯಾವುದೇ ಕಾರಣಗಳನ್ನು ನೀಡದೆ ತಿರಸ್ಕರಿಸಲಾಗಿದೆ.ಆದುದರಿಂದ, ಸದರಿ ತೀರ್ಪು ಪ್ರಸ್ತುತ ಮೊಕದ್ದಮೆಯ ಸಂಗತಿಗಳು ಮತ್ತು ಸಂದರ್ಭಗಳಿಗೆ ಅನ್ವಯವಾಗುವುದಿಲ್ಲ.

43. ಅಪರಾಧಿಕ ನಿಂದನಾ ಅರ್ಜಿಸಂಖ್ಯೆ: 5/2012,ದಿನಾಂಕ: 04.02.2013 ರಲ್ಲಿ, ಬಾಂಬೆ ಉಚ್ಚ ನ್ಯಾಯಾಲಯವು ನೀಡಿದ ನಿರ್ಣಯವನ್ನು ಸಹ ಮಾನ್ಯ ನ್ಯಾಯವಾದಿಗಳು ಅವಲಂಬಿಸಿದ್ದು, ಅದರಲ್ಲಿ

ಬಾಂಬೆ ಉಚ್ಚ ನ್ಯಾಯಾಲಯವು, ಮೇಲೆ ಹೇಳಿದ ಪಿ.ಎನ್. ದುಡಾ -ವಿರುದ್ಧ ಶಿವ ಶಂಕರ್ ಮತ್ತು ಇತರರು ಹಾಗೂ ಬಾಳ್ ಠಾಕ್ರೆ -ವಿರುದ್ಧ ಹರೀಶ್ ಪಿಂಪಲ್ಖುಟೆ ಮತ್ತು ಇತರರು ಮೊಕದ್ದಮೆಗಳಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಪ್ರಾಸ್ತಾವಿಕ ಅ ಚ ತೀರ್ಪನ್ನು ಅವಲಂಬಿಸಿ, ಸದರಿ ಮೊಕದ್ದಮೆಯಲ್ಲಿ ಒಪ್ಪಿಕೊಂಡಿರುವಂತೆ ಅಡ್ವಕೇಟ್ ಜನರು ಸಮ್ಮತಿ ನೀಡಲು ನಿರಾಕರಿಸಿದ್ದಾರೆ ಮತ್ತು ಅದಕ್ಕಾಗಿ ಅವರು ಈ ಮುಂದಿನ ಕಾರಣಗಳನ್ನು ದಾಖಲಿಸಿದ್ದಾರೆ ಎಂಬ ನಿರ್ಣಯಕ್ಕೆ ಬಂದಿತು:

" ಸುದ್ದಿ ವರದಿಗಳನ್ನು ನೀವು ಆರೋಪಿಸಿದಂತೆ ಭಾವಿಸಿದರೂ, ನ್ಯಾಯಾಲಯವನ್ನು ದೂಷಿಸಿದೆ ಅಥವಾ ಅದು ಯಾವುದೇ ನ್ಯಾಯಾಲಯದ ಅಧಿಕಾರವನ್ನು ಅಗೌರವಗೊಳಿಸಿದೆ ಅಥವಾ ಅದು ನ್ಯಾಯ ನೀಡಿಕೆಯಲ್ಲಿ ಹಸ್ತಕ್ಷೇಪ ಮಾಡಿದೆ ಅಥವಾ ಯಾವುದೇ ನ್ಯಾಯಿಕ ಪ್ರಕ್ರಿಯೆಗೆ ಬಾಧಕವನ್ನುಂಟು ಮಾಡಿದೆ ಅಥವಾ ನ್ಯಾಯ ನೀಡಿಕೆಗೆ ಭಂಗ ತಂದಿದೆ ಅಥವಾ ಯಾವುದೇ ಪೂರ್ವನಿರ್ಧಾರಡೆಗೆ ಒಲವು ಹೊಂದಿದೆ ಎಂಬ ಆರೋಪವಿಲ್ಲವಾದ್ದರಿಂದ ಅಪರಾಧಿಕ ನಿಂದನಾ ವ್ಯವಹರಣೆಗಳನ್ನು ಪ್ರಾರಂಭಿಸಲು ನಾನು ಸಮ್ಮತಿ ನೀಡಲಾಗುವುದಿಲ್ಲ.ಯಾವುದೇ ಆರೋಪಗಳು ಅಪರಾಧಿಕ ನಿಂದನೆಯ ಮೊಕದ್ದಮೆಯನ್ನು ಸಮರ್ಥಿಸುವುದಿಲ್ಲ. "

ಆ ಸಂದರ್ಭದ ಮೇರೆಗೆ, ನೀಡಲಾದ ಕಾರಣಗಳನ್ನು ನ್ಯಾಯಾಲಯವು ಒಪ್ಪಿಕೊಂಡಿದ್ದು, ರಿಟ್ ಅರ್ಜಿಯು ಸಮರ್ಥನೀಯವಲ್ಲವೆಂದು ನಿರ್ಣಯಿಸಿದೆ.ಮಾನ್ಯ ಅಡ್ವಕೇಟ್ ಜನರಲ್ರು ಸ್ಪಷ್ಟ ಮಾತುಗಳಲ್ಲಿ, ನ್ಯಾಯಾಲಯವನ್ನು ದೂಷಿಸುವ ಅಥವಾ ಅದು ಯಾವುದೇ ನ್ಯಾಯಾಲಯದ ಅಧಿಕಾರವನ್ನು ಅಗೌರಿಸುವ ಅಥವಾ ನ್ಯಾಯ ನೀಡಿಕೆಯಲ್ಲಿ ಹಸ್ತಕ್ಷೇಪ ಮಾಡಿದ ಅಥವಾ ಯಾವುದೇ ನ್ಯಾಯಿಕ ವ್ಯವಹರಣೆಯನ್ನು ಬಾಧಕಗೊಳಿಸಿದ ಅಥವಾ ನ್ಯಾಯ ನೀಡಿಕೆಗೆ ಅಡಚಣೆ ಉಂಟು ಮಾಡಿದ ಯಾವುದೇ ಆರೋಪವಿಲ್ಲವೆಂದು ಹೇಳಿರುವ ದುಡಾ ಮತ್ತು ಠಾಕ್ರೆ ಮೊಕದ್ದಮೆಯ ತೀರ್ಪುಗಳನ್ನು ಅವಲಂಬಿಸಿ ಬಾಂಬೆ ಉಚ್ಚ ನ್ಯಾಯಾಲಯವು ಚ ವಿಧಿಸಿದ ನಿಯಮದೊಂದಿಗೆ ಈ ನ್ಯಾಯಾಲಯವು ಯಾವುದೇ ಆಕ್ಷೇಪವನ್ನು ಹೊಂದಿರುವುದಿಲ್ಲ.ಯಾವುದೇ ಆರೋಪವು ಅಪರಾಧಿಕ ನಿಂದನೆಯ ಮೊಕದ್ದಮೆಯನ್ನು ಸಮರ್ಥಿಸುವುದಿಲ್ಲ.ಆದುದರಿಂದ, ಅದರಲ್ಲಿನ ದೂರು ಯಾವುದೇ ಮೊಕದ್ದಮೆಯನ್ನು ಸಮರ್ಥಿಸುವುದಿಲ್ಲ ಹಾಗೂ ಅಂಥ ಸಂದರ್ಭಗಳಲ್ಲಿ, ರಿಟ್ ಅರ್ಜಿಯು ಸಮರ್ಥನೀಯವಲ್ಲವೆಂದು ಬಾಂಬೆ ಉಚ್ಚ ನ್ಯಾಯಾಲಯವು ಅಭಿಪ್ರಾಯಪಟ್ಟಿದೆ.ಪ್ರಸ್ತುತ ಮೊಕದ್ದಮೆಯಲ್ಲಿ ಒಪ್ಪಿಕೊಂಡಿರುವಂತೆ, ಮಾನ್ಯ ಅಡ್ವಕೇಟ್ ಜನರಲ್ರು ಸುಸಂಗತ ಸಂಗತಿಗಳ ಮತ್ತು ಪಶ್ಚಿತ ಆದೇಶವನ್ನು ಹೊರಡಿಸುವ ಮೊದಲು ದೂರುದಾರನು ಅವಲಂಬಿಸಿದ ತೀರ್ಪುಗಳ ಕಡೆಗೆ ಗಮನ ಹರಿಸಿಲ್ಲ.ನಿರುಪಾಧಿಕವಾಗಿ, ಅಧಿನಿಯಮದ 15 ನೇ ಪ್ರಕರಣದ ಉಪಬಂಧಗಳ ಮೇರೆಗೆ ಪದ್ಯಾಲೋಚಿಸಿರದ ವಾದದ ನಿರಾಕರಣೆಗೆ ಸಂಬಂಧಿಸಿದಂತೆ ಅರ್ಜಿಯನ್ನು ಸಲ್ಲಿಸಲು ದೂರುದಾರನಿಗೆ ಸಲಹೆ ನೀಡಿರುವುದನ್ನು ಹೊರತುಪಡಿಸಿ, ಬೇರಾವುದೇ ಕಾರಣಗಳನ್ನು ನೀಡಿಲ್ಲ.ಆದುದರಿಂದ, ಪ್ರಸ್ತುತ ಮೊಕದ್ದಮೆಯ ಸಂಗತಿಗಳಿಗೆ ಮತ್ತು ಸಂದರ್ಭಗಳಿಗೆ ಸಹ ಸದರಿ ತೀರ್ಪು ಅನ್ವಯವಾಗುವುದಿಲ್ಲ.

V.ಮುಕ್ತಾಯ:

44. ಮೇಲೆ ಹೇಳಿದ ಕಾರಣಗಳ ಹಿನ್ನೆಲೆಯಲ್ಲಿ, ಮಾನ್ಯ ಅಡ್ವಕೇಟ್ ಜನರಲ್ -1 ನೇ ಪ್ರತಿವಾದಿಗಳು, ದಾಖಲೆಯಲ್ಲಿನ ಸಾಕ್ಷ್ಯವನ್ನು ಪರಿಶೀಲಿಸದೆ ಅಥವಾ ಯಾವುದೇ ಕಾರಣವನ್ನು ನೀಡದೆ ಮತ್ತು ಕೇವಲ ಸಲಹೆ

ನೀಡಿ ಹೊರಡಿಸಿದ ಪ್ರಶ್ನಿತ ಆದೇಶವು, ಅಧಿನಿಯಮದ 15 ( 1) (ಬಿ) ಪ್ರಕರಣದ ಅಡಿಯಲ್ಲಿ ಪರ್ಯಾಲೋಚಿಸಿದಂತೆ ಸಮ್ಮತಿಯಾಗುವುದಿಲ್ಲ.ಅಧಿನಿಯಮದ 15 ( 1) (ಬಿ) ಪ್ರಕರಣದ ಉಪಬಂಧಗಳ ಅಡಿಯಲ್ಲಿ ಸಾಂವಿಧಾನಿಕ ಪ್ರಾಧಿಕಾರವಾಗಿ ನ್ಯಾಯಾಲಯಯಕ್ಕೆ ಸಲಹೆ ನೀಡುವ ತಮ್ಮ ಪ್ರಕಾರಗಳನ್ನು ಅವರು ನಿರ್ವಹಿಸಿಲ್ಲ.ಯಾವುದೇ ಕಾರಣ ಅಥವಾ ಸಮ್ಮತಿ ನೀಡದಿರುವುದನ್ನು ಅರ್ಜಿದಾರರು ಸಮರ್ಥಿಸಿದ್ದಾರೆಯೇ ಎಂಬುದನ್ನು ದಾಖಲೆಯಲ್ಲಿನ ಎಲ್ಲ ಸಾಕ್ಷ್ಯವನ್ನು ಗಮನಕ್ಕೆ ತೆಗೆದುಕೊಂಡು ಪರೀಕ್ಷಿಸಬೇಕಿತ್ತು ಮತ್ತು ಸಕಾರಣ ಆದೇಶವನ್ನು ಹೊರಡಿಸಲು ತಮ್ಮ ಅಭಿಪ್ರಾಯವನ್ನು ನೀಡಬೇಕಿತ್ತು.ಅಧಿನಿಯಮದ 15 ( 1) (ಬಿ) ಪ್ರಕರಣದ ಉಪಬಂಧಗಳ ಅಡಿಯಲ್ಲಿ ಪರ್ಯಾಲೋಚಿಸಿದಂತೆ ಪಕ್ಷಕಾರರಿಗೆ ಸಲಹೆ ನೀಡುವುದು ಸಮ್ಮತಿಯಾಗುವುದಿಲ್ಲ ಹಾಗೂ ಮಾನ್ಯ ಅಡ್ವಕೇಟ್ ಜನರು ಅರ್ಜಿಯನ್ನು ತಿರಸ್ಕರಿಸಿರುವುದನ್ನು ಸಮರ್ಥಿಸಿಕೊಂಡಿಲ್ಲ.ಆದುದರಿಂದ, ಮಾನ್ಯ ಅಡ್ವಕೇಟ್ ಜನರಲ್ -1 ನೇ ಪ್ರತಿವಾದಿಗಳು ಹೊರಡಿಸಿದ ಪ್ರಶ್ನಿತ ಆದೇಶವನ್ನು ಎತ್ತಿ ಹಿಡಿಯಲಾಗುವುದಿಲ್ಲ.

45. ಮೇಲೆ ಹೇಳಿದ ಕಾರಣಗಳಿಗಾಗಿ, 1 ನೇ ಪ್ರತಿವಾದಿ-ಮಾನ್ಯ ಅಡ್ವಕೇಟ್ ಜನರಲ್ಲು, ಅಧಿನಿಯಮದ 15 ( 1) (ಬಿ) ಪ್ರಕರಣದ ಮೇರೆಗೆ ವಾದಗಳನ್ನು, ದಸ್ತಾವೇಜುಗಳನ್ನು ಮತ್ತು ಕಾರಣಗಳನ್ನು ಪರೀಕ್ಷಿಸದೆಯೇ ಅರ್ಜಿದಾರರ ಅರ್ಜಿಯನ್ನು ತಳ್ಳಿ ಹಾಕಿರುವುದನ್ನು ಸಮರ್ಥಿಸಿಕೊಂಡಿಲ್ಲವೆಂದು ನಿರ್ಣಯಿಸಿ, ಪ್ರಸ್ತುತ ರಿಟ್ ಅರ್ಜಿಯಲ್ಲಿ ಎತ್ತಿದ ಪ್ರಶ್ನೆಗೆ ನಕಾರಾತ್ಮಕವಾಗಿ ಉತ್ತರಿಸಲಾಗಿದೆ.

46. ಮೇಲಿನ ಅಭಿಪ್ರಾಯಗಳ ಹಿನ್ನೆಲೆಯಲ್ಲಿ, ರಿಟ್ ಅರ್ಜಿಯನ್ನು ಪುರಸ್ಕರಿಸಲಾಗಿದೆ.ಅನುಬಂಧ-ಎಸ್ ಪ್ರಕಾರ, ಮಾನ್ಯ ಅಡ್ವಕೇಟ್ ಜನರಲ್ 1 ನೇ ಪ್ರತಿವಾದಿಗಳು ಹೊರಡಿಸಿದದಿನಾಂಕ: 14.12.2012 ರ ಪ್ರಶ್ನಿತ ಆದೇಶವನ್ನು ಈ ಮೂಲಕ ರದ್ದುಗೊಳಿಸಲಾಗಿದೆ.ವಾದಗಳ ಸಂಬಂಧದಲ್ಲಿ ಮರು-ಪರಿಗಣನೆಗಾಗಿ ಮತ್ತು ದಾಖಲೆಯಲ್ಲಿರುವ ಎಲ್ಲ ಸಾಕ್ಷ್ಯವನ್ನು ಪರಿಶೀಲಿಸುವುದಕ್ಕಾಗಿ ಹಾಗು ಕಾನೂನಿನಗನುಸಾರವಾಗಿ ಸೂಕ್ತ ಆದೇಶವನ್ನು ಹೊರಡಿಸುವ ಸಲುವಾಗಿ ಮಾನ್ಯ ಅಡ್ವಕೇಟ್ ಜನರಲ್ -1 ನೇ ಪ್ರತಿವಾದಿಗಳಿಗೆ ವಿಷಯವನ್ನು ಹಿಂದಿರುಗಿಸಲಾಗಿದೆ.ಮಾನ್ಯ ಅಡ್ವಕೇಟ್ ಜನರಲ್ಲು, ಈ ನ್ಯಾಯಾಲಯದ ಯಾವುದೇ ಅಭಿಪ್ರಾಯದಿಂದ ಪ್ರಭಾವಿತರಾಗದೆ ಮತ್ತು ಮೇಲೆ ಹೇಳಿದ ಮಾನ್ಯ ಸರ್ವೋಚ್ಚ ನ್ಯಾಯಾಲಯವು ವಿಧಿಸಿದ ನಿಯಮಗಳನ್ನು ಗಮನದಲ್ಲಿರಿಸಿಕೊಂಡು, ಕಾನೂನಿಗನುಸಾರವಾಗಿ ಸಕಾರಣ ಆದೇಶವನ್ನು ಕಡ್ಡಾಯವಾಗಿ ಹೊರಡಿಸತಕ್ಕದ್ದು.

ತದನುಸಾರ ಆದೇಶವನ್ನು ಹೊರಡಿಸಲಾಗಿದೆ.